# ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸ ಪತ್ರಿಕೆ

# Karnataka Scout & Guide

Monthly Magazine

| Vol -66 | Issue-01 | January 2025 | Pages: 36 | Annual Subscription: ₹ 100/- |
| --- | --- | --- | --- | --- |
| ಸಂಪುಟ: 66 | ಸಂಚಿಕೆ: 01 | ಜನವರಿ 2025 | ಪುಟಗಳು: 36 | ವಾರ್ಷಿಕ ಚಂದ ರೂ. 100/- |





ಜನವರಿ 13, 2025 ರಂದು ರಾಜ್ಯ ಕೇಂದ್ರ ಕಛೇರಿ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ 'ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ' ಪ್ರಯುಕ್ತ 'ಯುವದಿನಾಚರಣೆ ಹಾಗೂ ಸಂಕ್ರಾಂತಿ ಸಂಭ್ರಮ' ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ್ ಅವರು ಸ್ವಾಮಿ ವಿವೇಕಾನಂದರ ವೇಷಗಳನ್ನು ಧರಿಸಿದ್ದ ಸ್ಕೌಟ್ಸ್-ಗೈಡ್ಸ್‌ಗಳೊಂದಿಗೆ ಸಂಭ್ರಮಿಸಿದರು. ಚಿತ್ರದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಗುಬ್ಬಿಗೂಡು ರಮೇಶ್ ರಾಜ್ಯ ಪದಾಧಿಕಾರಿಗಳಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಶ್ರೀ ಕೆ. ಗಂಗಪ್ಪಗೌಡ, ಶ್ರೀ ಎಂ.ಎ. ಖಾಲಿದ್, ಶ್ರೀಮತಿ ಗೀತಾ ನಟರಾಜ್ ಶ್ರೀಮತಿ ಬಿ.ವಿ. ರಾಮಲತಾ, ಶ್ರೀ ಬಿ.ಕೆ. ಬಸವರಾಜ, ಶ್ರೀ ಎಂ.ಎ. ಚೆಲ್ಲಯ್ಯ, ಶ್ರೀ ಎಂ.ಎಸ್. ಸತೀಶ್, ಶ್ರೀ ಎಲ್.ಟಿ. ಲೋಕೇಶ್ ಶ್ರೀಮತಿ ಸಿ. ಮಂಜುಳಾ ಮತ್ತು ಇತರರು ಉಪಸ್ಥಿತರಿದ್ದರು.



ಜನವರಿ 24 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಕರ್ನಾಟಕದ ಘನತೆವೆತ್ತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಲ್ಹೋಟ್ ಅವರನ್ನು ರಾಜಭವನದಲ್ಲಿ ಭೇಟಿ ಮಾಡಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯದ ಪ್ರಗತಿಪುರ ಸ್ಕೌಟ್–ಗೈಡ್ ಚಟುವಟಿಕೆಗಳ ಬಗ್ಗೆ ವರದಿ ಸಲ್ಲಿಸಿ ರಾಜ್ಯ ಪುರಸ್ಕಾರ ರ‍್ಯಾಲಿ ದಿನಾಂಕದ ಬಗ್ಗೆ ಮನವಿ ಸಲಿಸಲ್ಲಿಸಿದರು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಕೆ. ಗಂಗಪ್ಪಗೌಡ, ರಾಜ್ಯಪಾಲರ ಎಡಿಸಿ ಯವರಾದ ಶ್ರೀ ಸಂದೀಪ್ ಶರ್ಮ ಮತ್ತು ವಿಶೇಷ ಕರ್ತವ್ಯಾಧಿಕಾರಿ ಶ್ರೀ ಶಂಕರ್‌ಲಾಲ್ ಗುಜೆರ್ ಹಾಗೂ ಪಿ.ಆರ್.ಒ. ಶ್ರೀ ಜಯರಾಮಯ್ಯ ಇವರುಗಳು ಉಪಸ್ಥಿತರಿದ್ದರು.




ಜನವರಿ 13 ರಂದು ರಾಜ್ಯ ಕೇಂದ್ರ ಕಛೇರಿಯಲ್ಲಿ ನಡೆದ ‘ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ’ ಪ್ರಯುಕ್ತ ‘ಯುವ ದಿನಾಚರಣೆ ಹಾಗೂ ಸಂಕ್ರಾಂತಿ ಸಂಭ್ರಮ’ ಕಾರ್ಯಕ್ರಮದ ಉದ್ಘಾಟನೆಯನ್ನು ಪೂಜ್ಯ ಶ್ರೀ ಜಪಾನಂದ ಮಹಾರಾಜರು, ಅಧ್ಯಕ್ಷರು, ಶ್ರೀ ರಾಮಕೃಷ್ಣ ಸೇವಾಶ್ರಮ, ಪಾವಗಡ ಇವರು ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ನೆರವೇರಿಸಿದರು. ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಗುಬ್ಬಿಗೂಡು ರಮೇಶ್, ಸಹಾಯಕ ರಾಜ್ಯ ಆಯುಕ್ತ ಶ್ರೀ ಬಿ.ಕೆ. ಬಸವರಾಜ ಹಾಗೂ ರಾಜ್ಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು.





2025ರ ಜನವರಿ 26ರಂದು 76ನೇ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಶಾಲಾ ಶಿಕ್ಷಣ ಇಲಾಖೆ ಕಛೇರಿ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ನೆರವೇರಿಸಲಾಯಿತು. ಡಾ॥ ಕೆ.ವಿ. ತ್ರಿಲೋಕ್ ಚಂದ್ರ, ಭಾ.ಆ.ಸೇ., ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಅವರು ಧ್ವಜಾರೋಹಣವನ್ನು ನೆರವೇರಿಸಿ, ಶುಭಕೋರಿದರು. ಈ ಸಂದರ್ಭದಲ್ಲಿ ಶ್ರೀ ಕೃಷ್ಣಾಜಿ ಎಸ್. ಕರಿಚೆಣ್ಣವರ, ನಿರ್ದೇಶಕರು(ಪ್ರೌಢ ಶಿಕ್ಷಣ), ಡಾ॥ ಸಿಪ್ರಿಯನ್ ಮೊಂತೇರೊ, ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಶ್ರೀಮತಿ ವಿಜಯ ಈ ರವಿಕುಮಾರ್, ಕ.ಆ.ಸೇ., ಜಂಟಿ ನಿರ್ದೇಶಕರು(ಆಡಳಿತ) ಮತ್ತು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಸ್ಕೌಟ್ಸ್–ಗೈಡ್ಸ್ ರಾಜ್ಯ ಸಂಸ್ಥೆಯ ಸಿಬ್ಬಂದಿಗಳು ಹಾಗೂ ಶ್ರೀ ಭಕ್ತೇಶ್, ರೋವರ್ ಸ್ಕೌಟ್ ಲೀಡರ್ ಮತ್ತು ಮಾಗಡಿ ರಸ್ತೆಯ ಬಿಬಿಎಂಪಿ ಪದವಿ ಪೂರ್ವ ಕಾಲೇಜಿನ ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು.



ಚಿಕ್ಕಮಗಳೂರು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಥಸಂಚಲನದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ ಬೀಕನಹಳ್ಳಿ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಸ್ಕೌಟ್ ತಂಡಕ್ಕೆ ಮಾನ್ಯ ಇಂಧನ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀ ಕೆ.ಜೆ. ಜಾರ್ಜ್‌ರವರು ಬಹುಮಾನವನ್ನು ನೀಡಿ ಗೌರವಿಸಿದರು. ಮಾನ್ಯ ಶಾಸಕರಾದ ಶ್ರೀ ಹೆಚ್.ಡಿ. ತಮ್ಮಯ್ಯ, ಉಪಸಭಾಪತಿಗಳಾದ ಶ್ರೀ ಎಂ.ಕೆ. ಪ್ರಾಣೇಶ್, ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಸಿ.ಟಿ. ರವಿ ಮತ್ತು ಶ್ರೀ ಎಸ್.ಎಲ್. ಬೋಜೆಗೌಡ, ಜಿಲ್ಲಾಧಿಕಾರಿಗಳಾದ ಶ್ರೀಮತಿ ಮೀನಾ ನಾಗರಾಜ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಕೀರ್ತನ ಹೆಚ್.ಎಸ್., ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ. ವಿಕ್ರಂ ಅಮಾಟೆ ಇತರರು ಚಿತ್ರದಲ್ಲಿದ್ದಾರೆ.



ತುಮಕೂರು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಪಥಸಂಚಲನದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದ ಅಂಕಿತ ಪ್ರೌಢಶಾಲೆಯ ಸ್ಕೌಟ್ ತಂಡಕ್ಕೆ ಮಾನ್ಯ ಗೃಹ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಜಿ. ಪರಮೇಶ್ವರ ಅವರು ಪಾರಿತೋಷಕ ನೀಡಿ ಗೌರವಿಸಿದರು. ಮಾನ್ಯ ಶಾಸಕರುಗಳಾದ ಶ್ರೀ ಜ್ಯೋತಿ ಗಣೇಶ್ ಮತ್ತು ಶ್ರೀ ಸುರೇಶ್‌ಗೌಡ ಇತರರು ಚಿತ್ರದಲ್ಲಿದ್ದಾರೆ.



ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಥಸಂಚಲನದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ ಸೆಂಟ್ ಪಾಲ್ಸ್ ಶಾಲೆಯ ಗೈಡ್ಸ್ ತಂಡಕ್ಕೆ ಮಾನ್ಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು ಬಹುಮಾನ ನೀಡಿ ಗೌರವಿಸಿದರು. ಮಾನ್ಯ ದಾವಣಗೆರೆ ಲೋಕಸಭಾ ಸದಸ್ಯರಾದ ಡಾ॥ ಪ್ರಭಾ ಮಲ್ಲಿಕಾರ್ಜುನ್, ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀ ದಿನೇಶ್ ಕೆ. ಶೆಟ್ಟಿ ಹಾಗೂ ಕಾರ್ಯದರ್ಶಿ ಶ್ರೀ ರವೀಂದ್ರಸ್ವಾಮಿ ಮತ್ತು ಹಿರಿಯ ಪೋಲೀಸ್ ಅಧಿಕಾರಿಗಳು ಇತರರು ಉಪಸ್ಥಿತರಿದ್ದರು.

**ಪೋಷಕರು**
ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**
ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**
ಕೊಂಡಜ್ಜಿ ಬ. ಷಣ್ಮುಖಪ್ಪ

**ಸಂಪಾದಕರು**
ಕೆ. ಗಂಗಪ್ಪಗೌಡ

**ಸಹಸಂಪಾದಕರು**
ಎನ್. ಶ್ರೀನಿವಾಸನ್

**ಸಂಚಾಲಕರು**
ಬಿ.ಎಸ್. ರವೀಂದ್ರ

**ಸದಸ್ಯರು**
ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

# ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸ ಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 66 Issue: 01 January 2025

## ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...06
ಫೆಬ್ರವರಿ 2025ರ ಮಾಹೆಯ ಕಾರ್ಯಕ್ರಮಗಳ ವಿವರಗಳು ...07
ಸಂಪಾದಕೀಯ ...08
ಪ್ರಥಮ ಕಿತ್ತೂರು ಕರ್ನಾಟಕ ಜಾಂಬೋರೇಟ್ 2025 ...09
ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ, ಯುವ ದಿನಾಚರಣೆ ಮತ್ತು ಸಂಕ್ರಾಂತಿ ಸಂಭ್ರಮ ...12
ಯುವ ಸಮಿತಿ ಸಭೆಯ ವರದಿ ...13
ಕಲ್ಯಾಣ ಕರ್ನಾಟಕ ದ್ವಿತೀಯ ಜಾಂಬೋರೇಟ್ 2025 ...14
76ನೇ ಗಣರಾಜ್ಯೋತ್ಸವ ದಿನಾಚರಣೆ ...19
ಜಿಲ್ಲಾ ವಾರ್ತೆಗಳು ...20
ಹೊರಸಂಚಾರಗಳಿಗೆ ಪ್ರಕೃತಿ ಒಡ್ಡುವ ಸವಾಲುಗಳು-4 ...31
ಶ್ರದ್ಧಾಂಜಲಿ ...32

## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್-ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕರು

080-2226 0017, 2226 7470 | www.bsgkarnataka.org | The Bharat Scouts & Guides-Karnataka



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್–ಗೈಡ್ ಬಂಧುಗಳಿಗೆ ಶುಭಾಶಯಗಳು**

2025ರ ಜನವರಿಯಲ್ಲಿ ನಮ್ಮ ಸಂಸ್ಥೆ ಆಯೋಜಿಸಿದ್ದ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು ನಮ್ಮ ಸ್ಕೌಟಿಂಗ್ ಮತ್ತು ಗೈಡಿಂಗ್ ಚಳುವಳಿಗೆ ಹೊಸ ಪ್ರೇರಣೆ ನೀಡಿವೆ. ಈ ತಿಂಗಳು ಜನವರಿ 7 ರಿಂದ 12 ರವರೆಗೆ ಧಾರವಾಡದಲ್ಲಿ ನಡೆದ ಪ್ರಥಮ ಕಿತ್ತೂರು ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್ ಹಾಗೂ 17 ರಿಂದ 21ರ ವರೆಗೆ ಯಾದಗಿರಿಯಲ್ಲಿ ನಡೆದ ದ್ವಿತೀಯ ಕಲ್ಯಾಣ ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೊರೇಟ್‌ಗಳು ನಿರೀಕ್ಷೆಗೂ ಮೀರಿ ಯಶಸ್ವಿಯಾಗಿವೆ. ಈ ಎರಡೂ ವಿಭಾಗಗಳ ನಮ್ಮ ಜಿಲ್ಲಾ ಸಂಸ್ಥೆಗಳ ಪದಾಧಿಕಾರಿಗಳ ವಿಶಿಷ್ಟ ಆಸಕ್ತಿ, ಪರಿಶ್ರಮ ಮತ್ತು ಬದ್ಧತೆ ಈ ಸಾಧನೆಗೆ ಕಾರಣವಾಗಿವೆ.  ಇದರ ಜೊತೆಗೆ, ಸರ್ಕಾರ, ಶಿಕ್ಷಣ ಇಲಾಖೆ, ಧಾರವಾಡ ಮತ್ತು ಯಾದಗಿರಿ ಜಿಲ್ಲಾಡಳಿತಗಳು, ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಜಿಲ್ಲೆಗಳ ಜನಪ್ರತಿನಿಧಿಗಳು ನೀಡಿದ ಸಹಕಾರ ಮತ್ತು ಪ್ರೋತ್ಸಾಹಕ್ಕೆ ನಮ್ಮ ಸಂಸ್ಥೆ ಆಭಾರಿಯಾಗಿರುತ್ತದೆ. ಸ್ಕೌಟಿಂಗ್ ಗೈಡಿಂಗ್ ಚಳುವಳಿಗೆ ದೊಡ್ಡ ಇತಿಹಾಸವಿರುವ ಧಾರವಾಡದಲ್ಲಿ ಕೇವಲ 40 ದಿನಗಳಲ್ಲಿ ಜಾಂಬೊರೇಟ್ ಆಯೋಜನೆಗೊಂಡು ಯಶಸ್ಸುಗಳಿಸಿರುವುದು ಇತಿಹಾಸದಲ್ಲಿ ದಾಖಲೆಯಾಗಲಿದೆ. ಇನ್ನು ಯಾದಗಿರಿಯ ಜಾಂಬೋರೇಟ್‌ನಲ್ಲಿ ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳೊಂದಿಗೆ ನಡೆದ ವಿವಿಧ ಸಾಂಸ್ಕೃತಿಕ, ಸಾಹಸಮಯ ಮತ್ತು ಮಕ್ಕಳ ವ್ಯಕ್ತಿತ್ವ ರೂಪಿಸಲು ಪೂರಕವಾಗುವಂಥ ಕಾರ್ಯಕ್ರಮಗಳು ಅರ್ಥಪೂರ್ಣವಾಗಿದ್ದವು. ಕಲ್ಯಾಣ ಕರ್ನಾಟಕ ಜಾಂಬೊರೇಟ್‌ನ ಯಶಸ್ಸಿನಲ್ಲಿ, ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪೂರ್ ಅವರು ನೀಡಿದ ಬೆಂಬಲಕ್ಕೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಎರಡೂ ಜಾಂಬೋರೇಟ್‌ಗಳು ಮಕ್ಕಳ ಉತ್ಸಾಹವನ್ನು ಉತ್ತೇಜಿಸುವುದರ ಜೊತೆಗೆ ಪ್ರೇಕ್ಷಕರಲ್ಲಿ ಸಂತೃಪ್ತ ಭಾವನೆಗಳನ್ನು ಹುಟ್ಟುಹಾಕಿವೆ. ನಮ್ಮ ಸಂಸ್ಥೆಗೆ ಭವಿಷ್ಯದಲ್ಲಿ ಇನ್ನಷ್ಟು ಕಾರ್ಯಕ್ರಮಗಳನ್ನು ಆಯೋಜಿಸಲು ಉತ್ತೇಜನ ನೀಡಿವೆ.

ಇನ್ನು ಜನವರಿಯಲ್ಲಿ ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಜರುಗಿದ ವಿವಿಧ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು, ರ‍್ಯಾಲಿಗಳು, ತರಬೇತಿ ಶಿಬಿರಗಳು ನಮ್ಮ ಚಳುವಳಿಗೆ ಹೊಸ ಸ್ಫೂರ್ತಿಯನ್ನು ನೀಡಿದ್ದು, ಈ ವರ್ಷ ನಮ್ಮ ಸಂಸ್ಥೆ ತನ್ನ ವೈಶಿಷ್ಟ್ಯಮಯ ಸಾಧನೆಗಳನ್ನು ಮುಂದುವರೆಸಿ ಯಶಸ್ವಿ ವರ್ಷಗುವ ನಿಟ್ಟಿನಲ್ಲಿ ಹೆಚ್ಚಿನ ಆಶಾಭಾವನೆಯನ್ನು ಮೂಡಿಸಿದೆ. ನಮ್ಮ ಚಳುವಳಿಗೆ ಸಫಲತೆ ಮತ್ತು ಪ್ರಭಾವವನ್ನು ಹೆಚ್ಚಿಸಿವೆ ಎಂದು ಭಾವಿಸಿದ್ದೇನೆ.

ಕೇಂದ್ರ ಕಛೇರಿಯನ್ನೊಳಗೊಂಡಂತೆ, ರಾಜ್ಯಾದ್ಯಂತ ನಮ್ಮ ಸಂಸ್ಥೆಯಿಂದ ವಿವೇಕಾನಂದ ಜಯಂತಿ ಕಾರ್ಯಕ್ರಮಗಳನ್ನು ವೈವಿಧ್ಯಮಯವಾಗಿ ಆಚರಿಸಲಾಗಿದೆ. 76ನೇ ಗಣರಾಜ್ಯೋತ್ಸವದ ಸಂದರ್ಭದಲ್ಲಿ ರಾಜ್ಯಾದ್ಯಂತ ಬಹುತೇಕ ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ನಡೆದ ಪಥಚಲನದಲ್ಲಿ ನಮ್ಮ ಸ್ಕೌಟ್ಸ್–ಗೈಡ್ಸ್ ಹಾಗೂ ರೋವರ್ಸ್–ರೇಂಜರ್ಸ್‌ಗಳ ಪಾಲ್ಗೊಂಡು, ಪ್ರಶಸ್ತಿಗಳನ್ನು ಗಳಿಸಿ, ರಾಷ್ಟ್ರಭಕ್ತಿಯನ್ನು ಪ್ರದರ್ಶಿಸಿದ್ದಾರೆ.

ಅಷ್ಟೇ ಅಲ್ಲದೆ, ರಾಜ್ಯದ ವಿವಿಧ ಭಾಗಗಳಲ್ಲಿ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ನಮ್ಮ ಮಕ್ಕಳು ವೈವಿಧ್ಯಮಯ ಹಾಗೂ ಅರ್ಥಪೂರ್ಣವಾದ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಇದರಲ್ಲಿ ಪೊಲೀಸ್ ಮತ್ತು ಸಾರಿಗೆ ಇಲಾಖೆಯ ಅಧಿಕಾರಿಗಳ ಸಹಕಾರ ಶ್ಲಾಘನೀಯವಾಗಿದೆ.

ವಿವೇಕಾನಂದ ಜಯಂತಿ ಅಂಗವಾಗಿ ಕೇಂದ್ರ ಕಛೇರಿಯಲ್ಲಿ ಆಯೋಜಿಸಲಾಗಿದ್ದ ಯುವ ದಿನಾಚರಣೆ ಮತ್ತು ಸಂಕ್ರಾಂತಿ ಸಂಭ್ರಮ ಸಮಾರಂಭಗಳು ವಿಶೇಷವಾಗಿದ್ದವು. ಈ ಸಂದರ್ಭದಲ್ಲಿ ಪಾವಗಡದ ರಾಮಕೃಷ್ಣಾಶ್ರಮದ ಪರಮಪೂಜ್ಯ ಶ್ರೀ ಜಪಾನಂದಾ ಸ್ವಾಮೀಜಿಯವರು ಭಾಗವಹಿಸಿ, ನೀಡಿದ ಪ್ರವಚನ ಮತ್ತು ಸಂದೇಶ ಪ್ರೇರಣಾತ್ಮಕವಾಗಿತ್ತು.

ಕೇಂದ್ರ ಕಛೇರಿಯಲ್ಲಿ ನಡೆದ 76ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ನಾಡೋಜ ಡಾ. ಗೊ.ರು. ಚನ್ನಬಸಪ್ಪ ರವರು ಮತ್ತು ನಮ್ಮ ಸಂಸ್ಥೆಯ ಹಿರಿಯ ನಾಯಕರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ ಅವರು ಭಾಗವಹಿಸಿ, ಭಾರತೀಯ ಸಂವಿಧಾನ ಮೌಲ್ಯಗಳ ಬಗ್ಗೆ ಮತ್ತು ಸಮಾನತೆಯೊಂದಿಗಿನ ಭಾವನೆಗಳನ್ನು ಉತ್ತೇಜಿಸುವ ಬಗ್ಗೆ ಸಂದೇಶ ನೀಡಿದ್ದು, ಅರ್ಥಪೂರ್ಣವಾಗಿತ್ತು.

ತಮಿಳುನಾಡಿನ ತಿರುಚಿರಾಪಳ್ಳಿಯಲ್ಲಿ ನಡೆದ ರಾಷ್ಟ್ರಮಟ್ಟದ ಸುವರ್ಣ ಮಹೋತ್ಸವ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರಿಯಲ್ಲಿ ಕರ್ನಾಟಕದಿಂದ ನಿರೀಕ್ಷಿತ ಸಂಖ್ಯೆಯ ಮಕ್ಕಳು ಭಾಗವಹಿಸಿದ್ದು ಹೆಮ್ಮೆಯ ವಿಷಯವಾಗಿದೆ. ಈ ಜಾಂಬೋರಿಯ ಉದ್ಘಾಟನಾ ಸಮಾರಂಭದಲ್ಲಿ ನಮ್ಮ ರಾಜ್ಯದ ಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್ ರವರು ಮತ್ತು ಕರ್ನಾಟಕ ವಿಧಾನಸಭೆಯ ಗೌರವಾನ್ವಿತ ಸಭಾಧ್ಯಕ್ಷರಾದ ಶ್ರೀ ಯು.ಟಿ. ಖಾದರ್ ಅವರು ಭಾಗವಹಿಸಿದ್ದರಿಂದ, ನಮ್ಮ ರಾಜ್ಯಕ್ಕೆ ಹೆಚ್ಚಿನ ಗೌರವ ದೊರಕಿದಂತಾಗಿದೆ. ಈ ಇಬ್ಬರೂ ಮಹನೀಯರ ಸಹಕಾರ ಮತ್ತು ಉಪಸ್ಥಿತಿಗಾಗಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಜನವರಿ 24 ರಂದು ನಾನು, ಶ್ರೀ ಕೊಂಡಜ್ಜಿ ಷಣ್ಮುಖಪ್ಪ ಮತ್ತು ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪಗೌಡ ಅವರೊಂದಿಗೆ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಬೇಟಿಯಾಗಿ, ಕರ್ನಾಟಕದಲ್ಲಿ ಸ್ಕೌಟ್ಸ್ ಗೈಡ್ಸ್‌ನ ಪ್ರಗತಿಪರ ಚಟುವಟಿಕೆಗಳನ್ನು ಪರಿಚಯಿಸುವುದರ ಜೊತೆಗೆ, ರಾಜ್ಯ ಪುರಸ್ಕಾರ ಪ್ರಶಸ್ತಿ ವಿತರಣಾ ಸಮಾರಂಭದ ದಿನಾಂಕವನ್ನು ಗೊತ್ತುಪಡಿಸಲು ವಿನಂತಿ ಸಲ್ಲಿಸಿದ್ದೇನೆ. ಈ ಕುರಿತು ಮಾನ್ಯ ರಾಜ್ಯಪಾಲರು ಸಧ್ಯದಲ್ಲಿಯೇ ದಿನಾಂಕವನ್ನು ನೀಡುವ ಸೂಚನೆ ನೀಡಿದ್ದಾರೆ. ಈ ಸಹಕಾರಕ್ಕೆ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು. ಈ ಬಾರಿ ನಮ್ಮ ಸಂಸ್ಥೆಯ ಪರಿಕ್ಷಾ ವಿಭಾಗದಲ್ಲಿ ಸಾಧಿಸಿದ ಯಶಸ್ಸಿಗೆ ಸಂಬಂಧಿಸಿದಂತೆ, ನಮ್ಮ ಸಿಬ್ಬಂದಿಗಳ ಪರಿಶ್ರಮ ಹಾಗೂ ಈ ಪ್ರಕ್ರಿಯೆಯಲ್ಲಿ ಜೈನ್ ವಿಶ್ವವಿದ್ಯಾಲಯದ ಅಮೂಲ್ಯ ಸಹಕಾರವನ್ನು ನಾನು ಸ್ಮರಿಸುತ್ತೇನೆ.

ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆಗಳ ಸಮಯ. ಎಸ್.ಎಸ್.ಎಲ್.ಸಿ. ಪರೀಕ್ಷೆಗಳನ್ನು ಎದುರಿಸುತ್ತಿರುವ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಆತ್ಮಸ್ಥೈರ್ಯವನ್ನು ಉತ್ತೇಜಿಸಲು ಮತ್ತು ಭಯನಿವಾರಣೆಗೆ ಪ್ರೇರಣಾ ಮಾರ್ಗದರ್ಶನ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದೇವೆ. ನಮ್ಮ ಮನವಿಗೆ ಸ್ಪಂದಿಸಿ, ಖ್ಯಾತ ಮನಶಾಸ್ತ್ರ ತಜ್ಞ ವೈದ್ಯರಾದ ಡಾ. ಸಿ.ಆರ್. ಚಂದ್ರಶೇಖರ್ ಅವರು ಪ್ರೇರಣಾದಾಯಕ ಮಾರ್ಗದರ್ಶನ ಸಂದೇಶವನ್ನು ನೀಡಿದ್ದಾರೆ. ಈ ಸಂದೇಶ ನಮ್ಮ ಸಂಸ್ಥೆಯ ಜಾಲತಾಣಗಳಲ್ಲಿ ಲಭ್ಯವಿರುತ್ತವೆ. ನಮ್ಮ ಎಲ್ಲಾ ಮಕ್ಕಳು ಅವುಗಳ ಸದುಪಯೋಗವನ್ನು ಪಡೆದು, ಆತ್ಮವಿಶ್ವಾಸದಿಂದ ಮತ್ತು ಶ್ರದ್ಧೆಯಿಂದ ಪರೀಕ್ಷೆಗಳನ್ನು ಎದುರಿಸಿ ಯಶಸ್ಸುಗಳಿಸಬೇಕೆಂದು ನಮ್ಮ ಸಂಸ್ಥೆ ಹಾರೈಸುತ್ತದೆ.

ನಮ್ಮ ರಾಜ್ಯದ 7 ಮಹನೀಯರಿಗೆ ಪದ್ಮ ಪ್ರಶಸ್ತಿಗಳು ದೊರಕಿರುವುದು ಅತ್ಯಂತ ಹೆಮ್ಮೆಯ ವಿಚಾರ. ಎಲ್ಲ ಮಹನೀಯರುಗಳನ್ನು ಅಭಿನಂದಿಸುತ್ತಾ, ಅವರಲ್ಲಿ ಪದ್ಮಭೂಷಣ ಪ್ರಶಸ್ತಿಗಳಿಗೆ ಭಾಜನರಾಗಿರುವ ಹಿರಿಯ ಪತ್ರಕರ್ತ ಶ್ರೀ ಎ. ಸೂರ್ಯಪ್ರಕಾಶ್ ಮತ್ತು ಚಲನಚಿತ್ರ ರಂಗದ ಜನಪ್ರಿಯ ಕಲಾವಿದರಾದ ಶ್ರೀ ಅನಂತನಾಗ್ ಅವರಿಗೆ ನಮ್ಮ ಸಂಸ್ಥೆಯ ಪರವಾಗಿ ಹಾಗೂ ವೈಯಕ್ತಿಕವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

# ಫೆಬ್ರವರಿ 2025ರ ಮಾಹೆಯ ಕಾರ್ಯಕ್ರಮಗಳ ವಿವರಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ರಾಜ್ಯಪುರಸ್ಕಾರ ಸ್ಕೌಟ್-ಗೈಡ್ ಮತ್ತು ರೋವರ್-ರೇಂಜರ್ ರ್‍ಯಾಲಿ | ಫೆಬ್ರವರಿ | ರಾಜಭವನ, ಬೆಂಗಳೂರು |
| 2 | ರಾಜ್ಯ ಮಟ್ಟದ ದಳನಾಯಕರುಗಳ ಮ್ಯಾಪಿಂಗ್, ಸ್ಟಾರ್ ಗೇಜಿಂಗ್ ಮತ್ತು ಪ್ರಥಮ ಚಿಕಿತ್ಸೆ ತರಬೇತಿ ಶಿಬಿರ | 01.02.2025 ರಿಂದ 03.02.2025 | ಡಾ|| ಅನಿಬೆಸೆಂಟ್ ಸ್ಕೌ&ಗೈ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ |
| 3 | ದಿ|| ಜೆ.ಬಿ. ಮಲ್ಲಾರಾಧ್ಯ, ಮಾಜಿ ರಾಜ್ಯ ಮುಖ್ಯ ಆಯುಕ್ತರ ಜನ್ಮ ದಿನಾಚರಣೆ | 12.02.2025 | ದಳ, ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ |
| 4 | ಬೇಡನ್ ಪಾವೆಲ್ ದಂಪತಿಗಳ ಜನ್ಮದಿನ/ ಸಂಸ್ಥಾಪಕರ ದಿನಾಚರಣೆ ಮತ್ತು ಚಿಂತನಾ ದಿನಾಚರಣೆ | 22.02.2025 | ದಳ, ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ |
| 5 | ರಾಜ್ಯ ಮಟ್ಟದ ಹೆರಿಟೇಜ್ (ಐತಿಹಾಸಿಕ ಸ್ಥಳಗಳ ಪರಿಚಯ ಮತ್ತು ವೀಕ್ಷಣಾ) ಶಿಬಿರ | 21.02.2025 ರಿಂದ 23.02.2025 | ಚಿತ್ರದುರ್ಗ |
| 6 | ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆಯುವ ಮಕ್ಕಳಿಗೆ ಪ್ರೋತ್ಸಾಹಿಸುವ ಮತ್ತು ಪ್ರೇರಣಾ ಕಾರ್ಯಕ್ರಮ (ಆನ್‌ಲೈನ್ & ಆಫ್‌ಲೈನ್ ಮೂಲಕ) | ಫೆಬ್ರವರಿ | ದಳ, ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ |

## ಅಭಿನಂದನೆಗಳು



ಕರ್ನಾಟಕ ಸರ್ಕಾರ ಜಿಲ್ಲಾಡಳಿತ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮಂಗಳೂರು, ಕರ್ನಾಟಕ ರಾಜ್ಯ ಯುವ ಒಕ್ಕೂಟಗಳ ಸಂಘ (ರಿ), ಬೆಂಗಳೂರು, ದಕ್ಷಿಣ ಕನ್ನಡ ಜಿಲ್ಲಾ ಯುವಜನ ಒಕ್ಕೂಟ ಮಂಗಳೂರು ಇದರ ಜಂಟಿ ಆಶ್ರಯದಲ್ಲಿ ನಡೆಯುವ 'ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ, ಜಿಲ್ಲಾ ಯುವ ಸಮಾವೇಶ ಕಾರ್ಯಾಗಾರ ಕಾರ್ಯಕ್ರಮ'ದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಗುರುತಿಸಿ "ದಕ್ಷಿಣ ಕನ್ನಡ ಜಿಲ್ಲಾ ಯುವ ಕ್ರೀಡಾ ಸಾಧಕ" ಪ್ರಶಸ್ತಿಗೆ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಬೆತನಿ ಪದವಿ ಪೂರ್ವ ಕಾಲೇಜಿನ ರೋವರ್ ಸ್ಕೌಟ್ ಲೀಡರ್ **ಶ್ರೀ ಕೆ. ಪುನೀತ್ ಅವರು** ಭಾಜನರಾಗಿದ್ದಾರೆ.

## ಅಭಿನಂದನೆಗಳು



ಕಾರವಾರ ಜಿಲ್ಲೆ, ಹೊನ್ನಾವರ ತಾಲ್ಲೂಕು ಹಳದಿಪುರದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ವಿಶೇಷ ಚೇತನ ಗೈಡ್ ವಿದ್ಯಾರ್ಥಿನಿ **ಕು|| ತೇಜಸ್ವಿನಿ ಸೋಮೇಶ್‌ಗೌಡರವರು** ಇತ್ತೀಚೆಗೆ ಉಡುಪಿ ಜಿಲ್ಲೆಯಲ್ಲಿ ನಡೆದ ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾ ಕೂಟದ ಉದ್ದ ಜಿಗಿತದಲ್ಲಿ ದ್ವಿತೀಯ ಸ್ಥಾನ ಪಡೆದು ಶಾಲೆಗೆ, ಸ್ಕೌಟ್-ಗೈಡ್ ಸಂಸ್ಥೆಗೆ ಕೀರ್ತಿಯನ್ನು ತಂದಿರುತ್ತಾಳೆ. ಶಾಲೆಯ ಗೈಡ್ ಕ್ಯಾಪ್ಟನ್ ಶ್ರೀಮತಿ ಸುರೇಖಾ ನಾಯ್ಕರವರು ಅವರಿಗೆ ತರಬೇತಿ ನೀಡಿರುತ್ತಾರೆ.

# ಸಂಪಾದಕೀಯ



ಮಾನ್ಯರೆ,

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯಕ್ರಮ, ಚಟುವಟಿಕೆಗಳು 3 ರಿಂದ 27 ವಯೋಮಾನದ ಯುವ ಜನತೆಯ ಸರ್ವಾಂಗೀಣ ಅಭಿವೃದ್ಧಿಗೆ, ಗುಣಾತ್ಮಕ ಶಿಕ್ಷಣಕ್ಕೆ, ಜೀವನ ಕೌಶಲ್ಯ ವೃದ್ಧಿಗೆ ಮಾತ್ರ ಸೀಮಿತ ಆಗದೆ, ಇತರೆ ಎಲ್ಲಾ ವಯೋಮಾನದ ಶಿಕ್ಷಣಾಶಕ್ತರು, ದೇಶಾಭಿಮಾನಿಗಳು, ತಮ್ಮ ಬದುಕಿನ ಸಾರ್ಥಕತೆಯನ್ನು ಹೊಂದುವಲ್ಲಿ ಪ್ರೋತ್ಸಾಹಿಸಿ, ಪಾಲನೆ, ಪೋಷಣೆ ಮಾಡುವಲ್ಲಿ ಶ್ರಮಿಸುತ್ತಿರುವ ಚಳುವಳಿ ಆಗಿರುವುದು ಸ್ವಾಗತಾರ್ಹ. ಇದನ್ನು ಮನಗಂಡು, ಈ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಧ್ಯೇಯೋದ್ದೇಶಗಳನ್ನು ಸಕ್ರಿಯವಾಗಿ, ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಸದಾ ಶ್ರಮಿಸುತ್ತಿರುವ ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರವರ ನೇತೃತ್ವದಲ್ಲಿ ಹಲವು–ಹನ್ನೊಂದು ಕಾರ್ಯಕ್ರಮಗಳು, ಚಟುವಟಿಕೆಗಳು, ತರಬೇತಿಗಳು, ಜಾಂಬೋರೇಟ್‌ಗಳು, ಇತ್ಯಾದಿಗಳು ನಿರೀಕ್ಷೆಗೂ ಮೀರಿ ವರ್ಷವಿಡೀ ನಿರ್ವಹಣೆ ಆಗುತ್ತಿರುವುದು ಸ್ವಾಗತಾರ್ಹ.

ಜನವರಿ 2024ರಲ್ಲಿ ಬೀದರ್‌ನಲ್ಲಿ ಯಶಸ್ವಿಯಾಗಿ ಏರ್ಪಟ್ಟ "ಮೊದಲನೇ ಕಲ್ಯಾಣ ಕರ್ನಾಟಕ ಜಾಂಬೋರೇಟ್" ಬಹಳಷ್ಟು ಜಿಲ್ಲೆಗಳವರಿಗೆ ಪ್ರೇರಣೆ ಆಗಿದ್ದು, ಜನವರಿ 2025ರ ಮಾಹೆಯಲ್ಲಿ ಧಾರವಾಡ ಜಿಲ್ಲೆಯಲ್ಲಿ "ಕಿತ್ತೂರು ಕರ್ನಾಟಕ ಜಾಂಬೋರೇಟ್" ಮತ್ತು ಯಾದಗಿರಿಯಲ್ಲಿ "2ನೇ ಕಲ್ಯಾಣ ಕರ್ನಾಟಕ ಜಾಂಬೋರೇಟ್"ಗಳು ಯಶಸ್ವಿಯಾಗಿ ನಿರ್ವಹಣೆ ಆಗಿ ಸರ್ವರ ಆಧರಾಭಿಮಾನಕ್ಕೆ ಪಾತ್ರವಾಗಿರುವುದು ಶ್ಲಾಘನೀಯ. ಇವುಗಳ ಅರ್ಥಗರ್ಭಿತ ಯಶಸ್ವಿ ನಿರ್ವಹಣೆಯಲ್ಲಿ ಪ್ರಜಾ ಪ್ರತಿನಿಧಿಗಳ, ಎಲ್ಲಾ ಇಲಾಖಾ ಅಧಿಕಾರಿಗಳ, ದಾನಿಗಳವರುಗಳ, ಶಿಕ್ಷಣಾಶಕ್ತರುಗಳ, ಸ್ಕೌಟ್ಸ್, ಗೈಡ್ಸ್‌ನ ಸ್ಥಳೀಯ, ಜಿಲ್ಲಾ, ರಾಜ್ಯ ಸಂಸ್ಥೆಗಳವರೆಲ್ಲರ, ದಳನಾಯಕರುಗಳ, ಶಿಕ್ಷಣ ಸಂಸ್ಥೆಗಳವರೆಲ್ಲರ, ಶಿಕ್ಷಕ ವೃಂದದವರುಗಳೆಲ್ಲರ ಸಲಹೆ, ಸಹಕಾರ ಮತ್ತು ಶ್ರಮ ಅವರ್ಣನೀಯ. ಈ ಯಶಸ್ಸುಗಳನ್ನೆಲ್ಲಾ ಅವಲೋಕಿಸಿದಾಗ ಭಾರತ್ ಸ್ಕೌಟ್ಸ್/ಗೈಡ್ಸ್ ಕಾರ್ಯಕ್ರಮ, ಚಟುವಟಿಕೆಗಳು, ಸ್ಕೌಟ್/ಗೈಡ್ ಸಂಸ್ಥೆಯವರ ಸಹಕಾರಗಳಿಗೆ ಮಾತ್ರ ಸೀಮಿತವಾಗದೇ, ಎಲ್ಲರ ಪ್ರೀತಿ, ಆಧರಗಳಿಗೆ ಪಾತ್ರವಾಗಿ "ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು" ನಿಜವಾದ ಅರ್ಥದಲ್ಲಿ "ಚಳುವಳಿಯಾಗಿ" ಮಾರ್ಪಡುತ್ತಿರುವುದು ಹರ್ಷದಾಯಕ.

ಈ ತಿಂಗಳಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಯುವ ದಿನಾಚರಣೆ ಹಾಗೂ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣಾ ಕಾರ್ಯಕ್ರಮಗಳು, ರಸ್ತೆ ಸುರಕ್ಷತಾ ಸಪ್ತಾಹ ಆಚರಣೆ, ಗಣ ರಾಜ್ಯೋತ್ಸವ ಆಚರಣಾ ಸಮಾರಂಭ, ಮುಂತಾದವುಗಳು ರಾಜ್ಯ, ಜಿಲ್ಲೆ ಮತ್ತು ಸ್ಥಳೀಯ ಸಂಸ್ಥೆಗಳ ಹಂತಗಳಲ್ಲಿ ಅರ್ಥಗರ್ಭಿತವಾಗಿ, ಯಶಸ್ವಿಯಾಗಿ, ನಿರ್ವಹಣೆಯಾಗಿ, ಆ ಆಚರಣೆಗಳ ಮಹತ್ವವನ್ನು ಸ್ಪಷ್ಟಪಡಿಸುವಲ್ಲಿ ನಿರ್ವಹಿಸಿದ ಕಾರ್ಯಕ್ರಮ ಚಟುವಟಿಕೆಗಳು ಹರ್ಷವನ್ನುಂಟು ಮಾಡಿರುವುವು.

ಜನವರಿ 13 ರಂದು ರಾಜ್ಯ ಸಂಸ್ಥೆಯಿಂದ ಏರ್ಪಡಿಸಿದ್ದ "ಸ್ವಾಮಿ ವಿವೇಕಾನಂದರ ರಾಷ್ಟ್ರೀಯ ಯುವ ದಿನಾಚರಣೆ ಮತ್ತು ಸಂಕ್ರಾಂತಿ ಸಂಭ್ರಮ" ಸಮಾರಂಭದಲ್ಲಿ ಉದ್ಘಾಟಕರಾಗಿ ಪೂಜ್ಯ ಶ್ರೀ ಸ್ವಾಮಿ ಜಪಾನಂದ ಮಹಾರಾಜರು, ಅಧ್ಯಕ್ಷರು, ಶ್ರೀ ರಾಮಕೃಷ್ಣ ಸೇವಾಶ್ರಮ, ಪಾವಗಡರವರು ಭಾಗವಹಿಸಿದ್ದು, ಅವರ ಈ ಕೆಳಕಂಡ ಮಾರ್ಗದರ್ಶನ ಮಾತುಗಳು ಉಲ್ಲೇಖಾರ್ಹ.

"ನಾವು ಮಂಗಳ ಗ್ರಹದ ಅಂಗಳದ ಆಳಕ್ಕೆ ಹೋಗುತ್ತಿದ್ದರೂ, ಮನದ ಆಳದ ಅಂಗಳಕ್ಕೆ ಹೋಗಲು ಆಗದಿರುವುದು ಇಂದಿನ ಜನಾಂಗದ ದುಸ್ಥಿತಿ". "ನಾವು ಮೊದಲು ಮಾನವರು, ಹೃದಯವಂತರು ಆಗಿ ಸಮಾಜ ಸೇವೆ ಮಾಡಿದರೆ ಅದೇ ಸ್ವಾಮಿ ವಿವೇಕಾನಂದರಿಗೆ ಸಲ್ಲಿಸುವ ಗೌರವ".

ಶ್ರೀಮತಿ ಡಾ॥ ಶಾಲಿನಿ ರಜನೀಶ್, ಭಾ.ಆ.ಸೇ ರವರು ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ತಾವೂ ತಮ್ಮ ವಿದ್ಯಾರ್ಥಿ ಜೀವನದಲ್ಲಿ ಗೈಡ್ಸ್ ಆಗಿದ್ದುದ್ದನ್ನು ಸಂತೋಷದಿಂದ ಸ್ಮರಿಸಿಕೊಂಡು, ಸ್ಕೌಟ್ಸ್–ಗೈಡ್ಸ್ ಚಳುವಳಿಯ ಕಾರ್ಯ ಚಟುವಟಿಕೆಗಳು ವಿದ್ಯಾರ್ಥಿಗಳ ಸಾರ್ಥಕ ಬದುಕಿಗೆ, ಉತ್ತಮ ಮಾನಸಿಕ ಬದಲಾವಣೆಗೆ, ನಾಯಕತ್ವ ಬೆಳವಣಿಗೆಗೆ ಸಹಕಾರಿ ಆಗುವುದನ್ನು ಸ್ವಷ್ಟಪಡಿಸಿ, ಸ್ಕೌಟ್ಸ್–ಗೈಡ್ಸ್‌ಗಳು ಮುಂದೆ "ಸ್ಟಾರ್ ಆಗುತ್ತೀರಿ" ಎಂದು ತಿಳಿಸಿ ಸರ್ವರೂ ಸ್ಕೌಟ್ಸ್–ಗೈಡ್ಸ್ ಚಳುವಳಿಗೆ ಸೇರುವಂತಾಗಲೆಂದು ಹಾರೈಸಿ, ಜೊತೆಗೆ ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಸರ್ವರೂ ಅರಿತು, ಪಾಲಿಸಿ, ತಮ್ಮ ಬದುಕನ್ನು ಸಾರ್ಥಕ ಪಡಿಸಿಕೊಳ್ಳಲು ವಿನಂತಿಸಿದರು.

ಅತಿಥಿಯಾಗಿ ಭಾಗವಹಿಸಿದ್ದ ಶ್ರೀ ಗುಬ್ಬಿಗೂಡು ರಮೇಶ್, ಸಹಾಯಕ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು "ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಗಳ ನಂತರ ಹುಟ್ಟಿದ ಇಂದಿನ ಯುವ ಪೀಳಿಗೆಯವರಲ್ಲಿ ದೇಶಾಭಿಮಾನದ ಕಿಚ್ಚು ಇಲ್ಲದಿರುವುದನ್ನು ಸ್ವಷ್ಟಪಡಿಸಿ, ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಭಾವನೆ, ಸ್ವಾಭಿಮಾನ, ದೇಶಾಭಿಮಾನವನ್ನು ಹೆಚ್ಚಿಸುವಲ್ಲಿ ಇಂದಿನ ಶಿಕ್ಷಣದ ಆದ್ಯತೆ ಆಗಬೇಕಾಗಿರುವುದಾಗಿ ತಿಳಿಸಿದರು."

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು, ಕಾರ್ಯಕ್ರಮಗಳು, ವಿದ್ಯಾರ್ಥಿಗಳ ಜ್ಞಾನಾರ್ಜನೆಯ ಬೆಳವಣಿಗೆಗೆ ಪೂರಕ ಆಗುವುದರೊಂದಿಗೆ ಅವರ ಜ್ಞಾನವು ವಿಶೇಷವಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆ ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ, ಪರೀಕ್ಷಾ ಭಯ ಹೋಗಲಾಡಿಸುವಲ್ಲಿ ವಿಶೇಷ "ಪರೀಕ್ಷಾ ಭಯ ನಿರ್ವಹಣಾ–ಮಾರ್ಗದರ್ಶಿ ಸಲಹಾ ಕಾರ್ಯಕ್ರಮಗಳನ್ನು" ನುರಿತ ಶಿಕ್ಷಣ ತಜ್ಞರಿಂದ, ಮನೋಶಾಸ್ತ್ರ ತಜ್ಞ ಡಾಕ್ಟರ್ ರವರುಗಳಿಂದ ಎಲ್ಲಾ ಜಿಲ್ಲಾ ಮತ್ತು ರಾಜ್ಯ ಸಂಸ್ಥೆಯ ವತಿಯಿಂದ ಔಟಿ–ಟುಟಿಜ ಕಾರ್ಯಗಾರಗಳನ್ನು ಹಮ್ಮಿಕೊಳ್ಳಲಾಗಿದ್ದು, ಆ ಕಾರ್ಯಗಾರಗಳಲ್ಲಿ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ, ಅದರ ಸದುಪಯೋಗವನ್ನು ಪಡೆದುಕೊಳ್ಳಲು ವಿನಂತಿಸಿದೆ.

ಜನವರಿ 26 ರಂದು ರಾಜ್ಯ ಸಂಸ್ಥೆಯಿಂದ ಏರ್ಪಟ್ಟ 76ನೇ ಗಣರಾಜ್ಯೋತ್ಸವ ಸಮಾರಂಭವನ್ನು ನಾಡಿನ ಶ್ರೇಷ್ಠ ಸಾಹಿತಿಗಳಾದ ನಾಡೋಜ ಡಾ॥ ಗೊ.ರು. ಚನ್ನಬಸಪ್ಪರವರು ಉದ್ಘಾಟಿಸಿ, "ದೇಶದ ಪ್ರಜಾಪ್ರಭುತ್ವ ಮತ್ತು ಅದರ ಯಶಸ್ವಿ ನಿರ್ವಹಣೆಯಲ್ಲಿ ಹೊಂದಿರುವ ಭಾರತ ಸಂವಿಧಾನವನ್ನು ಸಮರ್ಥವಾಗಿ, ಸಮರ್ಪಕವಾಗಿ ಸದುಪಯೋಗಪಡಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಹಾಗೂ ಜವಾಬ್ದಾರಿಗಳಾಗಿರುವುದನ್ನು ಸ್ವಷ್ಟಪಡಿಸಿದರು.

ದೇಶದ ಸತ್ಪ್ರಜೆಗಳಾಗುವಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಚಳುವಳಿಯು ಮಹತ್ತರ ಪಾತ್ರ ವಹಿಸುತ್ತಿರುವುದನ್ನು ಮನಗಂಡು ಸರ್ವರೂ ಈ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ದೇಶದ ಭವ್ಯ ಭವಿಷ್ಯದ ನಿರ್ಮಾಣದಲ್ಲಿ ಭಾಗಿಗಳಾಗಲು ಸದರಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ ರವರು ವಿನಂತಿಸಿದರು.

ಒಟ್ಟಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯಕ್ರಮ, ಚಟುವಟಿಕೆಗಳು ನಿಜವಾದ ಅರ್ಥದಲ್ಲಿ ಚಳುವಳಿಯಂತೆ ನಿರ್ವಹಣೆ ಆಗುತ್ತಿದ್ದು, ಹಾಗಾಗುವಲ್ಲಿ ಸಲಹೆ, ಸಹಕಾರ, ಪ್ರೋತ್ಸಾಹ ನೀಡುತ್ತಿರುವ ಸರ್ವರಿಗೂ ಅನಂತಾನಂತ ಅಭಿನಂದನೆಗಳನ್ನು ಮತ್ತೊಮ್ಮೆ ಈ ಮೂಲಕ ಸಲ್ಲಿಸುತ್ತಿರುವೆನು.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# ಪ್ರಥಮ ಕಿತ್ತೂರು ಕರ್ನಾಟಕ ಜಾಂಬೋರೇಟ್ 2025

ಪ್ರಥಮ ಕಿತ್ತೂರ ಕರ್ನಾಟಕ ಜಾಂಬೋರೇಟ್‌ನ್ನು ಆಯೋಜಿಸುವಂತೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಇವರು ಸೂಚಿಸಿದ ಪ್ರಯುಕ್ತ ಧಾರವಾಡ ಜಿಲ್ಲಾ ಪದಾಧಿಕಾರಿಗಳು ಸಭೆಯನ್ನು ಮಾಡಿ ಎಲ್ಲರೂ ಆಯೋಜಿಸಲು ಒಪ್ಪಿಗೆಯನ್ನು ಸೂಚಿಸಿ ಅಂದಿನಿಂದಲೇ ತಯಾರಿ ಮಾಡಲಾರಂಬಿಸಿದರು.

ಕೇವಲ 33 ದಿನದಲ್ಲಿ ತಯಾರಿ ಮುಗಿಸಿ ಪ್ರಥಮ ಕಿತ್ತೂರು ಕರ್ನಾಟಕ ಜಾಂಬೋರೇಟ್–2025ರಲ್ಲಿ ಭಾಗವಹಿಸುವವರನ್ನು ಜನವರಿ 05 ರಂದು ಬೆಳಿಗ್ಗೆ 11–00 ಘಂಟೆಗೆಯಿಂದ 06ರ ಮಧ್ಯಾಹ್ನದವರೆಗೆ ಖಾಸಗಿ ಬಸ್‌ಗಳ ಮೂಲಕ ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳಿಂದ ಸ್ವಾಗತ ಮಾಡಿಕೊಂಡು ನೊಂದಣಿಯನ್ನು ಮಾಡಿಕೊಳ್ಳಲಾಯಿತು.

ಜಾಂಬೊರೇಟ್‌ನಲ್ಲಿ ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕಾರವಾರ, ಶಿರಸಿ ಮತ್ತು ವಿಜಯಪುರ ಜಿಲ್ಲೆಗಳಿಂದ ಒಟ್ಟು 1016 ಸ್ಕೌಟ್ಸ್–ಗೈಡ್ಸ್ ರೋವರ್ಸ್–ರೇಂಜರ್ಸ್ ಹಾಗೂ ದಳನಾಯಕರುಗಳು ಭಾಗವಹಿಸಿದ್ದರು. ಸಿಬ್ಬಂದಿ ವರ್ಗ, ಸ್ಕೌಟ್ಸ್ ವಿಭಾಗ 22, ಗೈಡ್ಸ್ ವಿಭಾಗ 18, ರೋವರ್ಸ್ 06, ರೇಂಜರ್ಸ್ 17, ಜಿಲ್ಲಾ ಸೇವಾ ಸಿಬ್ಬಂದಿ ವರ್ಗ 55 ಜನ. ಒಟ್ಟು 1134 ಜನ ಭಾಗವಹಿಸಿದ್ದರು. ಸ್ಕೌಟ್ ವಿಭಾಗದ ನಾಯಕರನ್ನಾಗಿ ಶ್ರೀ ಪರಮೇಶ ಚಿಕ್ಕಳ್ಳಿ ಹಾಗೂ ಗೈಡ್ ವಿಭಾಗದ ನಾಯಕಿಯನ್ನಾಗಿ ಡಾ॥ ಸಪನಾ ಅನಿಗೋಳ ಇವರನ್ನು ನೇಮಕ ಮಾಡಲಾಯಿತು.

ಮಕ್ಕಳ ತಂಗುವಿಕೆಗಾಗಿ ಸ್ಕೌಟ್ಸ್ ವಿಭಾಗಕ್ಕೆ 45 ಟೆಂಟ್‌ಗಳನ್ನು ಜಿಲ್ಲಾವಾರು ನಿಗದಿಪಡಿಸಿ ಪ್ರತಿ ಟೆಂಟಿನಲ್ಲಿ 10 ಸ್ಕೌಟ್ಸ್ ಮತ್ತು ದಳ ನಾಯಕರುಗಳಿಗೆ ಅವಕಾಶ ಕಲ್ಪಿಸಲಾಯಿತು. ಅದರಂತೆ ಗೈಡ್ಸ್‌ಗಳಿಗೆ 38 ಟೆಂಟ್‌ಗಳು ಮತ್ತು 5 ಕುಟೀರಗಳಲ್ಲಿ ವಸತಿ ವ್ಯವಸ್ಥೆಯನ್ನು ಮಾಡಲಾಯಿತು. ಸಿಬ್ಬಂದಿ ಸ್ಕೌಟರ್ಸ್ ಮತ್ತು ಗೈಡರ್ಸ್ ಹಾಗೂ ಸೇವಾ ರೋವರ್ಸ್ ರೇಂಜರ್ಸ್‌ಗಳಿಗೆ ಸುಸಜ್ಜಿತವಾದ ಕುಟೀರಗಳಲ್ಲಿ ವಸತಿ ವ್ಯವಸ್ಥೆ ಮಾಡಲಾಯಿತು.

ಸಿಬ್ಬಂದಿ ವರ್ಗದವರ ಸಭೆಯನ್ನು ಮಾಡಿ, ಎಲ್ಲ ಜಿಲ್ಲೆಗಳಿಂದ ಬಂದ ಮಕ್ಕಳನ್ನು ಚಟುವಟಿಕೆಗಳಿಗಾಗಿ ಮೂರು ಬೇಸ್‌ಗಳಲ್ಲಿ ವಿಭಾಗಿಸಿ ಪ್ರತಿ ಬೇಸ್‌ನ ಮಕ್ಕಳಿಗೆ ಕೇಸರಿ, ನೀಲಿ, ಹಸಿರು ಬಣ್ಣದ ಗುರುತಿನ ಚೀಟಿಗಳನ್ನು ನೀಡಲಾಯಿತು. ಜಾಂಬೋರೇಟ್ ನಾಯಕರಿಗೆ ಕಾರ್ಯ ಹಂಚಿಕೆ ಮಾಡಲು ಅನುಕೂಲವಾಗುವಂತೆ ಪ್ರತಿ ಬೇಸ್‌ನಲ್ಲಿ 142 ಸ್ಕೌಟ್ಸ್ ಮತ್ತು 145 ಗೈಡ್ಸ್ ಒಟ್ಟು 287 ಮಕ್ಕಳಿರುವಂತೆ ಮತ್ತು ಪ್ರತಿ ಬೇಸ್‌ನಲ್ಲಿ 18 ಸ್ಕೌಟರ್ಸ್‌ಗಳು, 17 ಗೈಡರ್ಸ್‌ಗಳು, 5 ರೋವರ್ಸ್‌ಗಳು, 10 ರೇಂಜರ್ಸ್ ಹಾಗೂ 1 ರೇಂಜರ ಲೀಡರಗಳ ತಂಡಗಳನ್ನು ಮಾಡಲಾಯಿತು.

ಒಂದನೇ ತಂಡವನ್ನು ಧಾರವಾಡದ ಪ್ರೇಕ್ಷಣಿಯ ಸ್ಥಳಗಳಾದ ಪ್ರಾದೇಶಿಕ ವಿಜ್ಞಾನ ಕೇಂದ್ರ, ಕರ್ನಾಟಕ ವಿಶ್ವವಿದ್ಯಾಲಯ, ವರಕವಿ ದ.ರಾ. ಬೇಂದ್ರೆ ಸ್ಮಾರಕ ಭವನ, ಮುರಘಾಮಠ ಇತ್ಯಾದಿ ಸ್ಥಳಗಳಿಗೆ ವೀಕ್ಷಣೆಗಾಗಿ ಖಾಸಗಿ ಬಸ್‌ಗಳ ಮೂಲಕ ಪ್ರತಿ ನಿತ್ಯ ಕಳುಹಿಸಲಾಯಿತು.

ಎರಡನೇ ತಂಡವನ್ನು ಸಾಹಸಮಯ ಚಟುವಟಿಕೆಗಳಾದ ಲ್ಯಾಡರ್ ಕ್ರಾಸಿಂಗ್, ಟಾರ್ಜನ್ ಜಂಪ್, ಟೈರ್ ಕ್ಲೈಂಬಿಗ್, ಮಂಕಿ ಬ್ರಿಡ್ಜ್, ರೋಪ್ ಕ್ಲೈಮಿಂಗ್, ಕಮಾಂಡೊ ಬ್ರಿಡ್ಜ್, ಟೈರ್ ಕಾಲಿಂಗ್, ಸ್ವಿಮಿಂಗ್ ಟೈರ್, ವಾಲ್ ಕ್ಲೈಂಬಿಗ್, ಬ್ಯಾಲೇನ್ಸಿಂಗ್ ಬೀಮ್, ಮೆರ್ರಿಗೋಕಾಂಡ್ ಮುಂತಾದ ಚಟುವಟಿಕೆಗಳಲ್ಲಿ ಭಾಗವಹಿಸಲು ಕಳುಹಿಸಲಾಯಿತು.

ಮೂರನೇ ತಂಡವನ್ನು "ಸ್ಕಿಲೋರಾಮ" ಕಾರ್ಯಕ್ರಮಗಳಾದ ಮೆಹಂದಿ, ರಂಗೋಲಿ, ಪೇಪರ್ ಕಟಿಂಗ್, ಕ್ಲೇ ಮಾಡಲಿಂಗ್ ಪಯೋನಿಯರಿಂಗ್ ಮಾಡೆಲ್ಸ್, ಬೆಂಕಿ ಇಲ್ಲದೆ ಅಡುಗೆ ತಯಾರಿ. ಬಿದುರಿನ ಕಲೆಯ ತರಬೇತಿ, ಸೋಲಾರ ತಂತ್ರಜ್ಞಾನದ ಮಾಹಿತಿ, ಎಸ್‌ಡಿಜಿ ಹಬ್ಬ್ ಇತ್ಯಾದಿ ಕಾರ್ಯಕ್ರಮಗಳಲ್ಲಿ ಆಯಾ ವಿಷಯದಲ್ಲಿ ಆಸಕ್ತಿ ಹೊಂದಿರುವ ಯಾವುದಾದರೂ ಒಂದು ಚಟುವಟಿಕೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿತ್ತು ಹಾಗೂ ಆಯ್ದ 100 ಮಕ್ಕಳಿಗೆ ಹೊರಸಂಚಾರ ಆಯೋಜಿಸಲಾಗಿತ್ತು. ಈ ರೀತಿಯಾಗಿ ತಂಡಗಳ ಬದಲಾವಣೆ ಮಾಡಿ ಪ್ರತಿದಿನ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ನೋಡಿಕೊಳ್ಳಲಾಗುತಿತ್ತು.

ಜನವರಿ 06 ರಂದು ಸಂಜೆ 4–00 ಗಂಟೆಗೆ ಸದರಿ ಜಾಂಬೋರೇಟ್‌ನ ಉಧ್ಘಾಟನಾ ಸಮಾರಂಭ ಜರುಗಿತು. ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ವಹಿಸಿಕೊಂಡಿದ್ದರು. ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿ, ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು, ಇವರು ದೀಪ ಬೆಳಗಿಸುವ ಮೂಲಕ ಜಾಂಬೋರೇಟ್‌ನ್ನು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ಶ್ರಿ ಎನ್.ಹೆಚ್. ಕೋನರೆಡ್ಡಿ, ಶಾಸಕರು ನವಲಗುಂದ, ಡಾ. ಬಿ.ಕೆ.ಎಸ್. ವರ್ಧನ್, ನಿರ್ದೇಶಕರು ಸಿಸ್ಲೆಪ್ ಧಾರವಾಡ, ಶ್ರೀ ಗಜಾನನ ಮನ್ನಿಕೇರಿ, ಉಪಾಧ್ಯಕ್ಷರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಮುಖ್ಯ ಆಯುಕ್ತರುಗಳಾದ ಶ್ರೀ ಜಯಕರ ಶೆಟ್ಟಿ ಉಡುಪಿ, ಶ್ರೀ ಸಿದ್ದಣ್ಣ ಸಕ್ರಿ, ವಿಜಯಪುರ, ಶ್ರೀ ವಿ.ಎಚ್. ಭಟ್ಕಳ ಶಿರಶಿ, ಶ್ರೀಮತಿ ಮಾಧುರಿ ದೇವಧರ,









ಮಾಜಿ ಜಿಲ್ಲಾ ಮುಖ್ಯ ಆಯುಕ್ತರು ಹಾವೇರಿ, ಶ್ರೀ ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್), ಶ್ರೀಮತಿ ಮಂಜುಳಾ ಸಿ., ರಾಜ್ಯ ಸಂಘಟನಾ ಆಯುಕ್ತರು (ಗೈಡ್), ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು, ವಿವಿಧ ಸಂಘಗಳ ಪದಾಧಿಕಾರಿಗಳು, ಧಾರವಾಡ ಜಿಲ್ಲಾ & ಸ್ಥಳೀಯ ಸಂಸ್ಥೆಯ ಎಲ್ಲಾ ಪದಾಧಿಗಕಾರಿಗಳು ಹಾಗೂ ಮುಗದ ಮತ್ತು ಮಂಡಿಹಾಳ ಗ್ರಾಮ ಪಂಚಾಯತಿಯ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ಉಪಸ್ಥಿತರಿದ್ದರು.



ಜಿಲ್ಲಾ ಮುಖ್ಯ ಆಯುಕ್ತರಾದ ಆದ ಶ್ರೀಶೈಲ ಚ. ಕರೀಕಟ್ಟಿ ಇವರು ಸ್ವಾಗತಿಸಿದರು, ಶ್ರೀಮತಿ ರೇಣುಕಾ ಅಮಲಝರಿ ಕಾರ್ಯಕ್ರಮದ ನಿರೂಪಣೆ ಮಾಡಿದರು. ಶ್ರೀ ಎಸ್.ಐ. ನೇಕಾರ ಜಿಲ್ಲಾ ಆಯುಕ್ತರು (ಸ್ಕೌಟ್) ವಂದಿಸಿದರು. ಸಾಯಂಕಾಲ 6.00 ಗಂಟೆಯಿಂದ ಸ್ಥಳೀಯ ಮಕ್ಕಳಿಂದ ಹಾಗೂ ವಿವಿಧ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಪ್ರತಿ ದಿನ ಬೆಳಿಗ್ಗೆ 6–00 ರಿಂದ ಎಲ್ಲರೂ ತಮ್ಮ ಬೆಳಗಿನ ಕಾರ್ಯಗಳನ್ನು ಮುಗಿಸಿ ಸರಿಯಾಗಿ 7–00 ರಿಂದ 7–30 ರವರೆಗೆ ಮುಖ್ಯ ವೇದಿಕೆ ಮುಂಭಾಗದಲ್ಲಿ ಯೋಗ ಧ್ಯಾನ ಮತ್ತು ಪ್ರಾಣಾಯಾಮ ಮಾಡಿದರು. ಬೆಳಿಗ್ಗೆ 8–00ಕ್ಕೆ ಧ್ವಜಾರೋಹಣದ ನಂತರ 8–30ಕ್ಕೆ ಉಪಹಾರ ಮತ್ತು ಚಹಾ 9–00 ರಿಂದ 1–00 ಗಂಟೆಯವರೆಗೆ ಬೇಸ್‌ಗಳ ಮೂಲಕ ಚಟುವಟಿಕೆಗಳಲ್ಲಿ ಭಾಗವಹಿಸಿದರು.



ಜನವರಿ 07 ರಂದು ಬೆಳಿಗ್ಗೆ 10–30ಕ್ಕೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ ನೇತೃತ್ವದಲ್ಲಿ ಬೆಳಗಾವಿ ವಿಭಾಗದ ಶಿಕ್ಷಣ ಇಲಾಖೆಯ ಎಲ್ಲ ಉಪನಿರ್ದೇಶಕರು (ಆಡಳಿತ), ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಇಲಾಖೆಯ ಅಧಿಕಾರಿಗಳ ಸಭೆಯನ್ನು ಹಮ್ಮಿಕೊಳ್ಳಲಾಯಿತು. ರಾಜ್ಯ ಮತ್ತು ಜಿಲ್ಲಾ ಪದಾಧಿಕಾರಿಗಳು ಸಹ ಉಪಸ್ಥಿತರಿದ್ದರು.

ಜನವರಿ 07ರ ಮಧ್ಯಾಹ್ನ 2–30 ರಿಂದ 4–30ರ ವರೆಗೆ ಆಹಾರ ಮೇಳ ನಡೆಸಲಾಯಿತು. 4–30ಕ್ಕೆ ಚಹಾ ಬಿಸ್ಕೇಟ ನಂತರ 5–00 ರಿಂದ 6–00 ಗಂಟೆಯ ವರೆಗೆ ಜಿಲ್ಲಾವಾರು ಆಯ್ಕೆಯಾದ ಎರಡೆರಡು ಸ್ಕೌಟ್ಸ್ ಗೈಡ್ಸ್ ರೋವರ್ಸ್ ರೇಂಜರ್ಸ್‌ಗಳಿಗೆ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸಂಜೆ 6–30 ರಿಂದ ರಾತ್ರಿ 8–00 ಗಂಟೆಯ ವರೆಗೆ ಬೆಳಗಾವಿ ಮತ್ತು ಕಾರವಾರ ಜಿಲ್ಲೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಯಿತು.



ಜನವರಿ 08ರ ಮಧ್ಯಾಹ್ನ 2–30 ರಿಂದ 4–00ರ ವರೆಗೆ ಜಿಲ್ಲಾವಾರು ಉಡುಗೆ ತೊಡುಗೆ ಪ್ರದರ್ಶನ, 4–00 ರಿಂದ 4–30ರ ವರೆಗೆ ಚಹಾ ವಿರಾಮ ನಂತರ 4–30 ರಿಂದ 6–30 ಗಂಟೆಯ ವರೆಗೆ ಸಾಂಸ್ಕೃತಿಕ ವೈಭವ ಮೆರವಣಿಗೆ ಜಾಂಬೋರೇಟ್ ಸ್ಥಳದಿಂದ ಹೊರಟು ಮುಗದ ಗ್ರಾಮದಲ್ಲಿ ಸಂಚರಿಸಿ ಹಿಂದಿರಗಲಾಯಿತು. ಸದರಿ ಮೆರವಣಿಗೆಯಲ್ಲಿ ಹಾವೇರಿ ಜಿಲ್ಲೆಯ ಉಪ ನಿರ್ದೇಶಕರು ಆದ ಶ್ರೀ ಸುರೇಶ ಹುಗ್ಗಿ ಮತ್ತು ಸವಣೂರಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಂ.ಎಫ್. ಬಾರ್ಕಿ ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಶಿಕ್ಷಕರ ಸಂಘದ ಪದಾಧಿಕಾರಿಗಳು ಭಾಗವಹಿಸಿದರು. ರಾತ್ರಿ 7–00 ರಿಂದ 8–30 ಗಂಟೆಯ ವರೆಗೆ ಬಾಗಲಕೋಟೆ, ಗದಗ ಮತ್ತು ವಿಜಯಪುರ ಜಿಲ್ಲೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ















ಆಯೋಜಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಗದಗ ಜಿಲ್ಲೆಯ ಉಪ ನಿರ್ದೇಶಕರು ಆದ ಶ್ರೀ ಆರ್.ಎಸ್. ಬುರುಡಿ, ಶ್ರೀ ಆರ್.ಎನ್. ಹುರುಳಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ರೋಣ, ಶ್ರೀ ಗುರುನಾಥ್ ಹೂಗಾರ್, ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ನರಗುಂದ್, ಶ್ರೀ ವಿ.ವಿ. ನಡವಲಮನಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗದಗ ಗ್ರಾಮೀಣ, ಶ್ರೀ ಕುರಿ, ಡಯಟ್ ಕಚೇರಿ, ಶ್ರೀ ಶಂಕರ ಹಡಗಲಿ, ಅಕ್ಷರ ದಾಸೋಹ ಅಧಿಕಾರಿಗಳು ಭೇಟಿ ನೀಡಿದರು.

ಜನವರಿ 09ರ ಮಧ್ಯಾಹ್ನ 2-00 ರಿಂದ 4-00ರ ವರೆಗೆ ಸಾಂಪ್ರದಾಯಕ ಉಡುಗೆ ತೊಡುಗೆಗಳು (ಟ್ರೇಡಿಶ್ನಲ್ ಪ್ಯಾಶನ ಶೋ) ಪ್ರದರ್ಶನ ನಡೆಯಿತು. ಸಂಜೆ 4-30 ರಿಂದ 6-00 ಗಂಟೆಯ ವರೆಗೆ ಸಮಾರೋಪ ಸಮಾರಂಭ ಜರುಗಿತು. ಸದರಿ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಮಾನ್ಯ ಶ್ರೀ ಶ್ರೀಶೈಲ ಚ. ಕರೀಕಟ್ಟಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಎಂ.ಎ. ಖಾಲೀದ್, ರಾಜ್ಯ ಆಯುಕ್ತರು (ಸ್ಕೌ), ಶ್ರೀಮತಿ ಗೀತಾ ನಟರಾಜ ರಾಜ್ಯ ಆಯುಕ್ತರು (ಗೈ), ಶ್ರೀ ಚಿನ್ನಸ್ವಾಮಿ ರೆಡ್ಡಿ, ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ), ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು, ಶ್ರೀ ಎನ್. ಶ್ರೀನಿವಾಸನ್, ಸಹಾಯಕ ರಾಜ್ಯ ಆಯುಕ್ತರು (ಸ್ಕೌಟ್), ಶ್ರೀಮತಿ ರಾಧಾ ವೆಂಕಟೇಶ ಸಹಾಯಕ ರಾಜ್ಯ ಆಯುಕ್ತರು (ಗೈಡ್), ಶ್ರೀಮತಿ ಮುಕ್ತಾ ಕಾಗಲೆ ಸಹಾಯಕ ರಾಜ್ಯ ಆಯುಕ್ತರು (ಗೈಡ್), ಶ್ರೀ ಸಿ.ವಿ. ತಿರುಮಲರಾವ್ ಸಹಾಯಕ ರಾಜ್ಯ ಆಯುಕ್ತರು (ಸ್ಕೌಟ್), ಶ್ರೀ ನಾಗೇಶ ಆರ್. ಶಿವಪೂರ ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್), ಜಿಲ್ಲಾ & ಸ್ಥಳೀಯ ಸಂಸ್ಥೆಯ ಎಲ್ಲಾ ಪದಾಧಿಗಕಾರಿಗಳು ಉಪಸ್ಥಿತರಿದ್ದರು. ಜಾಂಬೋರೇಟ್ ವರದಿಯನ್ನು ಸ್ಕೌಟ್ ವಿಭಾಗದ ನಾಯಕರಾದ ಶ್ರೀ ಪರಮೇಶ ಚಿಕ್ಕಳ್ಳಿ ನೀಡಿದರು. ಮಕ್ಕಳು ಜಾಂಬೊರೇಟ್ ಅನುಭವವನ್ನು ಹಚ್ಚಿಕೊಂಡರು. ಭಾಗವಹಿಸಿದ ಎಲ್ಲ ಅತಿಥಿಗಳನ್ನು ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಎಸ್.ಎನ್. ಸಾವಳಗಿ ಸ್ವಾಗತಿಸಿದರು, ಶ್ರೀ ಮಂಜುನಾಥ ಅಡಿವೇರ ನಿರೂಪಣೆಯನ್ನು ಮಾಡಿದರು, ಶ್ರೀ ಎಸ್.ಐ. ನೇಕಾರ ಜಿಲ್ಲಾ ಆಯುಕ್ತರು (ಸ್ಕೌಟ್) ವಂದಿಸಿದರು. 6-30 ರಿಂದ ರಾತ್ರಿ 8-00 ಗಂಟೆಯ ವರೆಗೆ ಧಾರವಾಡ, ಹಾವೇರಿ ಮತ್ತು ಶಿರಸಿ ಜಿಲ್ಲೆಗಳಿಂದ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ ಆಯೋಜಿಸಲಾಯಿತು.

ಜನವರಿ 10 ರಂದು ಬೆಳಿಗ್ಗೆ 7-00 ರಿಂದ 7-30 ಗಂಟೆ ವರೆಗೆ ಮುಖ್ಯ ವೇದಿಕೆ ಮುಂಭಾಗದಲ್ಲಿ ಸರ್ವಧರ್ಮ ಪ್ರಾರ್ಥನೆಯನ್ನು ಹಮ್ಮಿಕೊಳ್ಳಲಾಯಿತು. ಬೆಳಿಗ್ಗೆ 9-00 ರಿಂದ 12-00 ಗಂಟೆಯವರೆಗೆ ಜಾಂಭೋರೇಟ್‌ನ ಕೊನೆಯ ಮಾತು, ಸನ್ಮಾನ ಹಾಗೂ ಜಿಲ್ಲಾವಾರು ಪ್ರಶಸ್ತಿ ಪತ್ರ ವಿತರಣಾ ಕಾರ್ಯಕ್ರಮ ಜರುಗಿತು. 12-00 ಗಂಟೆಗೆ ಧ್ವಜ ಅವರೋಹಣ, ರಾಷ್ಟ್ರಗೀತೆ, ಧ್ವಜ ಹಸ್ತಾಂತರ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನ 1-00 ಗಂಟೆಯ ನಂತರ ಊಟ ಮುಗಿಸಿ ಭಾಗವಹಿಸಿದವವರೆಲ್ಲರನ್ನು ಖಾಸಗಿ ಬಸ್‌ಗಳ ಮೂಲಕ ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳಿಗೆ ಬೀಳ್ಕೊಡಲಾಯಿತು





# ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಯುವ ದಿನಾಚರಣೆ ಮತ್ತು ಸಂಕ್ರಾಂತಿ ಸಂಭ್ರಮ

ರಾಜ್ಯ ಸಂಸ್ಥೆಯ ವತಿಯಿಂದ ಜನವರಿ 13 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಕೊಂಡಜ್ಜಿ ಬಸಪ್ಪ ಸಭಾಂಗಣ, ಶಾಂತಿಗೃಹ, ರಾಜ್ಯ ಕೇಂದ್ರ ಕಛೇರಿಯಲ್ಲಿ "ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ/ ಯುವ ದಿನಾಚರಣೆ ಹಾಗೂ ಸಂಕ್ರಾಂತಿ ಸಂಭ್ರಮ" ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಲಾಯಿತು.



ಬೆಳಗ್ಗೆ 10 ಗಂಟೆಗೆ ಧ್ವಜಾರೋಹಣದೊಂದಿಗೆ ಕಾರ್ಯಕ್ರಮ ಪ್ರಾರಂಭವಾಗಿ ವೇದಿಕೆಯಲ್ಲಿ ದೀಪ ಬೆಳಗಿಸುವುದರೊಂದಿಗೆ ಸ್ವಾಮೀಜಿ ಜಪಾನಂದ ಮಹಾರಾಜರು, ರಾಮಕೃಷ್ಣ ಮಠ, ಪಾವಗಡ ಇವರು ಉದ್ಘಾಟಿಸಿ, ಮಾತನಾಡಿದರು. ಇವರು ಮಕ್ಕಳಲ್ಲಿ ಮಾನವೀಯ ಮೌಲ್ಯವನ್ನು ಮೈಗೂಡಿಸಿಕೊಳ್ಳುವಂತೆ ಕರೆ ನೀಡಿದರು. ಬಾಲ್ಯದಲ್ಲಿ ಸ್ಕೌಟಿಂಗ್ ಅನುಭವಗಳನ್ನು ಹಂಚಿಕೊಂಡರು. ಸ್ಕೌಟಿಂಗ್ ಕೌಶಲ್ಯಗಳು ನನ್ನನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ರೂಪಿಸಿದೆ ಎಂದು ತಿಳಿಸಿ, ಸ್ಕೌಟ್ಸ್ ಮತ್ತು ಗೈಡ್ಸ್ ಅತ್ಯುತ್ತಮ ನಾಗರಿಕರನ್ನಾಗಿ ಹೊರಹೊಮ್ಮಿಸುತ್ತದೆ ಎಂದು ಮಾತನಾಡಿ, ರಾಜ್ಯ ಮುಖ್ಯ ಆಯುಕ್ತರು ಮಾಡುತ್ತಿರುವ ವಿಶೇಷ ಸೇವೆಯನ್ನು ಅಭಿನಂದಿಸಿದರು.

ಶ್ರೀ ಗುಬ್ಬಿಗೂಡು ರಮೇಶ್, ಸಹಾಯಕ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಯುವ ದಿನಾಚರಣೆಯ ಪ್ರಯುಕ್ತ ಮಾತನಾಡಿ ಯುವಕರಲ್ಲಿ ಇರಬೇಕಾದ ದೇಶಭಕ್ತಿ, ಮೌಲ್ಯಗಳ ಅನಾವರಣ, ಮಾದರಿ ನಾಗರೀಕನಾಗಲು ಬೇಕಾದ ಅಂಶಗಳ ಬಗ್ಗೆ ತಿಳಿಸಿ, ಭಗತ್‌ಸಿಂಗ್, ಚಂದ್ರಶೇಖರ ಅಜಾದ್, ವಿಜ್ಞಾನಿಗಳು, ಗಣಿತ ಶಾಸ್ತ್ರಜ್ಞರ ಉದಾಹಣೆ ನೀಡಿ ಅವರಂತಾಗಬೇಕಾದರೆ ಏನು ಮಾಡಬೇಕೆಂಬ ಉತ್ತಮ ಮಾರ್ಗದರ್ಶನ ನೀಡಿದರು.

68ಕ್ಕೂ ಹೆಚ್ಚು ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳು ಸ್ವಾಮಿ ವಿವೇಕಾನಂದರ ವೇಷಭೂಷಣವನ್ನು ಧರಿಸಿಕೊಂಡು ಅವರ ಸಾಧನೆ ಹೇಳಿಕೆಗಳನ್ನು ಅರ್ಥಪೂರ್ಣವಾಗಿ ಮಾತನಾಡಿದರು. ವೇಷಭೂಷಣ ಸ್ಪರ್ಧೆಯನ್ನು ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್), ಶ್ರೀ ಬಿ.ಎಸ್. ರವೀಂದ್ರ, ಸಾಹಿತಿಗಳು ಇವರುಗಳು ತೀರ್ಪುಗಾರರಾಗಿ ಸೇವೆ ಸಲ್ಲಿಸಿ ತೀರ್ಪನ್ನು ನೀಡಿದರು.



ಡಾ|| ಶಾಲಿನಿ ರಜನೀಶ್, ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ವಿವೇಕಾನಂದರ ವೇಷಭೂಷಣದಲ್ಲಿರುವ ಮಕ್ಕಳನ್ನು ನೋಡಿ ತುಂಬಾ ಸಂತೋಷದಿಂದ ಮಾತನಾಡಿ, ಸ್ಕೌಟ್ ಮತ್ತುಗೈಡ್ ಸಂಸ್ಥೆಯ ಮಹತ್ವ ಹಾಗೂ ಮಕ್ಕಳಿಗೆ ಅಗತ್ಯವಾಗಿ ಸೇವೆ, ಸ್ವಚ್ಛತೆ ಹಾಗೂ ವಿವೇಕಾನಂದರ ಸಾಧನೆಯ ಸ್ಫೂರ್ತಿ ನಿಮ್ಮೆಲ್ಲರಲ್ಲಿ ಮೂಡಲಿ ಎಂದು ಶುಭವನ್ನು ಹಾರೈಸಿದರು.

ಮಧ್ಯಾಹ್ನದ ಅವಧಿಯಲ್ಲಿ ಬಾಳವಿಕಾಸ, ಜ್ಞಾನ ಭೋದಿನಿ ಶಾಲೆಯ ಮಕ್ಕಳಿಂದ ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮವನ್ನು ನೆರವೇರಿಸಿ, ಸಂಕ್ರಾಂತಿ ಹಬ್ಬದ ವಿಶೇಷತೆ, ಹಳ್ಳಿಯ ಸೊಗಡು, ರೈತರ ಸುಗ್ಗಿ, ದನಕರುಗಳ ಪೂಜೆ, ರಾಶಿ ಮಾಡುವಿಕೆ ಇತ್ಯಾದಿಗಳನ್ನು ನೃತ್ಯದ ಮೂಲಕ ಪ್ರದರ್ಶಿಸಿದರು.

"ಎಳ್ಳು ಬೆಲ್ಲವನ್ನು ಬೀರಿ ಒಳ್ಳೆಯ ಮಾತುಗಳನ್ನು ಆಡೋಣ" ಎಂಬ ಸಂದೇಶವನ್ನು ಎಳ್ಳು ಬೆಲ್ಲವನ್ನು ಬೀರಿ ಹಂಚಿಕೊಳ್ಳಲಾಯಿತು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಈ ಕಾರ್ಯಕ್ರಮಕ್ಕೆ ಸಂಪೂರ್ಣ ಮಾರ್ಗದರ್ಶನವನ್ನು ನೀಡಿ, ಭಾಗವಹಿಸಿದ ಮಕ್ಕಳಿಗೆ ಮತ್ತು ವೇಷಭೂಷಣ ಹಾಕಿದ ಮಕ್ಕಳಿಗೆ ಅಭಿನಂದಿಸಿದರು ಮತ್ತು ಅವರ ಸಾಧನೆ ನಿಮಗೆಲ್ಲಾ ಸ್ಫೂರ್ತಿಯಾಗಿ ಪ್ರೇರಣೆಯನ್ನು ನೀಡಲಿ ಎಂದು ಹಾರೈಸಿದರು.

ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಶ್ರೀ ಎಂ.ಎ. ಖಾಲಿದ್, ಶ್ರೀಮತಿ ಗೀತಾನಟರಾಜ್, ಶ್ರೀ ಸಿ.ಎಸ್. ರೆಡ್ಡಿ, ಶ್ರೀಮತಿ ಬಿ.ವಿ. ರಾಮಲತಾ, ಶ್ರೀ ಬಿ.ಕೆ. ಬಸವರಾಜ್, ಶ್ರೀ ಎನ್. ಶ್ರೀನಿವಾಸನ್, ಶ್ರೀ ಜಿತೇಶ್ ಶೇಠ್, ಶ್ರೀ ಪ್ರಸನ್ನಕುಮಾರ್ ಬಿ.ಆರ್, ಶ್ರೀ ಬಿ.ಕೆ. ಶೇಷಾದ್ರಿ, ಶ್ರೀ ನಾಗರಾಜ್, ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳಿಂದ 400 ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಹಾಗೂ ದಳನಾಯಕರುಗಳು ಭಾಗವಹಿಸಿದ್ದರು.

ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಸರ್ವರನ್ನು ಸ್ವಾಗತಿಸಿದರು. ಶ್ರೀ ಎಂ.ಎಸ್. ಸತೀಶ್, ರಾಜ್ಯ ಜಂಟಿ ಕಾರ್ಯದರ್ಶಿಗಳು ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ಶ್ರೀ ಎಲ್.ಟಿ. ಲೋಕೇಶ್, ರಾಜ್ಯ ಸಹಾಯಕ ಕಾರ್ಯದರ್ಶಿ ಸರ್ವರಿಗೂ ವಂದನೆಗಳನ್ನು ಅರ್ಪಿಸಿದರು.

ಬೆಂಗಳೂರು ಉತ್ತರ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಬಿ.ಆರ್. ಪ್ರಸನ್ನಕುಮಾರ್ ಅವರು ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಮಾಡಿದ್ದರು. ಬಿ.ಬಿ.ಎಂ.ಪಿ, ರಾಜ್ಯ ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು, ರಾಜ್ಯ ಕೇಂದ್ರ ಕಛೇರಿಯ ಸಿಬ್ಬಂದಿಗಳ ಸಹಕಾರದಿಂದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.



# ಯುವ ಸಮಿತಿ ಸಭೆಯ ವರದಿ

ಜನವರಿ 13 ರಂದು ರಾಜ್ಯದ ಎಲ್ಲಾ ಜಿಲ್ಲೆಗಳ ಯುವ ಸಮಿತಿ ಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳ ಸಭೆಯನ್ನು ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ಯುವ ಕಾರ್ಯಕ್ರಮಗಳು, ಯುವ ಸಮಿತಿ ಸದಸ್ಯರ ಜವಾಬ್ದಾರಿಗಳೇನು, ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಗಳೊಡನೆ ಸಂಯೋಜನೆ, ಬಿ.ಎಸ್.ಜಿಯು.ಐ.ಡಿ ಮಾಡಿಸಿಕೊಡುವುದು, ದಳಗಳ ಭೇಟಿ, ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಚಟುವಟಿಕೆಗಳಿಗೆ ನಿಯೋಜನೆ, ಸ್ಕೌಟಿಂಗ್ ಅಭಿವೃದ್ಧಿಯಲ್ಲಿ ಯುವ ಸಮಿತಿ ಸದಸ್ಯರ ಪಾತ್ರವೇನು? ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ರಾಜ್ಯ ಸಂಸ್ಥೆಯೊಂದಿಗೆ ಸಂಪರ್ಕ ಇಟ್ಟುಕೊಂಡು ಹೆಚ್ಚಿನ ಜವಾಬ್ದಾರಿಗಳನ್ನು ಹಂಚಿಕೊಂಡು ಕೆಲಸ ನಿರ್ವಹಿಸಬೇಕು ಎಂದು ತಿಳಿಸಲಾಯಿತು.

ರಾಜ್ಯ ಮುಖ್ಯ ಆಯುಕ್ತರು ಸದಸ್ಯರುಗಳಿಗೆ ಉತ್ತಮವಾಗಿ ತೊಡಗಿಸಿಕೊಂಡು ಸ್ಕೌಟಿಂಗ್ ಅಭಿವೃದ್ಧಿ ಮತ್ತು ವೈಯಕ್ತಿಕ ಅಭಿವೃದ್ಧಿ ಎರಡೂ ನಿಮ್ಮಿಂದ ಸಾಧ್ಯ ಎಂದು ಸದಸ್ಯರುಗಳನ್ನು ಪ್ರೋತ್ಸಾಹಿಸಿದರು. ರಾಜ್ಯ ಕಾರ್ಯದರ್ಶಿಗಳು, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್ ಮತ್ತು ಗೈಡ್ಸ್), ಶ್ರೀಮತಿ ಬಿ.ವಿ. ರಾಮಲತಾ, ಇತರೆ ಪದಾಧಿಕಾರಿಗಳು ಭಾಗವಹಿಸಿ ಯುವಕರನ್ನು ಪ್ರೋತ್ಸಾಹಿಸಿ ಮಾರ್ಗದರ್ಶನ ನೀಡಿದರು.

ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ, ಚಿತ್ರದುರ್ಗ, ಹಾವೇರಿ, ಹಾಸನ, ದಾವಣಗೆರೆ, ರಾಯಚೂರು, ಶಿವಮೊಗ್ಗ, ವಿಜಯನಗರ, ಉಡುಪಿ ಸೇರಿ 11 ಜಿಲ್ಲೆಗಳಿಂದ 50 ರೋವರ್ಸ್–ರೇಂಜರ್ಸ್‌ಯುವ ಸಮಿತಿ ಸದಸ್ಯರುಗಳು ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಿದರು.








# ಕಲ್ಯಾಣ ಕರ್ನಾಟಕ ದ್ವಿತೀಯ ಜಾಂಬೋರೇಟ್ 2025

ಜಿಲ್ಲಾ ಸಂಸ್ಥೆ ಯಾದಗಿರಿ, ಜಿಲ್ಲಾಡಳಿತ ಹಾಗೂ ಶಾಲಾ ಶಿಕ್ಷಣ ಇಲಾಖೆ ಇವರುಗಳ ಸಹಯೋಗದಲ್ಲಿ "ನಮ್ಮ ಸಂಸ್ಕೃತಿಯೇ ನಮ್ಮ ದೇಶದ ಸಂಪತ್ತು" ಎಂಬ ಧ್ಯೇಯ ವಾಕ್ಯದೊಂದಿಗೆ ಕಲ್ಯಾಣ ಕರ್ನಾಟಕ ದ್ವಿತೀಯ ಜಾಂಬೋರೇಟ್ ಕಾರ್ಯಕ್ರಮವನ್ನು ಜನವರಿ 17 ರಿಂದ 21ರ ವರೆಗೆ 5 ದಿನಗಳ ಕಾಲ ಜಿಲ್ಲಾ ಕ್ರೀಡಾಂಗಣ, ಚಿತ್ತಾಪುರ ರಸ್ತೆ, ಯಾದಗಿರಿಯಲ್ಲಿ ಆಯೋಜಿಸಲಾಗಿತ್ತು.

ಶ್ರೀ ಶರಣಬಸಪ್ಪ ಗೌಡ ದರ್ಶನಾಪುರ, ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರು ಇವರು ಜಾಂಬೂರೇಟ್ ಮಹಾಪೋಷಕರಾಗಿ ಹಾಗೂ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು, ಸಹಪೋಷಕರಾಗಿ ಶ್ರೀ ಚನ್ನಾರೆಡ್ಡಿ ಪಾಟೀಲ್ ತನ್ನೂರ, ಮಾನ್ಯ ಶಾಸಕರು, ಯಾದಗಿರಿ, ಶ್ರೀ ಶರಣಗೌಡ ಕಂದಕೂರ, ಮಾನ್ಯ ಶಾಸಕರು, ಗುರುಮಿಟ್ಟಕಲ್, ಶ್ರೀ ರಾಜ ವೇಣುಗೋಪಾಲ ನಾಯಕ, ಮಾನ್ಯ ಶಾಸಕರು ಸುರಪುರ, ಪೋಷಕರು, ಡಾ॥ ಸುಶೀಲಾ, ಮಾನ್ಯ ಜಿಲ್ಲಾಧಿಕಾರಿಗಳು, ಜಾಂಬೂರೇಟ್ ಮುಖ್ಯಸ್ಥರುಗಳಾಗಿ ಶ್ರೀ ಸುರೇಶ್ ಆರ್. ಸಜ್ಜನ್, ಜಾಂಬೂರೇಟ್ ಉಪಮುಖ್ಯಸ್ಥರಾಗಿ, ಶ್ರೀ ಚನ್ನಬಸಪ್ಪ ಮುಧೋಳ, ಮಾನ್ಯ ಉಪನಿರ್ದೇಶಕರು ಶಾಲಾ ಮತ್ತು ಶಿಕ್ಷಣ ಇಲಾಖೆ, ಕಾರ್ಯದರ್ಶಿಗಳಾಗಿ ಶ್ರೀ ರಾಘವೇಂದ್ರ ಹಳ್ಳಳ್ಳಿ, ಖಜಾಂಚಿಯಾಗಿ, ಶ್ರೀ ಸಿದ್ದಣ್ಣ ಗೌಡ ಪಾಟೀಲ್ ಹಾಗೂ ಎ.ಎಸ್.ಓ.ಸಿ. ಮತ್ತು ಕಲ್ಯಾಣ ಕರ್ನಾಟಕ ಮೇಲ್ವಿಚಾರಕರಾದ ಶ್ರೀಮತಿ ಮಲ್ಲೇಶ್ವರಿ ಜುಜಾರೆ ರವರು ಜಾಂಬೋರೇಟ್‌ನ ಸಂಪೂರ್ಣ ಉಸ್ತುವಾರಿಯನ್ನು ವಹಿಸಿ, ಕಾರ್ಯನಿರ್ವಹಿಸಿದ್ದಾರೆ.

ಶ್ರೀ ಬಸವರಾಜ ಗೋಗಿ ರವರು ಜಾಂಬೋರೇಟ್‌ನ ಸ್ಕೌಟ್ ಶಿಬಿರದ ನಾಯಕರಾಗಿದ್ದರು ಮತ್ತು ಶ್ರೀಮತಿ ಸುವರ್ಣ ಆರ್ ಹಳ್ಳಳ್ಳಿ ರವರು ಜಾಂಬೋರೇಟ್‌ನ ಗೈಡ್ ಶಿಬಿರದ ನಾಯಕಿಯಾಗಿದ್ದರು ಮತ್ತು ಶ್ರೀ ಎಂ. ರವಿ ಹಾಗೂ ಶ್ರೀಮತಿ ಜಯಶೀಲಾ ಇವರುಗಳು ಶಿಬಿರದ ಸಹನಾಯಕರಗಳಾಗಿದ್ದರು.

### ಜಾಂಬೋರೇಟ್‌ಗೆ ಶಿಬಿರಾರ್ಥಿಗಳ ಆಗಮನ (ದಿ.: 16–01–2025) :

ಸಂಜೆ 4.00 ಗಂಟೆಯಿಂದ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಾದ ಬಳ್ಳಾರಿ, ಬೀದರ್, ಕಲಬುರ್ಗಿ, ಕೊಪ್ಪಳ, ಯಾದಗಿರಿ, ರಾಯಚೂರು ಮತ್ತು ವಿಜಯನಗರ ಜಿಲ್ಲೆಗಳಿಂದ ಆಗಮಿಸಿದ ಸ್ಕೌಟ್ಸ್–ಗೈಡ್ಸ್ ಮಕ್ಕಳಿಗೆ ನೋಂದಣಿಗಾಗಿ ಜಿಲ್ಲಾವಾರು ನೋಂದಣಿ ಪ್ರಕ್ರಿಯೆ ಮಾಡಲಾಯಿತು.

### ಜಾಂಬೋರೇಟ್‌ನ ಪ್ರಥಮ ದಿನ (ದಿ.:17–01–2025) :

ಬೆಳಿಗ್ಗೆ 9.00 ಗಂಟೆಗೆ ಜಾಂಬೂರೇಟ್ ಕಾರ್ಯಕ್ರಮದಲ್ಲಿ ಜಿಲ್ಲಾ ಕ್ರೀಡಾಂಗಣದ ಮೈಲಾಪುರ ಆಗಸಿಯಿಂದ ಗಾಂಧಿಚೌಕ್ ಮಾರ್ಗವಾಗಿ ಕನಕ ವೃತ್ತದವರೆಗೂ ಮೆರವಣಿಗೆ ಮಾಡಲಾಯಿತು. ಮತ್ತು ಕನಕವೃತ್ತದಿಂದ ಜಿಲ್ಲಾ ಕ್ರೀಡಾಂಗಣವರೆಗೂ ಮಕ್ಕಳನ್ನು ಬಸ್‌ನಲ್ಲಿ ಕರೆದುಕೊಂಡು ಹೋಗಲಾಯಿತು. ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿರಿಗಳು ಜಿಲ್ಲಾ ಪಂಚಾಯತ್ ಯಾದಗಿರಿ ಶ್ರೀ ಲವೀಶ್ ಒರಡಿಯಾ, ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಶ್ರೀ ಸುರೇಶ್ ಆರ್. ಸಜ್ಜನ್, ಶ್ರೀ ಹೆಚ್.ಎಂ. ಸಿದ್ದರಾಮ ಸ್ವಾಮಿ, ಶ್ರೀ ಡಾ. ಕುಪ್ಪಗಲ್ ವೀರೇಶ್, ರಾಘವೇಂದ್ರ ಹಳ್ಳಳ್ಳಿ, ಶ್ರೀ ಸಿದ್ದಪ್ಪ ಹೊಟ್ಟಿ, ಇವರಿಂದ ಹಸಿರು ಧ್ವಜ ಹಾರಿಸುವುದರ ಮೂಲಕ ಬೃಹತ್ ಜಾಥಾಗೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆಯಿಂದ ಹಲವಾರು ವೇಷಧಾರಿಗಳು ಮತ್ತು ಗೊಂಬೆಗಳು ಮಕ್ಕಳ ಒಟ್ಟಿಗೆ ಜಾಥಾದಲ್ಲಿ ಭಾಗವಹಿದ್ದರು.

ಸಂಜೆ 4.30 ಗಂಟೆಗೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಸ್ಕೌಟ್–ಗೈಡ್ ಪ್ರಾರ್ಥನೆ ಗೀತೆ ಹಾಗೂ ನಾಡ ಗೀತೆಯನ್ನು ಸಾಮೂಹಿಕವಾಗಿ ಹಾಡಲಾಯಿತು. ಶ್ರೀ ಚನ್ನಾರೆಡ್ಡಿ ಪಾಟೀಲ್ ತನ್ನೂರರವರ ಅಧ್ಯಕ್ಷತೆಯಲ್ಲಿ ನಡೆದ ಜಾಂಬೋರೇಟ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಾಂಬೋರೇಟ್‌ನಲ್ಲಿ ಭಾಗವಹಿಸಿರುವ ಅತಿಥಿ–ಗಣ್ಯರೆಲ್ಲರನ್ನೂ ಶ್ರೀಮತಿ ಮಲ್ಲೇಶ್ವರಿ ಜುಜಾರೆ ಇವರು ಸ್ವಾಗತಿಸಿದರು. ಶ್ರೀ ಎಸ್.ಪಿ. ಸುಳ್ಳದ್, ಜಿಲ್ಲಾ ಆಯುಕ್ತರು (ಸ್ಕೌ) ಕಲಬುರಗಿ ಇವರು ಭಾರತ ಸಂವಿಧಾನದ ಪೀಠಿಕೆಯನ್ನು ಬೋಧಿಸಿದರು. ಪ್ರಾಸ್ತಾವಿಕ ನುಡಿಯಲ್ಲಿ ಶ್ರೀ ಸುರೇಶ್ ಆರ್. ಸಜ್ಜನ್‌ರವರು "ಕಲ್ಯಾಣ ಕರ್ನಾಟಕ ಜಂಬೂರೇಟ್‌ನ್ನು ಯಾದಗಿರಿ ಜಿಲ್ಲೆಯಲ್ಲಿ ಆಚರಿಸಲು ನಮಗೆ ಸಿಕ್ಕಿದ್ದು ನಮಗೆ ಸೌಭಾಗ್ಯ" ಎಂದು ಜಾಂಬೂರಿ ಬಗ್ಗೆ ಮತ್ತು ಜಾಂಬೂರೇಟ್ ಬಗ್ಗೆ ಮಾಹಿತಿ ತಿಳಿಸಿ ಸ್ಕೌಟಿಂಗ್ ಗೈಡಿಂಗ್ ಬೆಳದು ಬಂದ ಹಾದಿಯ ಬಗ್ಗೆ ತಿಳಿಸಿದರು. ಶ್ರೀ ಶರಣಪ್ಪ ಬಸಪ್ಪ ಗೌಡ ದರ್ಶನಾಪುರ ಜಿಲ್ಲಾ ಉಸ್ತುವಾರಿ ಸಚಿವರುರವರು ದೀಪ ಬೆಳಗಿಸುವುದರ ಮೂಲಕ ಹಾಗೂ ಬಣ್ಣ ಬಣ್ಣದ ಬೆಲೂನ್‌ಗಳನ್ನು ಬಿಡುಗಡೆ ಮಾಡುವುದರ ಮೂಲಕ ಜಾಂಬೋರೇಟ್ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ನಂತರ ಉದ್ಘಾಟಕರ ನುಡಿಯಲ್ಲಿ ಸ್ಕೌಟ್–ಗೈಡ್ ಸಂಸ್ಥೆ 115 ವರ್ಷಗಳು ದಾಟಿದ ಇತಿಹಾಸದಲ್ಲಿ ಇದೇ ಮೊಟ್ಟ ಮೊದಲಬಾರಿಗೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಎರಡನೇ ಜಾಂಬೋರೇಟ್ ನಮ್ಮ ಯಾದಗಿರಿ ಜಿಲ್ಲೆಯಲ್ಲಿ ನಡೆಯುತ್ತಿದೆ, ಇದೊಂದು ದಾಖಲೆಯಾಗಿದೆ".









ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯ ಜಾಂಬೂರೇಟ್ ಮಾಹಿತಿ ಕೈಪಿಡಿ ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿ "ಸ್ಕೌಟ್ಸ್ ಮತ್ತು ಗೈಡ್ಸ್ ನಿಂದ ಶಿಸ್ತು, ಸಮಯ, ಹಾಗೂ ಜ್ಞಾನ ಲಭಿಸುತ್ತದೆ. ಇದರಲ್ಲಿ ಇರುವ ಮಕ್ಕಳ ಉನ್ನತ ಸ್ಥಾನಕ್ಕೆ ಹೋಗುವುದರಲ್ಲಿ ಯಾವುದೇ ಅನುಮಾನ ಇಲ್ಲ" ಎಂದರು. "ಕೆ.ಕೆ.ಆರ್.ಡಿ.ಬಿ ಅಧ್ಯಕ್ಷರಾದ ಡಾ. ಅಜಯ್ ಸಿಂಗ್ ರವರು ನೀಡಿರುವ 5 ಕೋಟಿ ಅನುದಾನದಲ್ಲಿ ಒಂದು ಉತ್ತಮ ತರಬೇತಿ ಕೇಂದ್ರ ನಿರ್ಮಿಸಲಾಗುತ್ತದೆ ಈಗಾಗಲೇ ಬೀದರ್, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಕಟ್ಟಡಗಳು ನಿರ್ಮಿಸಲಾಗುತ್ತಿದೆ" ಎಂದು ತಿಳಿಸಿದರು. ಅಧ್ಯಕ್ಷತೆಯ ನುಡಿಯಲ್ಲಿ ಶಾಸಕರಾದ ಶ್ರೀ ಚನ್ನಾರೆಡ್ಡಿ ಪಾಟೀಲ್ ತನ್ನೂರ ಇವರು ಯಾದಗಿರಿ ಜಿಲ್ಲೆಯಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸುವ ಮೂಲಕ ನಮ್ಮ ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಸಾಕಷ್ಟು ಅನುಕೂಲ ಆಗಲಿದೆ" ಎಂದರು. ಶ್ರೀ ಬಂದಪ್ಪ ಹರಳಿ, ಶ್ರೀ ಪ್ರಸನಃ ಕುಮಾರ್, ಶ್ರೀ ಕೆ.ಡಿ. ಬಡಿಗೇರ, ಶ್ರೀ ಶ್ರೀಶೈಲ ಬಿರಾದಾರ್, ಜಿಲ್ಲಾ ಪಂಚಾಯತ್ ಸಿ.ಇ.ಓ ಶ್ರೀ ಲವೀಶ್ ಒರಡಿಯಾ, ಡಿ.ಡಿ.ಪಿ.ಐ ಶ್ರೀ ಚನ್ನಬಸಪ್ಪ ಮುಧೋಳ, ಶ್ರೀ ಪಟ್ಟೇದಾರ, ಶ್ರೀಮತಿ ನಾಗರತ್ನ ಅನಪೂರ, ಶ್ರೀ ರಾಘವೇಂದ್ರ ಹಳ್ಳಳ್ಳಿ, ಪಾಧರ್ ಸಜಿ ಜಾರ್ಜ್, ಶ್ರೀ ಮಹೇಶ್ ರೆಡ್ಡಿ, ಶ್ರೀ ಸಿದ್ದು ಪಾಟೀಲ್, ಶ್ರೀ  ಅಮರಯ್ಯ ಸ್ವಾಮಿ ಜಾಲಿಬೆಂಚಿ, ಶ್ರೀ ಹೆಚ್.ಎಮ್. ಸಿದ್ದಾರಾಮಸ್ವಾಮಿ, ರಾಜ್ಯ ಉಪಧ್ಯಕ್ಷರು, ಡಾ. ಕುಪ್ಪಗಲ್ ವೀರೇಶ್ ಜಿಲ್ಲಾ ಆಯುಕ್ತರು (ಸ್ಕೌ), ರಾಯಚೂರು ಜಿಲ್ಲೆಯಿಂದ ಬಸವರಾಜ ಬೋರಡ್ಡಿ, ಡಿ.ಸಿ.ಸಿ, ಬಸವರಾಜ್ ಗದುಗಿನ್ ಜಿಲ್ಲಾ ಕಾರ್ಯದರ್ಶಿ, ಶ್ರೀ ಸಾಗರ್ ತಾಲೂಕ ಅಧ್ಯಕ್ಷರು ರಾಯಚೂರು, ಶ್ರೀ ಶಿವಪ್ಪ, ಕಾರ್ಯದರ್ಶಿಗಳು ಮಸ್ಕಿ, ಶ್ರೀ ನರಸಿಂಹ ಮೂರ್ತಿ ಮಾನವಿ ಜಂಟಿ ಕಾರ್ಯದರ್ಶಿಗಳು, ಶ್ರೀ ಶರಣಪ್ಪ ಲಿಂಗಸೂಗುರು ಕಾರ್ಯದರ್ಶಿ ಮತ್ತು  ಮುಂತಾದವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶ್ರೀಮತಿ ಜ್ಯೋತಿ ಲತಾ ಇವರು ನೆರವೇರಿಸಿದರು.

**ಜಿಲ್ಲಾ ವೈಭವ ಕಾರ್ಯಕ್ರಮ :** ಸಾಯಂಕಾಲ 6:00 ಗಂಟೆಗೆ ಜಿಲ್ಲಾವಾರು ಒಂದೊಂದು ಮಳಿಗೆಯನ್ನು ನೀಡಲಾಗಿದ್ದು, ಆ ಸ್ಥಳದಲ್ಲಿ ತಮ್ಮ ಜಿಲ್ಲೆಯ ಐತಿಹಾಸಿಕ ಪ್ರಸಿದ್ಧ ಸ್ಥಳಗಳ ಸ್ಥಬ್ಧಚಿತ್ರಗಳು, ಜಿಲ್ಲೆಯ ವೈಭವಯುತ ಕಲೆ, ಪಾರಂಪರಿಕ ಸಂಸ್ಕೃತಿಯ ವೈಭವ, ವಿಜ್ಞಾನ ಮಾದರಿಗಳು, ಪಯೋನಿರಿಂಗ್ ಮಾದರಿಗಳು, ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳ ಸ್ಥಬ್ಧ ಚಿತ್ರಗಳನ್ನು ಪ್ರದರ್ಶಿಸಿದರು. ಈ ಜಿಲ್ಲಾ ವೈಭವ ಕಾರ್ಯಕ್ರಮವನ್ನು ಶ್ರೀ ಪಿ.ಜಿ.ಆರ್. ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರು, ಸುರೇಶ್ ಆರ್ ಸಜ್ಜನ್ ಜಾಂಬೂರೇಟ್ ಮುಖ್ಯಸ್ಥರು ಹಾಗೂ ಮುಂತಾದ ಅತಿಥಿಗಳು ವೀಕ್ಷಿಸಿ, ಪ್ರಶಂಸೆಗೈದರು.

ಸಾಯಂಕಾಲ 7.00 ಗಂಟೆಗೆ ಶ್ರೀ ಸುರೇಶ್ ಆರ್ ಸಜ್ಜನ್ ರವರ ಕನಸಿನಂತೆ ಆಳ್ವಾಸ್ ಶಿಕ್ಷಣ ಸಂಸ್ಥೆಯ 350 ಕ್ಕೂ ಹೆಚ್ಚು ವಿಧ್ಯಾರ್ಥಿಗಳು ಯಾದಗಿರಿಗೆ ಆಗಮಿಸಿ ಸುಂದರವಾದ ಭರತನಾಟ್ಯ, ಹುಲಿವೇಷ, ಮಲ್ಲಕಂಬ, ಶಿವನ ಮತ್ತು ವಿಷ್ಣುವಿನ ನೃತ್ಯ ಹೀಗೆ ಸುಮಾರು ಕಾರ್ಯಕ್ರಮಗಳನ್ನು ನೀಡಿದರು.

## ಜಾಂಬೋರೇಟ್‌ನ ಎರಡನೆಯ ದಿನ (ದಿ.:18–01–2025) :

ಬೆಳಿಗ್ಗೆ 06:30ಗೆ ಬಿ.ಪಿ.ರವರ ಆರು ವ್ಯಾಯಾಮಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ತದನಂತರ ಮಕ್ಕಳನ್ನು ಮೂರು ತಂಡಗಳಾಗಿ ವಿಂಗಡಿಸಿ, ಬೆಳಿಗ್ಗೆ 09:00 ಗಂಟೆಯಿಂದ ಮಧ್ಯಾಹ್ನ 01:00 ರವರೆಗೆ;

ತಂಡ 1ನ್ನು "ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆಗೆ" ತೆರಳಿ, ಈ ಕಾರ್ಯಕ್ರಮದ ಮುಖಾಂತರ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಮತ್ತು ಶಿಬಿರಾರ್ಥಿಗಳು ಶ್ರೀ ರಾಯಚೋಟಿ ವೀರಭದ್ರ ದೇವಸ್ಥಾನವನ್ನು ವೀಕ್ಷಸಿ ಸ್ವಚ್ಛತಾ ಕಾರ್ಯವನ್ನು ಕೈಗೊಂಡರು.

ತಂಡ 2 "ಸಾಹಸಮಯ ಚಟುವಟಿಕೆಗಳ ಕಾರ್ಯಕ್ರಮ"ದಲ್ಲಿ ಕಮಾಂಡೋ ಬ್ರಿಡ್ಜ್, ಟೈರ್ ಗೋಡೆ ಹತ್ತುವುದು, ಮಂಕಿ ಕ್ರಾವೆಲಿಂಗ್, ವೀಕ್ಷಣಾ ಗೋಪುರ ಮತ್ತು ಮುಂತಾದ ಸಾಹಸಮಯ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು. ಶ್ರೀ ಬಾಬುರಾವ್ ನಿಂಬೂರೆ ಜಿಲ್ಲಾ ತರಬೇತಿ ಆಯುಕ್ತರು(ಸ್ಕೌ) ಇವರ ನಾಯತ್ವದಲ್ಲಿ ಶ್ರೀ ಅನಿಲ್ ಶಾಸ್ತ್ರಿ, ಶ್ರೀ ಶಿವಣ್ಣ, ಶ್ರೀ ನಾಗರಾಜ, ಶ್ರೀ ಶಿವಕುಮಾರ ಮೆಣಸೆ, ಶ್ರಿ ಶಿವಕುಮಾರ ಸ್ವಾಮಿ, ಶ್ರೀ ಪ್ರತೀಕ್, ಶ್ರೀ ರಾಜು, ಶ್ರೀ ರಾಜೇಂದ್ರ, ರೋವರ್ಸ್‌ಗಳ ಸಹಯೋಗದೊಂದಿಗೆ ಈ ಚಟುವಟಿಕೆಯ ಮಾದರಿಗಳನ್ನು ಶಿಸ್ತುಬದ್ಧವಾಗಿ ನಿರ್ಮಾಣ ಮಾಡಲಾಗಿತ್ತು. ಸಾಹಸಮಯ ಚಟುವಟಿಕೆಗಳ ಉದ್ಘಾಟನೆಯನ್ನು ಗೌರವಾನ್ವಿತ ಶ್ರೀ ಪಿ.ಜಿ.ಆರ್. ಸಿಂಧ್ಯರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಹೆಚ್.ಎಂ. ಸಿದ್ದರಾಮ ಸ್ವಾಮಿ, ಡಾ. ಕುಪ್ಪಗಲ್ ವೀರೇಶ್, ಶ್ರೀಮತಿ ಮಲ್ಲೇಶವರಿ ಜುಜಾರೆ, ಶ್ರೀ ರಾಘವೇಂದ್ರ ಹಳ್ಳಳ್ಳಿ, ಶ್ರೀಮತಿ ಸುವರ್ಣ, ಶ್ರೀ ಬಸವರಾಜ ಗೋಗಿ ಮುಂತಾದವರು ಉಪಸ್ಥಿತರಿದ್ದರು.








ತಂಡ 3 "ಸ್ಕಿಲೋರಾಮ" ಸ್ಪರ್ಧೆ ಗಳಾದ ಮೆಹಂದಿ, ರಂಗೋಲಿ, ಪೇಪರ್ ಕಟಿಂಗ್, ಕ್ಲೇ ಮೋಡಲಿಂಗ್, ಪಯೋನಿಯರಿಂಗ್ ಮೋಡಲ್ಸ್, ಬೆಂಕಿ ಇಲ್ಲದೆ ಅಡುಗೆ ಮತ್ತು ತರಕಾರಿ ಮಾದರಿ ಇವುಗಳಲ್ಲಿ ಭಾಗವಹಿಸಿದ್ದರು.

**ರಸಪ್ರಶ್ನೆ ಕಾರ್ಯಕ್ರಮ :** ಶ್ರೀ ನಬಿ ಬಾಗ್ವಾನ್ ರವರ ನಾಯಕತ್ವದಲ್ಲಿ 'ಪೇಪರ್ ಲೆಸ್ ಕ್ವಿಜ್' ಆಯೋಜನೆ ಮಾಡಿದ್ದರು.

**ವಿವಿಧ ಮಾಹಿತಿ ಕೇಂದ್ರಗಳು :** ಸುಸ್ಥಿರ ಅಭಿವೃದ್ಧಿಯ ಗುರಿಗಳ ಬಗ್ಗೆ ಮಕ್ಕಳಿಗೆ ಮತ್ತು ಶಿಬಿರಾರ್ಥಿಗಳಿಗೆ ಕುಮಾರ ಮಲ್ಲಿಕಾರ್ಜುನ ಬೆಂಗಳೂರು ಹಾಗೂ ಅವರ ತಂಡದವರು ಓಜೊಮ್, ವ್ಯಾಗ್ಸ್ ಸಂಬಂದ ಚಟುವಟಿಕೆಗಳ ಮಾಹಿತಿಗಳನ್ನು ನೀಡಲಾಯಿತು.

ಮದ್ಯಾಹ್ನ 03:00ಗೆ "ಜಿಲ್ಲಾವಾರು ಯತ್ನಿಕ್ ಶೋ" ಕಾರ್ಯಕ್ರಮದಲ್ಲಿ ಸ್ಕೌಟ್ಸ್– ಗೈಡ್ಸ ಗಳು ಜಿಲ್ಲಾವಾರು ಸಂಪ್ರದಾಯ ಉಡುಗೆ ತೊಡುಗೆಗಳನ್ನು ಧರಿಸಿ ಯತ್ನಿಕ್ ಕಾರ್ಯಕ್ರಮವನ್ನು ನೆರವೇರಿಸಿದರು. ಸಂಜೆ 04:30 ಗಂಟೆಗೆ ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ಬೆಂಗಾಲಿ, ಮರಾಠಿ, ಬಂಜಾರ ಮುಂತಾದ ಮದುವೆಗಳ ಪ್ರಾತ್ಯಕ್ಷಿತೆ ಪ್ರದರ್ಶನ ನೀಡಿದರು.

ಸಂಜೆ 6.00 ಗಂಟೆಗೆ ಡಾ. ಜಗನ್ನಾಥ್‌ರಾವ್‌ರವರಿಂದ ಮಕ್ಕಳಿಗೆ ಮೋಟಿವೇಶನ್ ಸ್ಪೀಚ್ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಧ್ಯಾನದ ಮೂಲಕ ತಂದೆ, ತಾಯಿ, ಇಷ್ಟವಾದ ದೇವರು, ಪ್ರೀತಿಯ ಗುರುಗಳನ್ನು ನೆನಪಿಸಿಕೊಂಡು ಅವರ ಪಾದಗಳಿಗೆ ನಮಸ್ಕರಿಸುತ್ತಾ * ದುಡ್ಡು ಗಳಿಸುವುದು ತುಂಬಾ ಸುಲಭ  ಆದರೆ ಇದಕ್ಕೆ ಚಿಕ್ಕವಯಸ್ಸಿನಿಂದ ಏಕಾಗ್ರತೆ ಮತ್ತು ಶ್ರಮ ತುಂಬಾ ಪ್ರಾಮುಖ್ಯವಾಗುತ್ತದೆಎಂದು ತಿಳಿಸಿದರು. ಸಂಜೆ 7.00 ಗಂಟೆಗೆ ಪೌರಾಣಿಕ ನಾಟಕಗಳು ಜಿಲ್ಲಾವಾರು ಹಮ್ಮಿಕೊಳ್ಳಲಾಗಿತ್ತು.





## ಜಾಂಬೋರೇಟ್‌ನ ಮೂರನೆಯ ದಿನ (ದಿ.: 19–01–2025) :

ಬೆಳಿಗ್ಗೆ 06:30 ಗಂಟೆಗೆ ಯೋಗ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಯೋಗ ಸಾಧಕರಾದ ಶ್ರೀಮತಿ ಡಾ. ಸಂಗೀತಾ ಅಶೋಕ್ ಗೌಳಿ ರವರು ಪ್ರಾಣಾಯಾಮ, ದ್ಯಾನ, ಯೋಗದ ವಿವಿಧ ಪ್ರಕಾರಗಳನ್ನು ಹೇಳಿಕೊಟ್ಟರು. ಶಿಬಿರದ ನಾಯಕರು– ಸಹನಾಯಕರು, ಶಿಬಿರದ ಉಪನಾಯಕರು–ಉಪನಾಯಕಿಯರು ಮತ್ತು ಮಕ್ಕಳು ಉಪಸ್ಥಿತರಿದ್ದರು.

ಬೆಳಿಗ್ಗೆ 09:00 ಗಂಟೆಯಿಂದ ಮಧ್ಯಾಹ್ನ 01:00 ರವರೆಗೆ ತಂಡವಾರು "ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆ, ಸಾಹಸಮಯ ಚಟುವಟಿಕೆಗಳ ಕಾರ್ಯಕ್ರಮ, ಸ್ಕಿಲೋರಾಮ, ಹಾಗೂ ಎಸ್.ಡಿ.ಜಿ ಕೇಂದ್ರಗಳ ಸ್ಪರ್ಧೆ/ಚಟುವಟಿಕೆಗಳಲ್ಲಿ ಭಾಗವಹಿಸಿದರು.

ಮಧ್ಯಾಹ್ನ 03:30 ಗಂಟೆಯಿಂದ "ಜಾತ್ರಾ ಉತ್ಸವ" ಕಾರ್ಯಕ್ರಮದಲ್ಲಿ ಪ್ರತಿ ಜಿಲ್ಲೆಯಿಂದ ಎಲ್ಲರೂ ಕೂಡಿ ತಮ್ಮ ತಮ್ಮ ಜಿಲ್ಲೆಯಲ್ಲಿ ನಡೆಯುವ ಪ್ರಸಿದ್ಧ ಜಾತ್ರೋತ್ಸವಗಳನ್ನು ಪ್ರದರ್ಶಿಸಿದರು. ಸಂಜೆ "ಶಿಬಿರಾಗ್ನಿ" ಕಾರ್ಯಕ್ರಮದಲ್ಲಿ ಸಂಸ್ಕೃತಿಕ ಕಾರ್ಯಕ್ರಮಗಳ ಚಟುವಟಿಕೆಯನ್ನು ಹಮ್ಮಿಕೊಳ್ಳಲಾಗಿತ್ತು. ರಾತ್ರಿ 8.00 ಗಂಟೆಗೆ ಬೇಬಿ ಮಾಹನ್ಯಾ ಪಾಟೀಲ್, ಸಂಗೀತಗಾರರು, ಸರಿಗಮಪ ಇವರಿಂದ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿತ್ತು.











## ಜಾಂಬೋರೇಟ್‌ನ ನಾಲ್ಕನೆಯ ದಿನ (ದಿ.:20–01–2025) :

ಬೆಳಿಗ್ಗೆ 06:30ಗೆ "ಏರೋಬಿಕ್ ವ್ಯಾಯಾಮ" ಕಾರ್ಯಕ್ರಮವನ್ನು ಡಾ. ಸಂಗೀತಾ ಅಶೋಕ್ ಗೌಳಿ ಏರೋಬಿಕ್ ತರಬೇತುದಾರರು, ಪ್ರದರ್ಶಿಸಿ, ಮಾನಸಿಕ, ದೈಹಿಕ, ಭಾವನಾತ್ಮಕವಾಗಿ ಮಕ್ಕಳಿಗೆ ಉತ್ಸಾಹದ ಜೊತೆಗೆ ಉತ್ತಮವಾಗಿ ತರಬೇತಿಯನ್ನು ನೀಡಿದರು.

ಬೆಳಿಗ್ಗೆ 09:00 ಗಂಟೆಯಿಂದ ಮಧ್ಯಾಹ್ನ 01:00 ರವರೆಗೆ ತಂಡಾವಾರು "ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆ, ಸಾಹಸಮಯ ಚಟುವಟಿಕೆಗಳ ಕಾರ್ಯಕ್ರಮ, ಸ್ಕಿಲೋರಾಮ, ಹಾಗೂ ಎಸ್.ಡಿ.ಜಿ ಕೇಂದ್ರಗಳ ಸ್ಪರ್ಧೆ/ಚಟುವಟಿಕೆಗಳಲ್ಲಿ ಭಾಗವಹಿಸಿದರು.

ಮಧ್ಯಾಹ್ನ 02:30 ರಿಂದ 04:30 ರವರೆಗೆ "ಬ್ಯಾಂಡ್‌ಸೆಟ್ ವಾದನ, ಕಲರ್ ಪಾರ್ಟಿ ಮತ್ತು ಪಥ ಸಂಚಲನೆ" ಮಾಡಲಾಯಿತು. ಡಾ. ಅಬ್ದುಲ್ ಖದೀರ್ ಅಧ್ಯಕ್ಷರು, ಶಾಹೀನ್ ಶಿಕ್ಷಣ ಸಮೂಹ ಸಂಸ್ಥೆ, ಬೀದರ್, ಹಾಗೂ ಶ್ರೀಮತಿ ಗುರ್ರಮ್ಮ ಸಿದ್ದಾರೆಡ್ಡಿ, ಇವರಿಂದ ಉದ್ಘಾಟನೆ ನೇರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಪಿ.ಜಿ.ಆರ್.ಸಿಂಧ್ಯರವರು ವಹಿಸಿದ್ದರು, ಹಾಗೂ ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರು ಬೀದರ್, ಶ್ರೀ. ಸಿ.ಎಸ್. ರೆಡ್ಡಿ ರಾಜ್ಯ ಆಯುಕ್ತರು (ವಯಸ್ಕರ ಸಂಪನ್ಮೂಲ), ಶ್ರೀ ಪ್ರಭಾಕರ ಭಟ್ ರಾಜ್ಯ ಸಂಘಟನಾ ಆಯುಕ್ತರು, ಶ್ರೀ ಸಿ.ಎಸ್. ಮುಧೋಳ್ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಸುರೇಶ್ ಸಜ್ಜನ್ ಜಿಲ್ಲಾ ಅಧ್ಯಕ್ಷರು, ಶ್ರೀ ರಾಘವೇಂದ್ರ ಹಳ್ಳಳ್ಳಿ ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ. ಮಲ್ಲೇಶ್ವರಿ ಜುಜಾರೆ, ಶ್ರೀ ಬಸವರಾಜ್ ಗೋಗಿ ಶ್ರೀಮತಿ. ಸುವರ್ಣ ಹಳ್ಳಳ್ಳಿ, ಈ ಸಂದರ್ಭದಲ್ಲಿ ಇವರೆಲ್ಲ ಉಪಸ್ಥಿತರಿದ್ದರು. ಶ್ರೀ ಶಿವಣ್ಣ ದಾವಣಗೆರೆ, ಶ್ರೀ ನಾಗರಾಜ ಬಳ್ಳಾರಿ, ಶ್ರೀ ಭರ್‌ಶೆಟ್ಟಿ ಬೀದರ್ ಇವರುಗಳು ನಿರ್ಣಾಯಕರಾಗಿ ಕಾರ್ಯನಿರ್ವಹಿಸದರು.

ಸಂಜೆ 06:00ಕ್ಕೆ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ಪಿ.ಜಿ.ಆರ್.ಸಿಂಧ್ಯರವರು ವಹಿಸಿದ್ದರು ಹಾಗೂ ಮುಖ್ಯ ಅತಿಥಿಗಳಾಗಿ ಶ್ರೀ ರವಿಕುಮಾರ್, ವಿರೋಧ ಪಕ್ಷದ ಮುಖ್ಯ ಸಚೇತಕರು ಕರ್ನಾಟಕ ವಿಧಾನ ಪರಿಷತ್ತು ಇವರು ಭಾಗವಹಿಸಿ "ನಾನು ಕಾರ್ಯಕ್ರಮದಲ್ಲಿ ಭಾಗವಹಿದಕ್ಕೆ ತುಂಬಾ ಸಂತೋಷವಗಿದೆ ಹಿಂದುಳಿದ ಜಿಲ್ಲೆಯಾದ ಯಾದಗಿರಿ ಜಿಲ್ಲೆಯಲ್ಲಿ ಜಾಂಬೊರೇಟ್ ತುಂಬಾ ಶೋಭೆ ಕೊಟ್ಟಿದೆ ಮುಂದೆ ದಿನಗಳಲ್ಲಿ ಸ್ಕೌಟಿಂಗ್‌ನ ಹೆಚ್ಚು ಕಾರ್ಯಕ್ರಮಗಳು ನಡೆಯಬೇಕು" ಎಂದು ತಿಳಿಸಿದರು. ಸಮಾರೋಪ ಸಮಾರಂಭದ ಕಾರ್ಯಕ್ರಮವನ್ನು ಶ್ರೀ ಸುರೇಶ್ ಆರ್. ಸಜ್ಜನ್‌ರವರು ನೆರವೇರಿಸಿದರು. ಅಧ್ಯಕ್ಷತೆ ನುಡಿಯಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯರವರು "ಕಲ್ಯಾಣ ಕರ್ನಾಟಕ ಎರಡನೇಯ ಜಾಂಬೋರೇಟ್ ತುಂಬಾ ಯಶಸ್ವಿ ಆಗಿದೆ" ಎಂದು ಮುಂದಿನ ಜಾಂಬೋರೇಟ್ ಕಲಬುರಗಿ ಜಿಲ್ಲೆಯವರು ನಡೆಸಲು ತೀರ್ಮಾನಿಸಿ, ಕಲಬುರ್ಗಿ ಜಿಲ್ಲಾ ಪದಾಧಿಕಾರಿಗಳಿಗೆ ಟ್ರೋಫಿಯನ್ನು ನೀಡಲಾಯಿತು.



ಕಾರ್ಯಕ್ರಮದಲ್ಲಿ ಪ್ರಮುಖರಾದ ಕಲಬುರಗಿ ಜಿಲ್ಲಾ ಆಯುಕ್ತ (ಗೈ) ಶ್ರೀಮತಿ ನಾಗರತ್ನಾ ದಿಗ್ಗಾವಿ, ಶ್ರೀ ಚನ್ನವೀರಸ್ವಾಮಿ ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಭಾಗೀರಥಿ ಜಿಲ್ಲಾ ಆಯುಕ್ತರು ಧಾರವಾಡ ಶ್ರೀಮತಿ ಮಂಗಳಾ ಭಾಗವತ್ ಜಿಲ್ಲಾಯುಕ್ತರು (ಗೈಡ್) ಬೀದರ್, ಶ್ರೀ ಮಾರುತಿ ಆರೇರ್ ಜಿಲ್ಲಾ ಕಾರ್ಯದರ್ಶಿಗಳು ಕೊಪ್ಪಳ, ಶ್ರೀ ರಾಜಶೇಕರ ದೇಸಾಯಿ, ಕಾರ್ಯದರ್ಶಿಗಳು ಸುರಪುರ, ಶ್ರೀ ರಮೇಶ ತಿಪ್ಪಶೆಟ್ಟಿ ಕಾರ್ಯದರ್ಶಿಗಳು, ಬೀದರ್, ಶ್ರೀಮತಿ ಜಯಲಲಿತಾ ಪಾಟೀಲ್, ಶ್ರೀ ಸುಧಾಕರ ಗುಡಿ ಶಹಪೂರ, ಶ್ರೀ ವಿಶ್ವನಾಥ ರೆಡ್ಡಿ ದರ್ಶನಾಪುರ ಶಹಪುರ ಹಾಗೂ ಮುಂತಾದವರು ಭಾಗವಹಿಸಿದ್ದರು.












### ಜಾಂಬೋರೇಟ್‌ನ ಐದನೆಯ ದಿನ (ದಿ.:21-01-2025) :

ಕಲ್ಯಾಣ ಕರ್ನಾಟಕ ಪ್ರಥಮ ಜಾಂಬೋರೇಟ್‌ನ ಕೊನೆಯ ದಿನವಾದ ಇಂದು ಬೆಳಿಗ್ಗೆ 07:30ಗೆ "ಸರ್ವಧರ್ಮ ಪ್ರಾರ್ಥನೆ" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಜಾಂಬೋರೇಟ್ ನಾಯಕಿ ಶ್ರೀಮತಿ ಸುವರ್ಣ ಹಳ್ಳಿಳ್ಳಿ ರವರು ನಡೆಸಿಕೊಟ್ಟರು, ಶಿಬಿರದ ಸಂಯೋಜಕಿ ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಶಿಬಿರದ ನಾಯಕರಾದ ಬಸವರಾಜ ಗೋಗಿ ಮುಂತಾದವರು ಹಾಗೂ ಶಿಬಿರದ ಉಪನಾಯಕರು-ಉಪನಾಯಕಿಯರು ಉಪಸ್ಥಿತರಿದ್ದರು.

ನಂತರ ಧ್ವಜಾರೋಹಣ, ವಸತಿಯ ಸುತ್ತಮುತ್ತಲೂ ಹಾಗೂ ಕಾಲೇಜು ಪರಿಸರದಲ್ಲಿ ಸ್ವಚ್ಛತಾ ಕಾರ್ಯ ನಡೆಯಿತು. ಸ್ಕೌಟ್ಸ್-ಗೈಡ್ಸ್‌ಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ನಂತರ ವೇದಿಕೆಯ ಮೇಲೆ ರಸ್ತೆ ಸುರಕ್ಷಿತಾ ಕಾರ್ಯಕ್ರಮದ ತರಬೇತಿಯನ್ನು ಅಧಿಕಾರಿಗಳಿಂದ ನೀಡಲಾಯಿತು. ನಂತರ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ, ನೆನಪಿನ ಕಾಣಿಕೆ, ಸಿಬ್ಬಂದಿಗಳಿಗೆ ಅಭಿನಂದನಾ ಪ್ರಮಾಣ ಪತ್ರ, ವಿತರಣೆ ಹಾಗು ಜಿಲ್ಲಾವಾರು ಜಾಂಬೊರೇಟ್ ಪ್ರಶಸ್ತಿ ಪತ್ರವನ್ನು ನೀಡಲಾಯಿತು.

### ಜಾಂಬೊರೇಟ್ ಕಾರ್ಯಕ್ರಮಕ್ಕೆ ದೇಣಿಗೆ :

- ಡಾ. ಅಬ್ದುಲ್ ಖದೀರ್ ಇವರಿಂದ ರೂ. 7,00,000/- ಮೌಲ್ಯದ ವೇದಿಕೆಗೆ ಎಲ್.ಇ.ಡಿ. ಸ್ಕ್ರೀನ್ ಅಳವಡಿಸಲಾಗಿದೆ.
- ಬೀದರ್ ಜಿಲ್ಲೆಯ ಮುಖ್ಯ ಆಯುಕ್ತರು ಶ್ರೀಮತಿ ಗುರ್‌ಮ್ಮ ಸಿದ್ದಾರೆಡ್ಡಿ ರೂ. 1,00,000/- ನೀಡಿರುತ್ತಾರೆ. ಬಳ್ಳಾರಿ ಜಿಲ್ಲೆಯಿಂದ 10 ಕ್ವಿಂಟಾಲ್ ಅಕ್ಕಿ ನೀಡಿರುತ್ತಾರೆ. ಕಲಬುರಗಿ ಜಿಲ್ಲೆಯಿಂದ 5 ಕ್ವಿಂಟಾಲ್ ಬೇಳೆ ನೀಡಿರುತ್ತಾರೆ. ವಿಜಯನಗರ ಜಿಲ್ಲೆಯಿಂದ ರೂ. 30,000/- ನೀಡಿರುತ್ತಾರೆ.
- ರಾಯಚೂರು ಜಿಲ್ಲೆಯ 5 ಕ್ವಿಂಟಾಲ ಅಡುಗೆ ಎಣ್ಣೆ ದೇಣಿಗೆಯನ್ನು ನಿಡಿರುತ್ತಾರೆ.
- ಶ್ರೀ ಸಿದ್ದಪ್ಪ ಹೊಟ್ಟಿ ಮುಖ್ಯ ಅತಿಥಿಗಳಿಗೆ ಹಾಗೂ ಶಾಲೆಗಳಿಗೆ ನೆನಪಿನ ಕಾಣಿಕೆ ನೀಡಿರುತ್ತಾರೆ.
- ಶ್ರೀ ಕೆ. ನಾಗೇಶ್ ಅಧ್ಯಕ್ಷರು ಹಾಗೂ ಶ್ರೀ ಚಂದ್ರಶೇಖರ ನುಗ್ಲೆ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಪ್ರಾಥಮಿಕ ಶಿಕ್ಷಕರ ಸಂಘ ಬೆಂಗಳೂರು ಇವರು ಮಕ್ಕಳಿಗೆ ಕ್ಯಾಪ್‌ಗಳನ್ನು ದೇಣಿಗೆ ನೀಡಿರುತ್ತಾರೆ
- ಶ್ರೀ ವಿಶ್ವನಾಥ ರೆಡ್ಡಿ ದರ್ಶನಾಪುರ್ ಮತ್ತು ಶ್ರೀ ಮಹೇಶ್ ರೆಡ್ಡಿ ಮುದ್ನಾಳ ಇವರು ಕುಡಿಯುವ ನೀರಿನ ಸ್ಟೀಲ್ ಬಾಟಲ್‌ಗಳನ್ನು ಮಕ್ಕಳಿಗೆ ದೇಣಿಗೆ ನೀಡಿರುತ್ತಾರೆ
- ಶ್ರೀ ಸುರೇಶ್ ಸಜ್ಜನ್ ಮತ್ತು ಶ್ರೀ ನಾಗರಾಜ್ ಇವರು ಮಕ್ಕಳಿಗೆ ಬ್ಯಾಗ್‌ಗಳನ್ನು ದೇಣಿಗೆ ನೀಡಿರುತ್ತಾರೆ.
- ಇನ್ನೂ ಹಲವಾರು ದಾನಿಗಳು ಈ ಕಾರ್ಯಕ್ರಮಕ್ಕೆ ದೇಣಿಗೆ ನೀಡಿರುತ್ತಾರೆ.
- ಸರ್ವಿಸ್ ರೋವರ್/ರೇಂಜರ್ಸ್ ಇಂಚಾರ್ಜಗಳಾಗಿ ಶ್ರೀಮತಿ ಅನುರಾಧ, ಶ್ರೀ ಸಿದ್ದಲಿಂಗ ಮೂರ್ತಿ ರವರು ತುಂಬಾ ಚೆನ್ನಾಗಿ ಜಬಾಬ್ದಾರಿಯನ್ನು ವಹಿಸಿಕೊಂಡು ಈ ಕಾರ್ಯಕ್ರಮವನ್ನು ಯಶ್ವಸ್ವಿಯಾಗಿ ಮಾಡಿರುತ್ತಾರೆ
- ಶ್ರೀ ಸುರೇಶ್ ಸಜ್ಜನ್, ಶ್ರೀ ರಾಘವೇಂದ್ರ ಹಳ್ಳಿಳ್ಳಿ, ಶ್ರೀ ಅನಿಲ್ ಮಲಗೊಂಡ, ಶ್ರೀ ಅಶೋಕ್ ಕೆಂಭಾವಿ, ಶ್ರೀ ಬಸವ ರೆಡ್ಡಿ ಮಾಲಿ ಪಾಟೀಲ್, ಶ್ರೀ ಅಮೃತಪ್ಪ ಮತ್ತಿತರು ಊಟದ ವ್ಯವಸ್ಥೆ ಸುಂದರವಾಗಿ ನೆರವೇರಿಸಿಕೊಟ್ಟರು ಮತ್ತು ಕ್ರೀಡಾಂಗಣದಲ್ಲಿ ನಡೆದ ಎಲ್ಲಾ ಕಾರ್ಯಕ್ರಮಳಿಗೆ ಶ್ರಮಿಸಿದರು.
- ಭಾಗವಹಿಸಿದ ಎಲ್ಲಾ ಸ್ಕೌಟ್ಸ್-ಗೈಡ್ಸ್‌ಗಳಿಗೆ ಸುಂದರವಾದ ಭಾವಚಿತ್ರದ ಮತ್ತು ಸಂಪೂರ್ಣ ವಿವರಗಳಿರುವ ಐ.ಡಿ. ಕಾರ್ಡ್ ತಯಾರಿಸಿದ ಶ್ರೀ ನಾಗರಾಜ ಶರಣಪ್ಪ ರವರು ಮಕ್ಕಳಿಗೆ ಅತ್ಯಂತ ಪ್ರೀತಿಪಾತ್ರರಾಗಿದ್ದಾರೆ.
- ಸುಂದರವಾರದ ಆಹ್ವಾನ ಪತ್ರಿಕೆ ಮತ್ತು ಬೀದಿಗಳಲ್ಲಿ ಹಾಕಿದ ಬ್ಯಾನರ್ ಪತ್ರಿಕೆಗಳ ಜವಾಬ್ದಾರಿ ಹೊತ್ತ ಶ್ರೀ ರಾಘವೇಂದ್ರ ಹಳ್ಳಿಳ್ಳಿ ಜಿಲ್ಲಾ ಕಾರ್ಯದರ್ಶಿ ಹಾಗೂ ಶ್ರೀ ಸಿದ್ದು ಪಾಟೀಲ್ ಜಾಂಬೊರೇಟ್ ಖಜಾಂಚಿ ರವರುಗಳು ವಹಿಸಿಕೊಂಡು ಯಶಸ್ವಿಗೊಳಿಸಿದರು.
- ಜಿಲ್ಲಾ ಸಂಸ್ಥೆಯಿಂದ ಮಕ್ಕಳಿಗೆ ಟೀ-ಶರ್ಟ್ಸ್ ನೀಡಲಾಯಿತು.

ಧ್ವಜ ಅವರೋಹಣ ಕಾರ್ಯಕ್ರಮದೊಂದಿಗೆ ಕಲ್ಯಾಣ ಕರ್ನಾಟಕ ಎರಡನೇ ಜಾಂಬೋರೇಟ್ ಮುಕ್ತಾಯಗೊಂಡಿತು.






## ರಾಜ್ಯ ಕೇಂದ್ರ ಕಛೇರಿಯಲ್ಲಿ

# 76ನೇ ಗಣರಾಜ್ಯೋತ್ಸವ ದಿನಾಚರಣೆ



ಜನವರಿ 26 ರಂದು ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ ಆವರಣದಲ್ಲಿ 76ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಇತ್ತೀಚೆಗೆ ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ, ಹಿರಿಯ ಜಾನಪದ ವಿದ್ವಾಂಸರು ಹಾಗೂ ರಾಜ್ಯ ಸಂಸ್ಥೆಯ ಪ್ರಕಟಣಾ ಸಮಿತಿ ಅಧ್ಯಕ್ಷರು ಮತ್ತು ನಮ್ಮೆಲ್ಲರ ಮಾರ್ಗದರ್ಶಕರು ಆಗಿರುವ ನಾಡೋಜ ಡಾ॥ ಗೊ.ರು. ಚನ್ನಬಸಪ್ಪನವರು 76ನೇ ಗಣರಾಜ್ಯೋತ್ಸವದ ರಾಷ್ಟ್ರಧ್ವಜವನ್ನು ಅವರೋಹಣಗೊಳಿಸಿ ನಂತರ ಸಂದೇಶ ನೀಡಿದರು. ಸಂವಿಧಾನದ ರಚನೆ, ಅದರ ಮಹತ್ವ, ರಾಷ್ಟ್ರಭಕ್ತಿ, ತ್ಯಾಗಿಗಳ ಸೇವೆ, ಮಕ್ಕಳು ತಿಳಿಯಬೇಕಾದ ಮೌಲ್ಯಗಳ ಬಗ್ಗೆ ಮಾತನಾಡಿ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳನ್ನು ಪ್ರೋತ್ಸಾಹಿಸಿದರು.

ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಸಂವಿಧಾನದ ಪೀಠಿಕೆಯನ್ನು ಓದಿ ಎಲ್ಲಾ ಮಕ್ಕಳಿಂದಲೂ ಮರು ಉಚ್ಚರಿಸಿ ಅದರ ಅರ್ಥವನ್ನು ವಿವರಿಸಿದರು.

ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಉಪಾಧ್ಯಕ್ಷರು ಮಾತನಾಡಿ ನಾಡೋಜ ಡಾ॥ ಗೊ.ರು. ಚನ್ನಬಸಪ್ಪರವರ ಸೇವೆ, ಸರಳತೆ, ಮೌಲ್ಯಗಳ ಪಾಲನೆಯ ಪರಿಚಯ ಮಾಡಿ ಸ್ಕೌಟ್ಸ್, ಗೈಡ್ಸ್‌ಗಳೂ ಸಹ ಈ ರೀತಿ ಜೀವನ ಸಾಗಿಸುವಂತೆ ಪ್ರೇರಣೆ ನೀಡಿದರು.

ಈ ಸಂದರ್ಭದಲ್ಲಿ ಕ್ಲೂನಿ ಕಾನ್ವೆಂಟ್‌ನ ಬುಲ್‌ಬುಲ್ಸ್‌ಗಳು, ಜ್ಯೋತಿ ನಿವಾಸ ಕಾಲೇಜು, ಹಿಲ್‌ವಿವ್ ಪಬ್ಲಿಕ್ ಶಾಲೆಯ ಸ್ಕೌಟ್ಸ್, ಗೈಡ್ಸ್, ಕಂಠೀರವ ಮುಕ್ತದಳಗಳಿಂದ ಒಟ್ಟು 130 ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್‌ಗಳು ಭಾಗವಹಿಸಿದ್ದರು ಹಾಗೂ ಅತ್ಯುತ್ತಮವಾಗಿ ದೇಶಭಕ್ತಿ ಸಿಂಚನದ ನೃತ್ಯ, ಹಾಡು ಹಾಗೂ ಯೋಗ ಮಾಡುವುದರ ಮೂಲಕ ಉತ್ತಮ ಪ್ರದರ್ಶನವನ್ನು ನೀಡಿದರು.

ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈ), ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಆಯುಕ್ತರು (ಗೈ) ವಯಸ್ಕ ಸಂಪನ್ಮೂಲ, ಶ್ರೀಮತಿ ಅರ್ಪಿತಾ ಕೊಂಡಜ್ಜಿ, ಕೇಂದ್ರ ಸ್ಥಾನಿಕ ಆಯುಕ್ತರು (ಗೈ), ಶ್ರೀಮತಿ ಮುಕ್ತಾ ಕಾಗಲಿ, ಕೇಂದ್ರ ಸ್ಥಾನಿಕ ಆಯುಕ್ತರು, ಶ್ರೀ ಎಂ. ಶ್ರೀನಿವಾಸ್, ಹಿರಿಯ ಸ್ಕೌಟ್ ನಾಯಕರು, ಕಂಠೀರವ ಸ್ಕೌಟ್ ದಳ, ಶ್ರೀಮತಿ ಮೇರಿ ಫಿಲೋಮಿನಾ, ಎಲ್.ಟಿ (ಫ್ಲಾಕ್), ಕ್ಲೂನಿ ಕಾನ್ವೆಂಟ್, ಶ್ರೀಮತಿ ಅಶ್ವಿನಿ, ಶ್ರೀಮತಿ ಲತಾ ಕೊಂಡಜ್ಜಿ, ಕಂಠೀರವ ಸ್ಕೌಟ್ ದಳದ ಸ್ಕೌಟ್ ಮಾಸ್ಟರ್ ಶ್ರೀ ಪುನೀತ್, ರಾಜ್ಯ ಸಂಸ್ಥೆಯ ಪದಾಧಿಕಾರಿಗಳು, ಸಿಬ್ಬಂದಿ ವರ್ಗದವರು ಹಾಗೂ ಸ್ಕೌಟರ್ಸ್ ಮತ್ತು ಗೈಡರ್ಸ್ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.











# ಜಿಲ್ಲಾ ವಾರ್ತೆಗಳು

## ಬೆಳಗಾವಿ

* ಜನವರಿ 17 ರಂದು ನಿಪ್ಪಾಣಿ ನಗರದಲ್ಲಿ ಪೋಲೀಸ್ ಇಲಾಖೆಯ ಸಹಕಾರದೊಂದಿಗೆ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿಪ್ಪಾಣಿ ಗ್ರಾಮೀಣ ಪೋಲೀಸ್ ಠಾಣೆಯ ಪಿ.ಎ.ಎಸ್ ಶ್ರೀ ಶಿವಾನಂದ ನಾಯಕವಾಡಿ ವಹಿಸಿದ್ದರು. ಕಾರ್ಯಕ್ರಮದ ಕುರಿತು ಪಿ.ಎ.ಐ.ರವರು ಮಾತನಾಡುತ್ತಾ "ಕಿರಿಯರು ಹಿರಿಯರು ಎಲ್ಲರೂ ರಸ್ತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಹೇಳುತ್ತಾ ರಸ್ತೆಯಲ್ಲಿ ನಡೆಯುವಾಗ ಎಡ-ಬದಿಯಿಂದ ಸಾಗಬೇಕು ರಸ್ತೆ ಮಧ್ಯೆ ಇರುವ ಜೇಬ್ರಾಕ್ರಾಸಿಂಗ್ ಮೂಲಕ ರಸ್ತೆಯನ್ನು ದಾಟಬೇಕು ರಸ್ತೆಯಲ್ಲಿ ಗುಂಪು-ಗುಂಪಾಗಿ ಹೋಗಬಾರದೆಂದು" ಎಚ್ಚರಿಕೆಯ ಮಾತುಗಳನ್ನು ಹೇಳಿದರು. ನಂತರ ಕ್ಷೇತ್ರ ಸಮನ್ವಯ ಅಧಿಕಾರಿಗಳಾದ ಶ್ರೀ ಆರ್.ಎ. ಕಾಗೆ ಮಾತನಾಡುತ್ತಾ "ರಸ್ತೆಯ ನಿಯಮಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪಾಲನೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ಜೊತೆಗೆ ನಮ್ಮ ನಮ್ಮ ಮನೆಯಲ್ಲಿ ರಸ್ತೆ ನಿಯಮಗಳ ಬಗ್ಗೆ ಜಾಗೃತಿ ವಹಿಸುವುದು ಉತ್ತಮ" ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಹೆಚ್ಚುವರಿ ಪಿ.ಎಸ್.ಐ ಶ್ರೀ ಬಿ.ಕೆ. ಪಾಟೀಲ, ಶ್ರೀ ಎ.ಎಸ್. ಭಜಂತ್ರಿ, ದೈಹಿಕ ಶಿಕ್ಷಣ ಪರೀಕ್ಷಕರಾದ ಶ್ರೀ ಎಸ್.ಎಂ. ಪಡಲಿಹಾಳ, ಸಿಆರ್‌ಪಿ ಶ್ರೀ ಎಸ್.ಬಿ. ತರಾಳ ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ ಎಸ್.ಎನ್. ಯಲ್ಲಟ್ಟಿ, ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀ ಎನ್.ಜಿ. ಪಾಟೀಲ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಟಿ.ಬಿ. ಲೋಕರೆ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 250ಕ್ಕೂ ಹೆಚ್ಚು ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾಗೂ ಸ್ಕೌಟ್ಸ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್‌ಗಳು ಭಾಗವಹಿಸಿದ್ದರು. ಶ್ರೀ ಎಸ್.ಆರ್. ಮಗದುಮ ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀ ಎಸ್.ಪಿ. ಜಗದಾಳೆ ವಂದಿಸಿದರು.



* ಜನವರಿ 13 ರಂದು ಚಿಕ್ಕೋಡಿ ತಾಲೂಕಿನ ಯಕ್ಸಂಬಾ ಗ್ರಾಮದ ಶ್ರೀ ಚನ್ನಬಸಪ್ಪ ಕರಾಳೆ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜು ಮಕ್ಕಳಿಗೆ ಒಂದು ದಿನದ ಸ್ಕೌಟ್ಸ್ ಮತ್ತು ಗೈಡ್ ತರಬೇತಿ ಕಾರ್ಯಾಗಾರವು ಜರುಗಿತು. ಸದರಿ ಕಾರ್ಯಾಗಾರದ ವೇದಿಕೆ ಕಾರ್ಯಕ್ರಮದಲ್ಲಿ ಸಂಸ್ಥೆಯ ಯುವ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಕರಾಳೆ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಎಂ.ಎ. ಚೌಗಲಾ ಕಾರ್ಯಕ್ರಮದ ಕುರಿತು ಪ್ರಸ್ತಾವಿಕ ನುಡಿಗಳನ್ನು ಆಡಿದರು. ಶಿಸ್ತು ಮತ್ತು ಸೇವಾ ಮನೋಭಾವಕ್ಕೆ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ ಸಾಕ್ಷಿಯಾಗಿದೆ ಎಂದು ಹೇಳಿದರು. ಜಿಲ್ಲಾ ಸಂಘಟನಾ ಶಿಕ್ಷಕರು ತರಬೇತಿ ಕುರಿತು ಮಾತನಾಡುತ್ತಾ ಚಳುವಳಿಯಿಂದ ಮಕ್ಕಳಿಗೆ ಸಿಗುವಂತಹ ಪ್ರಯೋಜನ ಕುರಿತು ಮಾತನಾಡಿದರು. ವೇದಿಕೆಯಲ್ಲಿ ಪ್ರಾಥಮಿಕ ಶಾಲೆಯ ಪ್ರಧಾನ ಗುರುಗಳು ಶ್ರೀ ಸಂತೋಷ ಮಿರ್ಜೆ, ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಶ್ರೀ ಮುತ್ನಾಳೆ, ಪದವಿ ಮಹಾ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ರಾಹುಲ ಪಾಟೀಲ, ರೋವರ್ ಸ್ಕೌಟ್ ಲೀಡರ್ ಶ್ರೀ ಅಜಯ ಮೋನೆ, ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀ ಎನ್.ಜಿ. ಪಾಟೀಲ, ಗೈಡ್ ಕ್ಯಾಪ್ಟನ್ ಶ್ರೀಮತಿ ಎಸ್.ಡಿ. ಖೋತ,



ಶ್ರೀ ಶಂಕರ ಪಾಟೀಲ ಹಾಗೂ ಕಾಲೇಜಿನ ಎಲ್ಲಾ ಉಪನ್ಯಾಸಕರುಗಳು ಉಪಸ್ಥಿತರಿದ್ದರು. ಶ್ರೀ ಮಹಾದೇವ ವಡಗೋಲ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು. ನಂತರ ಮಕ್ಕಳಿಗೆ ಸ್ಕೌಟ್ಸ್ ಚಳುವಳಿಯ ಇತಿಹಾಸ ಹಾಗೂ ಪ್ರವೇಶದ ಎಲ್ಲಾ ವಿಷಯಗಳನ್ನು ಮೌಖಿಕವಾಗಿ ಮತ್ತು ಪ್ರಾಯೋಗಿಕವಾಗಿ ತಿಳಿಸಿಕೊಡಲಾಯಿತು. ಕಾರ್ಯಾಗಾರದಲ್ಲಿ ಸ್ಕೌಟ್ಸ್ ಮತ್ತು ರೋವರ್‌ಗಳು ಸೇರಿ ಒಟ್ಟು 110 ಮಕ್ಕಳು ಭಾಗವಹಿಸಿದ್ದರು.

## ಬೆಂಗಳೂರು ದಕ್ಷಿಣ

* ಜನವರಿ ಮಾಹೆಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ವ್ಯಾಪ್ತಿಯ ದಳಗಳ ಮಟ್ಟದಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಜಾಗೃತಿ ಜಾಥವನ್ನು ಸ್ಥಳೀಯ ಪೋಲಿಸ್ ಸಿಬ್ಬಂದಿಯ ಸಹಾಯದೊಂದಿಗೆ ಆಯೋಜಿಸಲಾಗಿತ್ತು. ಜಾಥದಲ್ಲಿ ಕಬ್, ಬುಲ್-ಬುಲ್, ಸ್ಕೌಟ್ಸ್-ಗೈಡ್ಸ್, ದಳನಾಕರುಗಳು, ಪೋಲಿಸ್ ಸಿಬ್ಬಂದಿಗಳು ಭಾಗವಹಿಸಿದ್ದರು.




* ಜನವರಿ 09 ರಂದು ಕೆ.ಆರ್.ಪುರಂ ಸ್ಥಳೀಯ ಸಂಸ್ಥೆಯ ವತಿಯಿಂದ ಇಂಟರ್ ನ್ಯಾಷನಲ್ ಶಾಲೆಯಲ್ಲಿ 2024-25ನೇ ಸಾಲಿನ ವಾರ್ಷಿಕ ರ್‍ಯಾಲಿಯನ್ನು ಆಯೋಜನೆ ಮಾಡಲಾಯಿತ್ತು. ರ್‍ಯಾಲಿಯನ್ನು ಶ್ರೀ ಎಂ.ಕೆ. ಖಾನ್ ಜಿಲ್ಲಾ ಮುಖ್ಯ ಆಯುಕ್ತರು ಉದ್ಘಾಟಿಸಿದರು, ಶ್ರೀಮತಿ ಹೇಮಮಾಲಿನಿ ಸಿ., ಇಂಟರ್ ನ್ಯಾಷನಲ್ ಶಾಲೆಯ ಪ್ರಾಂಶುಪಾಲರು, ಶ್ರೀಮತಿ ಆಶಾ ಪ್ರಾಂಶುಪಾಲರು ಸಿ ಪ್ರೈಮರಿ ಶಾಲೆ, ಶ್ರೀ ರಾಜಾಹಂಸ ಕಾರ್ಯದರ್ಶಿ ಬಿ.ಎನ್.ಆರ್. ಮೆಮೋರಿಯಲ್ ಶಾಲೆ, ಜಾನಕಿರಾಮ್ ಮತ್ತು ಶ್ರೀ ಎಸ್.ಎಲ್.ವಿ. ಶೇಖರ್, ಸಮಾಜ ಸೇವಕರು, ಡಾ॥ ಮಾನಸ ಹೆಬ್ಬಾರ್ ಎ.ಡಿ. ಉಪಸ್ಥಿತರಿದ್ದರು.



## ಬೆಂಗಳೂರು ಉತ್ತರ

* ಬೆಂಗಳೂರು ಉತ್ತರ ಜಿಲ್ಲಾ ಸಂಸ್ಥೆ ವತಿಯಿಂದ ಜಿಲ್ಲಾ ಮಟ್ಟದ ಬನ್ನಿ ಉತ್ಸವವನ್ನು ರಾಮಯ್ಯ ವಿದ್ಯಾ ನಿಕೇತನ್ ಸ್ಕೂಲ್ ಮತ್ತಿಕೆರೆ ಇಲ್ಲಿ ಡಿಸೆಂಬರ್ 20 ರಂದು ಆಯೋಜಿಸಲಾಯಿತು. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಶಾಂತಿ ಶಿಬಿರವನ್ನು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಇವರು ಎಲ್ಲರನ್ನು ಸ್ವಾಗತಿಸಿದರು. ವಿವಿಧ ಶಾಲೆಗಳಿಂದ 200 ಬನ್ನಿಸ್ ಶಿಬಿರದಲ್ಲಿ ಭಾಗವಹಿಸಿ ಆನಂದಪಟ್ಟರು.



* ಜನವರಿ 12 ರಂದು ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆ ಮತ್ತು ಯುವ ದಿನಾಚರಣೆಯ ಪ್ರಯುಕ್ತ ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ಸ್ಕೌಟ್ಸ್ ಗೈಡ್ಸ್ ದಳಗಳಲ್ಲಿ ಅರ್ಥಪೂರ್ಣ ಕಾರ್ಯಕ್ರಮದೊಂದಿಗೆ ಆಚರಣೆ ಮಾಡಲಾಯಿತು.



* ಶ್ರೀ ಗುರು ಸಿದ್ದರಾಮೇಶ್ವರರ ಜಯಂತಿ ಮಹೋತ್ಸವ ಕಾರ್ಯಕ್ರಮವನ್ನು ಜನವರಿ 14 ಮತ್ತು 15ರ ವರೆಗೆ ಬೆಂಗಳೂರು ಅರಮನೆ ಮೈದಾನದ ತ್ರಿಪುರವಾಸಿನಿ ಅವರಣದಲ್ಲಿ ಆಯೋಜಿಸಲಾಗಿತ್ತು. ಬೆಂಗಳೂರು ಉತ್ತರ ಜಿಲ್ಲೆಯ 120 ಸ್ಕೌಟ್ಸ್–ಗೈಡ್ಸ್ ರೋವರ್ ರೇಂಜರ್‌ಗಳು ಮೇಲ್ಕಂಡ ಕಾರ್ಯಕ್ರಮದಲ್ಲಿ ಸೇವೆಸಲ್ಲಿಸಿ ಕಾರ್ಯಕ್ರಮವನ್ನು ಯಸಸ್ವಿಗೊಳಿಸಿದರು.



* ಬೆಂಗಳೂರು ಉತ್ತರ ಜಿಲ್ಲೆಯ ಸ್ಕೌಟ್ಸ್ ನಡಿಗೆ ಹಳ್ಳಿಯ ಕಡೆ 30ನೇ ತಿಂಗಳ ಸಮುದಾಯ ಸೇವಾ ಶಿಬಿರವನ್ನು ಡಿಸೆಂಬರ್ 24 ರಂದು ಗಂಟಿಗಾನಹಳ್ಳಿ ಇಲ್ಲಿ ಪ್ರತಿತಿಂಗಳಂತೆ ಯಶಸ್ವಿಯಾಗಿ ನಡೆಸಲಾಯಿತು. ಈ ಸೇವಾ ಶಿಬಿರದ ಸಮಯದಲ್ಲಿ ಹಳ್ಳಿಯ ಜನರಲ್ಲಿ ತೆರಿಗೆ ಸಂಗ್ರಹ ಮಾಸಾಚರಣೆ ಬಗ್ಗೆ ಗ್ರಾಮ ಪಂಚಾಯಿತ್ ಅಧಿಕಾರಿಗಳೊಂದಿಗೆ ಜನಜಾಗೃತಿ ಮಾಡಲಾಯಿತು. ಕಾರ್ಯಕ್ರಮದ ಭಾಗವಾಗಿ ಗಿಡಗಳಿಗೆ ಕೆರೆಯಿಂದ ನೀರು ಹಾಕಲಾಯಿತು.

* ರಾಷ್ಟ್ರೀಯ ರಸ್ತೆ ಸುರಕ್ಷತಾವಾರದ ಅಚರಣೆಯನ್ನು ಜನವರಿ 11 ರಿಂದ 17ರ ವರೆಗೆ ಬೆಂಗಳೂರು ಉತ್ತರ ಜಿಲ್ಲೆಯ ಸ್ಕೌಟ್ಸ್ –ಗೈಡ್ಸ್ ಶಾಲೆಗಳ ದಳಗಳಲ್ಲಿ ಜನಜಾಗೃತಿ ಮೂಡಿಸುವ ಮೂಲಕ ಮಾಡಲಾಯಿತು. ಬೆಂಗಳೂರು ಸಂಚಾರಿ ಪೋಲಿಸ್ ಮೂಲಕ ಸ್ಕೌಟ್ಸ್–ಗೈಡ್ಸ್‌ಗಳು ಹೆಲ್ಮೆಟ್, ಸೀಟ್ ಬೆಲ್ಟ್, ರಸ್ತೆಗಳ ಸಿಗ್ನಲ್, ಹ್ಯಾಂಡ್ ಸಿಗ್ನಲ್ ಬಗ್ಗೆ ಮಾಹಿತಿ ಪಡೆದರು ಮತ್ತು ಡ್ರೈವಿಂಗ್ ಲೈಸೆನ್ಸ್, ವಿಮೆ ಮತ್ತು ಇತರೆ ದಾಖಲಾತಿಯ ರೇಡಿಯಂ ಸ್ಟಿಕ್ಕರ್ ಮಹತ್ವದ ಬಗ್ಗೆ ವಿವರಿಸಲಾಯಿತು.



ಈ ಕೆಳಗಿನ ಶಾಲೆಗಳಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಮಾಡಲಾಯಿತು. ಗಂಗೋತ್ರಿ ಪಬ್ಲಿಕ್ ಸ್ಕೂಲ್, ವಿಡಿಯಾ ಪೂರ್ಣಪ್ರಜ್ಞಾ ಸ್ಕೂಲ್ ನಾಗಸಂದ್ರ, ವಿದ್ಯಾ ಮಂದಿರ ಸ್ಕೂಲ್, ಮಲ್ಲೇಶ್ವರಮ್, ನೌಕಿಸ್ ಎಜುಕೇಶನ್ ಸೆಂಟರ್ ಜಾಲಹಳ್ಳಿ, ಜ್ಞಾನಜ್ಯೋತಿ ಸ್ಕೂಲ್ ಯಲಹಂಕ, ತ್ರಿವೇಣಿ ಪಬ್ಲಿಕ್ ಸ್ಕೂಲ್, ಟಿ.ದಾಸರಹಳ್ಳಿ, ಎ.ಸಿ. ಸ್ಕೂಲ್ ಬೆಂಗಳೂರು, ಸ್ಲಿವ್ಲರ್‌ಸ್ಪಿಂಗ್ ಸ್ಕೂಲ್ ಚಿಕ್ಕಬಾಣವರ, ಲಿಟಲ್ ಏಂಜಲ್ ಸ್ಕೂಲ್, ಕಮ್ಮನಹಳ್ಳಿ, ಸೆಂಟ್ ಜಾನ್ಸ್ ಹೈಸ್ಕೂಲ್, ಶಿವಾಜಿನಗರ, ಸೆಂಟ್ ಫ್ರಾನ್ಸಿಸ್ ಕ್ಸೇವಿಯರ್ ಶಾಲೆ ಶಿವಾಜಿನಗರ. ಎಂ.ಇ.ಸಿ. ಸ್ಕೂಲ್ ಯಲಹಂಕ ಡ್ಯಾಫೋಡಿಲ್ಸ್ ಫೌಂಡೇಶನ್ ಫಾರ್ ಲರ್ನಿಗ್ ಸ್ಕೂಲ್ ಸಂಜಯ್ ನಗರ, ಶ್ರದಾಂಜಲಿ ಇಂಟಿಗ್ರೇಟೆಡ್ ವಿಶೇಷ ಶಾಲೆ, ಶಿವಾಜಿನಗರ.

## ಬೆಂಗಳೂರು ಪೂರ್ವ

* "ಸ್ಕೌಟ್ಸ್–ಗೈಡ್ಸ್ ಸೇವೆ ಮತ್ತು ದೇಶ ಭಕ್ತಿಗೆ ಮತ್ತೊಂದು ಹೆಸರು" ಎಂದು ರಾಜ್ಯ ಮುಖ್ಯ ಆಯುಕ್ತ ಶ್ರೀ ಪಿ.ಜಿ.ಆರ್. ಸಿಂಧ್ಯಾ ನುಡಿದರು. ಪಟ್ಟಣದ ಗುರುಭವನದಲ್ಲಿ ಏರ್ಪಡಿಸಿದ್ದ ತಾಲ್ಲೂಕಿನ ಸರ್ಕಾರಿ ಶಾಲೆಗಳ ಸ್ಕೌಟ್ಸ್–ಗೈಡ್ಸ್‌ಗಳಿಗೆ ಸನ್‌ಸೇರ್ ಫೌಂಡೇಶನ್‌ನಿಂದ ಸಮವಸ್ತ್ರ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು. ಸನ್‌ಸೇರ್ ಕಂಪನಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕರ ಶ್ರೀ ಎಫ್.ಆರ್. ಸಿಂಘ್ವಿ ಮಾತನಾಡಿ "ಆನೇಕಲ್ ತಾಲ್ಲೂಕಿನ ಸನ್‌ಸೇರ್ ಪ್ರತಿಷ್ಠಾನವು ಸರ್ಕಾರಿ ಶಾಲೆಗಳ ಬಲವರ್ಧನೆಗೆ ಶ್ರಮಿಸುತ್ತಿದೆ. ಇದರ ಭಾಗವಾಗಿ ವಿದ್ಯಾರ್ಥಿಗಳಿಗೆ ಸ್ಕೌಟ್ಸ್–ಗೈಡ್ಸ್ ಸಮವಸ್ತ್ರವನ್ನು ವಿತರಿಸಿದ್ದೇವೆ ಮತ್ತೆ ಈ ಕಾರ್ಯವನ್ನು ಮುಂದುವರೆಸುತ್ತೇವೆ. ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು ಮತ್ತು ಸಮಯ ಪಾಲನೆಯಂತಹ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು" ಎಂದು ನುಡಿದರು. ಪುರಸಭಾ ಅಧ್ಯಕ್ಷೆ ಶ್ರೀಮತಿ ಸುಧಾ ನಿರಂಜನ್, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಎನ್. ವೆಂಕಟೇಶ್, ಡಿವೈಎಸ್‌ಪಿ ಶ್ರೀ ಮೋಹನ್ ಕುಮಾರ್, ರಾಮನಗರ ಡಯಟ್ ಹಿರಿಯ ಉಪನ್ಯಾಸಕಿ ಶ್ರೀ ಜೆ.ಎಂ. ಜಯಲಕ್ಷ್ಮಿ, ಸ್ಕೌಟ್ಸ್‌ನ ರಾಜ್ಯ ಆಯುಕ್ತ ಶ್ರೀ ಚೆನ್ನಸ್ವಾಮಿ ರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶ್ರೀ ಹೆಚ್. ಮಂಜುನಾಥ್ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀ ಕೆ. ಚಂದ್ರಶೇಖರ್, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀ ಎಂ. ಗೋಪಾಲ್, ಶಿಕ್ಷಣ ಸಂಯೋಜಕ ಶ್ರೀ ಕೆ. ಶಿವಣ್ಣ, ಕ್ಯಾಂಪ್ಸ್ ಗೌರವಾಧ್ಯಕ್ಷ ಶ್ರೀ ಡಿ. ಮುನಿರಾಜು, ಹಂಸಾ ಸಂಘಟನೆ ಅಧ್ಯಕ್ಷ ಶ್ರೀ ಪ್ರಹ್ಲಾದ್ ಮತ್ತಿತರರು ಉಪಸ್ಥಿತರಿದ್ದರು.



* ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆಯ ಆನೇಕಲ್ ತಾಲ್ಲೂಕಿನ ವಿವಿಧ ಶಾಲೆಯ ದಳದ ಮಟ್ಟದಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದ ಅಂಗವಾಗಿ ಜಾಗೃತಿ ಮೂಡಿಸುವ ಉದ್ದೇಶದಿಂದ ಆನೇಕಲ್, ಜಿಗಣಿ, ಕೊಪ್ಪ ಗೇಟ್, ಮುಖ್ಯ ರಸ್ತೆಯಲ್ಲಿ ಸಾರ್ವಜನಿಕರಿಗೆ ಹೆಲ್ಮೆಟ್ ಧರಿಸಿ, ವಾಹನ ಪರವಾನಿಗೆ ಇರಬೇಕು ಹಾಗೂ ದ್ವಿಚಕ್ರವಾಹನ ಸವಾರರು ಇಬ್ಬರು ಮಾತ್ರ ಚಲಿಸಲು ಸಲಹೆ ತಿಳಿಸಿದ್ದಾರೆ. ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಉಲ್ಲಂಘನೆ ಮಾಡಬಾರದು ಎಂಬ ಅಂಶಗಳನ್ನು ಸ್ಥಳೀಯ ಪೋಲೀಸ್ ಇಲಾಖೆ ಸಿಬ್ಬಂದಿಗಳ ನೆರವಿನೊಂದಿಗೆ ತಿಳಿಸಿದ್ದಾರೆ.



## ಚಿತ್ರದುರ್ಗ

* ಡಿಸೆಂಬರ್ 25 ರಂದು ವಿಕಾಸ ಸೌಧ ಉದ್ಘಾಟನಾ ಸಮಾರಂಭಕ್ಕೆ ಚಿತ್ರದುರ್ಗ ಜಿಲ್ಲಾ ಸಂಸ್ಥೆ ಮತ್ತು ಹೊಳಲ್ಕೆರೆ ಸ್ಥಳೀಯ ಸಂಸ್ಥೆ ವತಿಯಿಂದ ರೋವರ್ಸ್–ರೇಂಜರ್ಸ್‌ಗಳು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದ್ದಾರೆ.



* ಜನವರಿ 01 ರಂದು ಜಿಲ್ಲಾ ಕಾರ್ಯಾಲಯದಲ್ಲಿ 2025ರ ಹೊಸ ವರ್ಷ ಆಚರಣೆ ಹಾಗೂ ಚಿತ್ರದುರ್ಗ ಸ್ಥಳೀಯ ಸಂಸ್ಥೆಯ ಬಿ.ಇ.ಓ. ಕಛೇರಿಯ ಅಧಿಕಾರಿ ವರ್ಗದವರಿಗೆ ಬಿ.ಇ.ಓ., ಬಿ.ಆರ್.ಸಿ., ಸಿ.ಆರ್.ಪಿ. ಅಧಿಕಾರಿಗಳಿಗೆ ಸ್ಕೌಟ್ಸ್–ಗೈಡ್ಸ್‌ನ ಒಂದು ದಿನದ ಮಾಹಿತಿ ಶಿಬಿರವನ್ನು ಸಂಘಟಿಸಲಾಯಿತು. ಈ ಒಂದು ದಿನದ ಮಾಹಿತಿ ಶಿಬಿರಕ್ಕೆ ಎಲ್ಲಾ ಕ್ಲಸ್ಟರ್‌ನ 47 ಜನ ಸಿ.ಆರ್.ಪಿ.ಗಳಿಗೆ ಜಿಲ್ಲಾ ಆಯುಕ್ತರಾದ ಸ್ಕೌಟ್ಸ್ ಶ್ರೀ ನಾಗಭೂಷಣ ಬಿ.ಇ.ಓ. ಇವರು ಗಣತಿಯ ಬಗ್ಗೆ ಹಾಗೂ ದ್ವಿತೀಯ ಸೋಪಾನ ಮತ್ತು ಎಲ್ಲಾ ಶಾಲೆಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳನ್ನು ಪ್ರಾರಂಬಿಸಬೇಕೆಂದು ಸಂಪನ್ಮೂಲ ವ್ಯಕ್ತಿಗಳಿಗೆ ತಿಳಿಸಿದರು. ಈ ಕಾರ್ಯಗಾರದಲ್ಲಿ ಜಿಲ್ಲಾ ಸಂಸ್ಥೆಯ ಜಿಲ್ಲಾ ಪದಾಧಿಕಾರಿಗಳಾದ ಶ್ರೀ ಉಜ್ಜಿನಪ್ಪ, ಜಿಲ್ಲಾ ಉಪಾಧ್ಯಕ್ಷರು, ಶ್ರೀಮತಿ ಸವಿತಾ ಶಿವಕುಮಾರ್, ಜಿಲ್ಲಾ ಆಯುಕ್ತರು (ಗೈ) ಶ್ರೀ ಅನಂತರೆಡ್ಡಿ ಹಾಗೂ ಜಿಲ್ಲಾ ಸಂಸ್ಥೆಯ




ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಾಗಿದ್ದರು. ಸಾಮೂಹಿಕ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ಶ್ರೀ ರವಿ ಸಿ., ಜಿಲ್ಲಾ ಸಂಘಟನಾ ಶಿಕ್ಷಕರು ಸರ್ವರನ್ನು ಸ್ವಾಗತಿಸಿದರು. ಶ್ರೀ ಮಲ್ಲೇಶಪ್ಪ ಕೆ.ಟಿ., ಜಿಲ್ಲಾ ಸಂಘಟಕರು ವಂದನಾರ್ಪಣೆ ಮಾಡಿದರು.

* ಜನವರಿ 04 ರಂದು ಕಬ್ ಮಾಸ್ಟರ್ ಶ್ರೀ ಸುಭಾಷ್ ಹಾಗೂ ಫ್ಲಾಕ್ ಲೀಡರ್ ಮಂಗಳ, ಇವರ ಮಾರ್ಗದರ್ಶನದಲ್ಲಿ ಪಕ್ಷಿಗಳಿಗೆ ಕಾಳು ಹಾಗೂ ನೀರೂಣಿಸಲು ವಿವಿಧ ರೀತಿಯ ವಸ್ತುಗಳನ್ನು ಸಿದ್ಧಪಡಿಸಿ ಅವುಗಳನ್ನು ಗಿಡ ಮರಗಳಿಗೆ ತೂಗು ಹಾಕಿ ಪಕ್ಷಿಗಳಿಗೆ ಆಹಾರ ಹಾಗೂ ನೀರಿನ ಸೌಲಭ್ಯವನ್ನು ಒದಗಿಸುವ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಪಕ್ಷಿ ಸಂರಕ್ಷಣೆಯ ಈ ಕಾರ್ಯಕ್ರಮದ ಮೂಲ ಪರಿಸರದಲ್ಲಿ ಪಕ್ಷಿ–ಪ್ರಾಣಿಗಳ ಮಹತ್ವ ಹಾಗೂ ಅವುಗಳ ಆಹಾರ ಪದ್ಧತಿ ಬಗ್ಗೆ ಕಬ್ಸ್ ಮತ್ತು ಬುಲ್‌ಬುಲ್ಸ್ ಮಕ್ಕಳಲ್ಲಿ ಹಾಗೂ ಶಾಲೆಯ ಇತರ ಮಕ್ಕಳಿಗೂ ತಿಳಿವಳಿಕೆ ನೀಡಿ ವಿವರಿಸಲಾಯಿತು.



* ಜನವರಿ 12 ರಂದು ಡಿ.ವಿ.ಎಸ್. ಆಂಗ್ಲ ಮಾಧ್ಯಮಾ ಶಾಲೆ ಭರಮಸಾಗರ ಇಲ್ಲಿ ಸ್ವಾಮಿವಿವೇಕಾನಂದರ ಜನ್ಮ ದಿನೋತ್ಸವವನ್ನು ಹಾಗೂ ಯುವ ದಿನೋತ್ಸವದ ಅಂಗವಾಗಿ ಜಿಲ್ಲಾ ಸಂಸ್ಥೆ ಚಿತ್ರದುರ್ಗ ಹಾಗೂ ಸ್ಥಳೀಯ ಸಂಸ್ಥೆ ಭರಮಸಾಗರ ಇವರ ಸಂಯುಕ್ತಾಶ್ರಯದಲ್ಲಿ ಸಂಕ್ಷಿಪ್ತ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಡಿ.ವಿ.ಎಸ್. ವಿದ್ಯಾ ಸಂಸ್ಥೆಯ ಖಜಾಂಚಿಯವರಾದ ಶ್ರೀ ಡಿ.ಎಸ್. ಪ್ರದೀಪ್ ಕುಮಾರ್ ಹಾಗೂ ಮುಖ್ಯ ಗುರುಗಳಾದ ಶ್ರೀ ಗುರುಸಿದ್ದೇಶ, ಕಬ್ ಮಾಸ್ಟರ್ ಸುಭಾಷ್ ಟಿ. ಫ್ಲಾಕ್ ಲೀಡರ್ ಶ್ರೀಮತಿ ಮಂಗಳ ಜಿ. ಹಾಗೂ ಸ್ಕೌಟ್ ಮಾಸ್ಟರ್ ಶ್ರೀ ಅನುಪ್‌ಕಮಾರ್, ಗೈಡ್ ಕ್ಯಾಪ್ಟನ್ ಶ್ರೀಮತಿ ಪ್ರತಿಭಾ ಜಿ. ಹಾಗೂ ಕಬ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದರವರ ಭಾವಚಿತ್ರಕ್ಕೆ ಪುಷ್ಪ ನಮನವನ್ನು ಸಲ್ಲಿಸಲಾಯಿತು. ಮುಖ್ಯ ಅತಿಥಿಗಳಿಗೆ ಸ್ಕಾರ್ಫ್ ತೊಡಿಸುವ ಮೂಲಕ ಸ್ವಾಗತವನ್ನು ಕೋರಲಾಯಿತ್ತು. "ಸ್ವಾಮಿ ವಿವೇಕಾನಂದರ ಆದರ್ಶ ಗುಣಗಳನ್ನು ಎಲ್ಲಾ ಮಕ್ಕಳು ಮೈ ಗೂಡಿಸಿಕೊಂಡು ಅವರಂತೆ ಜೀವನದಲ್ಲಿ ಉನ್ನತ ಸಾಧನೆಯನ್ನು ಮಾಡಬೇಕು" ಎಂದು ಸಂಸ್ಥೆಯ ಖಜಾಂಚಿಗಳಾದ ಶ್ರೀ ಪ್ರದೀಪ್‌ಕುಮಾರ್‌ರವರು ಮಕ್ಕಳಿಗೆ ಪ್ರೇರಣೆಯ ಮಾತುಗಳನ್ನು ಆಡಿದರು. ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಶಾಲಾ ಮುಖ್ಯ ಗುರುಗಳಾದ ಶ್ರೀ ಕೆ.ಜಿ. ಗುರುಸಿದ್ದೇಶರವರು ಮಕ್ಕಳೊಂದಿಗೆ ಹಂಚಿಕೊಂಡರು. ಕಾರ್ಯಕ್ರಮದ ಕೊನೆಯ ಹಂತದಲ್ಲಿ ವಿದ್ಯಾರ್ಥಿಗಳಿಗೆ ಹೂವಿನ ಸಸಿಗಳನ್ನು ನೆಟ್ಟು ಮಕ್ಕಳಿಗೆ ಸಿಹಿ ಹಂಚುವ ಮೂಲಕ ಕಾರ್ಯಕ್ರಮವನ್ನು ನೆರವೇರಿಸಲಾಯಿತು.



* ಜನವರಿ 13 ರಂದು ವಾಗ್ದೇವಿ ಇಂಟರ್ ನ್ಯಾಷನಲ್ ಶಾಲೆ ಹೊಳಲ್ಕೆರೆ ಜಿಲ್ಲಾ ಚಿತ್ರದುರ್ಗದಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಪಿ. ಸಿದ್ದಲಿಂಗಸ್ವಾಮಿ ವಹಿಸಿಕೊಂಡಿದ್ದು ಮಕ್ಕಳಿಗೆ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯ ಬಗ್ಗೆ ಹಾಗೂ

ಯುವ ಸಮಿತಿಯ ಬಗ್ಗೆ ತಿಳಿಸಿ ಮಕ್ಕಳು ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಅಳವಟಿಸಿಕೊಳ್ಳಬೇಕು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶಾಲೆಯ ಸ್ಕೌಟ್ಸ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್ ಹಾಗೂ ಮಕ್ಕಳು ಉಪಸ್ಥಿತರಿದ್ದರು. ಸ್ವಾಗತ ಹಾಗೂ ವಂದನೆಯನ್ನು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಡಿ.ಆರ್. ಸುರೇಶ್ ನಡೆಸಿಕೊಟ್ಟರು.

* ಜನವರಿ 15 ರಂದು ಜಿಲ್ಲಾ ಸಂಸ್ಥೆ ಚಿತ್ರದುರ್ಗ ಹಾಗೂ ಜಿಲ್ಲಾ ಪೋಲೀಸ್ ಇಲಾಖೆ ಇವರ ಸಹಯೋಗದೊಂದಿಗೆ ರಾಷ್ಟ್ರೀಯ ರಸ್ತೆ ಸುರಕ್ಷಾ ಸಪ್ತಾಹ ಕಾರ್ಯಕ್ರಮ ಶ್ರೀಮತಿ ಸವಿತಾ ಶಿವಕುಮಾರ್, ಜಿಲ್ಲಾ ಆಯುಕ್ತರು (ಗೈಡ್) ಇವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಜಾಥಾ ಮೂಲಕ ಪ್ರಾರಂಭ ಮಾಡಲಾಯಿತು. ಜಿಲ್ಲಾ ಸಂಚಾರಿ ಪೋಲೀಸ್ ಅಧಿಕಾರಿಯಾದ ಶ್ರೀ ರಾಜು ಟಿ.,ರವರು ಜಾಥಾಕ್ಕೆ ಚಾಲನೆ ನೀಡಿದರು. ಈ ಕಾರ್ಯಕ್ರಮದಲ್ಲಿ ಸಂಚಾರಿ ಪೋಲೀಸ್ ಅಧಿಕಾರಿಯಾದ ಶ್ರೀ ರಾಜು ಟಿ.,ರವರು ರಸ್ತೆಯ ಟ್ರಾಫಿಕ್ ಸಿಗ್ನಲ್ ಮತ್ತು ರಸ್ತೆ ನಿಯಮಾವಳಿಗಳನ್ನು ತಿಳಿಸಿ ಎಂದು ತಿಳಿಸಿದರು,




* ಜನವರಿ 18 ರಂದು ಡಿ.ವಿ.ಎಸ್. ಶಾಲೆ ಭರಮಸಾಗರ ತಾಲ್ಲೂಕು ಜಿಲ್ಲಾ ಚಿತ್ರದುರ್ಗ ಇಲ್ಲಿ ಕುದುರೆ ಸವಾರಿ ಮಾಹಿತಿ ಶಿಬಿರವನ್ನು ನೀಡಲಾಯಿತು. ಸ್ಕೌಟ್ ಮಾಸ್ಟರ್ ಶ್ರೀ ಅನುಪ್ ಕುಮಾರ್ ಹಾಗೂ ಶಾಲಾ ಮುಖ್ಯೋಪಾಧ್ಯಾಯರು ಶಾಲೆಯಲ್ಲಿರು ಎಲ್ಲಾ ಸ್ಕೌಟ್ಸ್-ಗೈಡ್ಸ್ ಮಕ್ಕಳಿಗೆ ಕುದುರೆ ಸವಾರಿಯ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಶಿಬಿರದಲ್ಲಿ ಒಟ್ಟು 50 ಜನ ಮಕ್ಕಳು ಭಾಗವಹಿಸಿದ್ದರು.

* ಜನವರಿ 18 ರಿಂದ 19ರ ವರೆಗೆ ಶ್ರೀ ಶ್ರೀನಿವಾಸ ನಾಯಕ ಪ್ರೌಢ ಶಾಲೆ ಮೊಳಕಾಲ್ಮೂರಿ ಸ್ಕೌಟ್ಸ್-ಗೈಡ್ಸ್‌ಗಳಿಗೆ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಸಂಘಟಿಸಲಾಯಿತು. ಈ ಶಿಬಿರದಲ್ಲಿ 102 ಗೈಡ್ಸ್, 90 ಸ್ಕೌಟ್ಸ್ ಭಾಗವಹಿಸಿದ್ದರು. ಸ್ಕೌಟ್ ವಿಭಾಗ ನಾಯಕರಾಗಿ ಶ್ರೀ ಮಲ್ಲೇಶಪ್ಪ ಕೆ.ಟಿ., ಜಿಲ್ಲಾ ಸಂಘಟಿಕರು, ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಹನುಮಕ್ಕ, ಹೆಚ್.ಬಡ್ಲ್ಯೂ.ಆರ್.(ಆರ್) ಕಾರ್ಯನಿರ್ವಹಿಸಿದ್ದು, ಈ ಪರೀಕ್ಷಾ ಶಿಬಿರವನ್ನು ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ನಿರ್ಮಲದೇವಿ ಇವರು ಉದ್ಘಾಟಿಸಿದರು. ರಾಮಂಪುರದ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಲಿಂಗಾರೆಡ್ಡಿಯವರು ಸ್ವಾಗತಿಸಿದರು. ಪ್ರಾಸ್ತವಿಕ ನುಡಿಯನ್ನು ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀ ರವಿ ಸಿ. ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಬಿ. ಭಡಯ್ಯ ಮಾಡಿದರು. ಶ್ರೀಮತಿ ಅನಿತಾ ಗೈಡ್ ಶಿಕ್ಷಕಿ ಸರ್ವರಿಗೂ ವಂದನೆಯನ್ನು ತಿಳಿಸಿದರು.



## ದಕ್ಷಿಣ ಕನ್ನಡ

* ಜನವರಿ 04 ರಂದು ಸಾವಯವ ಕೃಷಿಕ ಗ್ರಾಹಕ ಬಳಗ ಮಂಗಳೂರು ಇವರ ಆಶ್ರಯದಲ್ಲಿ ಕೇಶವ ಸ್ಮೃತಿ ಸಂವರ್ಧನ ಸಮಿತಿ ಪ್ರತಾಪ ನಗರ ಮಂಗಳೂರು, ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.), ಪುತ್ತೂರು ಮತ್ತು ಹಲವು ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಪ್ರಪ್ರಥಮ ಬಾರಿಗೆ ಮಂಗಳೂರಿನ ಸಂಘನಿಕೇತನ ಸಭಾಂಗಣದಲ್ಲಿ ಗೆಡ್ಡೆಗೆಣಸು ಮತ್ತು ಸೊಪ್ಪು ಮೇಳವು ಶ್ರೀ ಪ್ರಭಾಕರ ಶರ್ಮ, ಕೆ.ಎ.ಎಸ್. ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಮೇಳದಲ್ಲಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ಜಿಲ್ಲಾ ಕಾರ್ಯದರ್ಶಿ ಇವರ ಮಾರ್ಗದರ್ಶನದಲ್ಲಿ ಹಾಗೂ ಶ್ರೀಮತಿ ಅಪೇಕ್ಷಾ, ಗೋವಿಂದದಾಸ ಕಾಲೇಜಿನ ಉಪನ್ಯಾಸಕಿಯ ಮುಂದಾಳತ್ವದಲ್ಲಿ ಜಿಲ್ಲೆಯ ವಿವೇಕಾನಂದ ಕಾಲೇಜಿನ ಹಾಗೂ ಸೈಂಟ್ ರೇಮಂಡ್ಸ್ ಕಾಲೇಜಿನ ರೋವರ್ಸ್-ರೇಂಜರ್ಸ್‌ಗಳು ಸೇವೆಯನ್ನು ಸಲ್ಲಿಸಿರುತ್ತಾರೆ.



* ಜನವರಿ 06 ರಂದು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆ ಬೆಳ್ತಂಗಡಿ ಸಹಯೋಗದಲ್ಲಿ ಉಜಿರೆಯ ಎಸ್.ಡಿ.ಎಂ. ಕಾಲೇಜಿನಲ್ಲಿ ರೋವರ್ಸ್-ರೇಂಜರ್ಸ್ ಘಟಕ ಆಯೋಜಿಸಿದ ಒಂದು ದಿನದ ಜಿಲ್ಲಾ ಮಟ್ಟದ ಅಂತರ್ ಕಾಲೇಜು ಉತ್ಸವ ಮತ್ತು ವಸ್ತು ಪ್ರದರ್ಶನ "ಪ್ರಮುಕ 2025"ದಲ್ಲಿ ಎಸ್.ಡಿ.ಎಂ. ಎಜುಕೇಶನ್ ಸೊಸೈಟಿಯ ಸದಸ್ಯರಾದ ಶ್ರೀಮತಿ ಸುಪ್ರಿಯಾ ಹರ್ಷೇಂದ್ರ ಕುಮಾರ್ ಕಾರ್ಯಕ್ರಮವನ್ನು ಉದ್ಘಾಟಿಸಿ ಸ್ಕೌಟ್ಸ್-ಗೈಡ್ಸ್‌ನಂತಹ ಪಠ್ಯೇತರ ಚಟುವಟಿಕೆಗಳನ್ನು ಶಿಕ್ಷಣದಲ್ಲಿ ಅತ್ಯಗತ್ಯ ಎಂದು ಪರಿಗಣಿಸಬೇಕು ಎಂದು ಅಭಿಪ್ರಾಯಪಟ್ಟರು. ಜಿಲ್ಲೆಯ ವಿವಿಧ ಕಾಲೇಜುಗಳ ರೋವರ್ಸ್-ರೇಂಜರ್ಸ್, ರೋವರ್ ಸ್ಕೌಟ್ ಲೀಡರ್ಸ್, ರೇಂಜರ್ ಲೀಡರ್ಸ್, ಸ್ಥಳೀಯ ಎಸ್.ಡಿ.ಎಂ. ಶಾಲೆಗಳ ಸ್ಕೌಟ್ಸ್-ಗೈಡ್ಸ್, ಕಬ್-ಬುಲ್‌ಬುಲ್, ಬನ್ನೀಸ್, ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್‌ಗಳು ಪಾಲ್ಗೊಂಡಿದ್ದರು. ಸ್ಕೌಟ್ಸ್-ಗೈಡ್ಸ್ ಶಿಬಿರಗಳಲ್ಲಿರುವ ಸಾಹಸಮಯ ಆಟಗಳ ಮಾದರಿಗಳು, ಸ್ಕೌಟಿಂಗ್ ಸಂಬಂಧಿತ ವಿವಿಧ ವಸ್ತು, ಮಾದರಿಗಳನ್ನು ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಲಾಗಿತ್ತು. ವೇದಿಕೆಯಲ್ಲಿ ಎಸ್.ಡಿ.ಎಂ. ಎಜುಕೇಶನಲ್ ಸೊಸೈಟಿಯ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಎಸ್. ಉಪಸ್ಥಿತರಿದ್ದರು. ಸಮಾರೋಪ ಸಮಾರಂಭದಲ್ಲಿ ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯ ನಿರ್ದೇಶಕ ಶ್ರೀ ರಾಜೇಶ್ ಪೈ, ಮುಖ್ಯ ಅತಿಥಿಯಾಗಿದ್ದರು. "ರೋವರ್ಸ್-ರೇಂಜರ್ಸ್ ಅಥವಾ ಸ್ಕೌಟ್-ಗೈಡ್ ವಿದ್ಯಾರ್ಥಿಗಳು ಧರಿಸುವ ಸಮವಸ್ತ್ರಕ್ಕಿರುವ ಗೌರವ ಅಪಾರವಾದದ್ದು. ಈ ರೋವರ್ಸ್ ಮತ್ತು ರೇಂಜರ್ಸ್‌ನಲ್ಲಿ ಕಲಿತ ನಾಯಕತ್ವ ಗುಣ, ಸಮಯಪಾಲನೆಯಂತಹ ಮೌಲ್ಯಗಳು ಮುಂದಿನ ಜೀವನಕ್ಕೆ ಬುನಾದಿ" ಎಂದರು. ಎಸ್.ಡಿ.ಎಂ. ಕಾಲೇಜಿನ ಸ್ನಾತಕೋತ್ತರ ಕೇಂದ್ರದ ಡೀನ್ ಡಾ. ವಿಶ್ವನಾಥ್ ಪಿ., ಅಧ್ಯಕ್ಷತೆ ವಹಿಸಿ ಮಾತನಾಡಿ "ಶಿಕ್ಷಣವು ಜೀವನವನ್ನು ಕಲಿಸಿದರೆ ಜೀವನ ಶಿಕ್ಷಣವನ್ನು ಮತ್ತು ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುವುದು ಸ್ಕೌಟ್-ಗೈಡ್" ಎಂದರು.



* ಮೂಡಬಿದಿರೆ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್ ಮತ್ತು ಗೈಡ್ಸ್ ರ್‍ಯಾಲಿ ಮತ್ತು ಕಬ್–ಬುಲ್‌ಬುಲ್ ಉತ್ಸವ ಜನವರಿ 04 ರಿಂದ 05ರ ವರೆಗೆ ಮುಡಬಿದಿರೆಯ ಸ್ಕೌಟ್–ಗೈಡ್ ಕನ್ನಡ ಭವನದಲ್ಲಿ ನಡೆಯಿತು. ಇದರ ಉದ್ಘಾಟನಾ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಜಿಲ್ಲಾ ಸಂಘಟನಾ ಆಯುಕ್ತರಾದ ಶ್ರೀ ವಸಂತ ದೇವಾಡಿಗ ವಹಿಸಿದರು. ಉದ್ಘಾಟನೆಯನ್ನು ಮೂಡಬಿದಿರೆ ಇಸಿಓ ಶ್ರೀ ರಾಜೇಶ್ ಭಟ್ ನೆರವೇರಿಸಿದರು. ವೇದಿಕೆಯಲ್ಲಿ ಜಿಲ್ಲಾ ಕೋಶಾಧಿಕಾರಿ ಶ್ರೀ ನವೀನ್‌ಚಂದ್ರ ಅಂಬೂರಿ, ಮೂಡಬಿದಿರೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಭಾರತಿ ನಾಯಕ್, ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ಕೃಷ್ಣಮೂರ್ತಿ ಮತ್ತು ಶಿಬಿರದ ನಾಯಕರಾದ ಶ್ರೀ ಸೂರ್ಯನಾರಾಯಣ ಭಟ್ ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಎ. ನವೀನ್ ನೆರವೇರಿಸಿದರು. ಶಿಭಿರಾಗ್ನಿ ಕಾರ್ಯಕ್ರಮದ ಉದ್ಘಾಟನೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ವಿರೂಪಾಕ್ಷರವರು ನಡೆಸಿದರು. ಶ್ರೀ ಕೃಷ್ಣಮೂರ್ತಿ ಸ್ವಾಗತಿಸಿದರು. ಶ್ರೀಮತಿ ಮಮತಾ ಕಾರ್ಯಕ್ರಮ ನಿರೂಪಣೆ ಮಾಡಿದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಜನವರಿ 05 ರಂದು ನಗರ ಮೆರವಣಿಗೆ, ಬೆಂಕಿ ಬಳಸದೆ ಆಹಾರ ತಯಾರಿ, ಕರಕುಶಲ ವಸ್ತು ತಯಾರಿಕೆ, ಅಂತ್ಯಾಕ್ಷರಿ, ರಸಪ್ರಶ್ನೆ, ಮೆಹಂದಿ, ಹೂಗುಚ್ಛ ತಯಾರಿ, ಗ್ರೀಟಿಂಗ್ ಕಾರ್ಡ್ ರಚನೆ, ದೇಶಭಕ್ತಿಗೀತೆ, ಬಾಲು ಪ್ಲೇ, ಕಾ ಡ್ಯಾನ್ಸ್, ಕಥಾಭಿನಯ, ಗಾಳಿಪಟ ತಯಾರಿ, ಹೂ ತಯಾರಿ ಮತ್ತು ಮಿತ್ರತ್ವದ ಆಟಗಳನ್ನು ಆಡಿಸಲಾಯಿತು. ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಳ್ವಾಸ್ ಶಿಕ್ಷಣ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ವಿವೇಕ್ ಆಳ್ವ, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್), ಶ್ರೀ ಶಾಂತರಾಮ ಪ್ರಭು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಚಂದ್ರಪ್ಪ ನೆರವೇರಿಸಿದರು.



* ಜನವರಿ 08 ರಂದು ಜಿಲ್ಲಾ ಸಂಸ್ಥೆಯ ವತಿಯಿಂದ ವಿ.ಎಸ್. ಆಚಾರ್ಯ ಸಭಾಭವನ ವಿದ್ಯಾಗಿರಿ ಮೂಡಬಿದಿರೆಯಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಕಲೋತ್ಸವ–2024ರ ಉದ್ಘಾಟನಾ ಸಮಾರಂಭವು ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಎಂ. ಮೋಹನ್ ಆಳ್ವಾರವರ ಅಧ್ಯಕ್ಷತೆಯಲ್ಲಿ ದೀಪ ಬೆಳಗಿಸುವುದರ ಮೂಲಕ ನಡೆಯಿತು. ವೇದಿಕೆಯಲ್ಲಿ ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ವಿಮಲಾ ರಂಗಯ್ಯ, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಜಯವಂತಿ ಸೋನ್ಸ್, ಮೂಡಬಿದಿರೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಭಾರತಿ ನಾಯಕ್ ಉಪಸ್ಥಿತರಿದ್ದರು.ಜಿಲ್ಲಾ ಕೋಶಾಧಿಕಾರಿ ಶ್ರೀ ನವೀನ್ ಚಂದ್ರ ಅಂಬೂರಿ ಕಾರ್ಯಕ್ರಮ ನಿರೂಪಿಸಿದರು.



* ಜನವರಿ 09 ರಂದು ಜಿಲ್ಲಾ ಸಂಸ್ಥೆಯ ವತಿಯಿಂದ ಸ್ಕೌಟ್–ಗೈಡ್‌ಗಳಿಗಾಗಿ ಸ್ವರಾಜ್ ಮೈದಾನದಲ್ಲಿ ಆಯೊಜಿಸಿದ್ದ ಜಿಲ್ಲಾ ಮಟ್ಟದ ಕ್ರೀಡೋತ್ಸವ–2024 ವನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಎಂ. ಮೋಹನ್ ಆಳ್ವರವರು ಉದ್ಘಾಟಿಸಿ “ಕ್ರೀಡೆಯು ವಿದ್ಯಾರ್ಥಿಗಳಲ್ಲಿ ಶಿಸ್ತು, ಸೌಹಾರ್ದ, ಸಾಮರಸ್ಯದ ಬದುಕನ್ನು ಕಲಿಸುವುದರ ಜೊತೆಗೆ ಹೋರಾಟ ಮನೋಭಾವವನ್ನು ಮಯಗೂಡಿಸಿಕೊಳ್ಳಲು ಸಹಕರಿಸುತ್ತದೆ. ಇದೇ ಮೊದಲ ಬಾರಿಗೆ ಇಂತಹ ಕ್ರೀಡಾ ಕೂಟ ಆಯೋಜನೆ ಮಾಡಲಾಗಿದೆ. ಮುಂಬರುವ ದಿನಗಳಲ್ಲಿ ರಾಜ್ಯ ಮಟ್ಟದ ಕ್ರೀಡಾಕೂಟ ಏರ್ಪಡಿಸುವ ಉದ್ದೇಶವಿದೆ” ಎಂದು ಆಶಯ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರು ಶ್ರೀ ಮೊಹಮ್ಮದ್ ತುಂಬೆ, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ಜಿಲ್ಲಾ ಕೋಶಾಧಿಕಾರಿ ಶ್ರೀ ನವೀನ್ ಚಂದ್ರ ಅಂಬೂರಿ, ಜಿಲ್ಲಾ ಜಂಟಿ ಕಾರ್ಯದರ್ಶಿ ಜಯವಂತಿ ಸೋನ್ಸ್, ಮೂಡಬಿದ್ರೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಭಾರತಿ ನಾಯಕ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. 2281 ವಿದ್ಯಾರ್ಥಿಗಳು ಈ ಕ್ರೀಡೋತ್ಸವದಲ್ಲಿ ಭಾಗವಹಿಸಿದ್ದರು.




## ಹಾಸನ

* ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹನುಮಂತಪುರ ಇಲ್ಲಿ ಅಂತರಾಷ್ಟ್ರೀಯ ಮಾನವ ಒಗ್ಗಟ್ಟಿನ ದಿನವನ್ನು ಆಚರಿಸಲಾಯಿತು ‘ಏನೇ ಬರಲಿ ಒಗ್ಗಟ್ಟಿರಲಿ’ ಎಂಬಂತೆ ಮನುಷ್ಯ ಮತ್ತು ದೇಶ ದೇಶಗಳ ನಡುವೆ ಬಾಂಧವ್ಯ ಹೇಗಿರಬೇಕೆಂದು ಮಕ್ಕಳಿಗೆ ಅರಿವು ಮೂಡಿಸಲಾಯಿತು. ಈ ಸಂಧರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರು, ಕಬ್ ಮಾಸ್ಟರ್ ಶ್ರೀ ಎಮ್.ಎನ್.ಎನ್. ಮೂರ್ತಿರವರು ಉಪಸ್ಥಿತರಿದ್ದರು.



* ಸರ್ಕಾರಿ ಪ್ರಥಮದರ್ಜೆ ಕಾಲೇಜು ಚನ್ನರಾಯಪಟ್ಟಣ ತಾಲ್ಲೂಕಿನ ರೋವರ್ಸ್ ಮತ್ತು ರೇಂಜರ್ಸ್ ತಂಡಗಳಿಗೆ, ಅಪಘಾತ ಹಾಗೂ ತುರ್ತು ಸಂಧರ್ಭದಲ್ಲಿ ರೋಗಿಯ ಪ್ರಾಣ ಉಳಿಸುವ, ಕಾರ್ಯದಲ್ಲಿ ತೊಡಗುವಾಗ ವಹಿಸುವ ಜಾಗೃತಿ ಅರಿವು ಬಗ್ಗೆ ಮಾರ್ಗದರ್ಶನ ನೀಡಿದ ಶ್ರೀ ಗಿರೀಶ್, ಅಪಘಾತವಾದ ಸಂದರ್ಭದಲ್ಲಿ, ಹೃದಯಾಘಾತ ಅಥವಾ ಇನ್ನಿತರ ಸಂದರ್ಭದಲ್ಲಿ ರೋಗಿಯ ಪ್ರಾಣ ಉಳಿಸಲು ಗೋಲ್ಡನ್ ಟೈಮ್, 108 ಅಬುಲೆನ್ಸ್‌ನಲ್ಲಿ ದೊರೆಯುವ ಚಿಕಿತ್ಸೆ, ಕರೆತರುವ ರೀತಿ ವಿಧಾನ, ದೊರೆಯುವ ಸೌಲಭ್ಯ ಬಗ್ಗೆ ಮಾಹಿತಿ ನೀಡಿದರು. ಸರ್ಕಾರಿ ಆಸ್ಪತ್ರೆಯ ಟೆಕ್ನಿಷಿಯನ್ ಶ್ರೀ ಗುರುಮೂರ್ತಿ, ಶ್ರೀಮತಿ ಗಿರಿಜಾ, ಶ್ರೀಮತಿ ಪದ್ಮಮ್ಮ, ಶ್ರೀಮತಿ ಫಾತಿಮಾ ವಿದ್ಯಾರ್ಥಿಗಳಿಗೆ



ಮಾರ್ಗದರ್ಶನ ನೀಡಿದರು. ರೋವರ್ ಸ್ಕೌಟ್ ಲೀಡರ್ ಡಾ. ಅಜಯ್ ರೋವರ್ಸ್–ರೇಂಜರ್ಸ್‌ಗಳು ಉಪಸ್ಥಿತಿರಿದ್ದರು.

* ಅರಸೀಕೆರೆ ತಾಲೂಕು ಸ್ಥಳೀಯ ಸಂಸ್ಥೆ ಸಹಯೋಗದಲ್ಲಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಾಲೂಕು ಮಟ್ಟದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರ ಹಾಗೂ ಸ್ಕೌಟರ್–ಗೈಡರ್ ಸಮಾವೇಶವನ್ನು ಆಯೋಜನೆ ಮಾಡಲಾಯಿತು. ಈ ಎರಡು ಕಾರ್ಯಕ್ರಮಗಳ ಉದ್ಘಾಟನೆಯನ್ನು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಮೋಹನ್‌ರವರು ದೀಪ ಬೆಳಗಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಶುಭ ಹಾರೈಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿರವರು ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ಜಿಲ್ಲಾ ಉಪಾಧ್ಯಕ್ಷ ಶ್ರೀ ಮಹದೇವರವರು ವಿದ್ಯಾರ್ಥಿಗಳಿಗೆ ಶುಭ ಕೋರಿದರು ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕರವರು ದ್ವಿತೀಯ ಸೋಪಾನ ಪರೀಕ್ಷಾ ಶಿಬಿರದ ಹಾಗೂ ಮುಂದಿನ ಹಂತದ ತೃತೀಯ ಸೋಪಾನ ಪರೀಕ್ಷಾ ಶಿಬಿರದ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ವೈ.ಎಸ್. ವೀರಭದ್ರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಸ್ಟೀಫನ್ ಪ್ರಕಾಶ್ ಮುಂತಾದವರು. ಉಪಸ್ಥಿತರಿದ್ದು ವಿದ್ಯಾರ್ಥಿಗಳಿಗೆ ಮೌಖಿಕ ಹಾಗೂ ಲಿಖಿತ ಪರೀಕ್ಷೆಯನ್ನು ನಡೆಸಿದರು. ತಾಲೂಕು ಕಾರ್ಯದರ್ಶಿ ಶ್ರೀ ಎಸ್.ಎನ್. ಸುರೇಶ್‌ರವರು ತರಬೇತಿ ಶಿಬಿರ ಹಾಗೂ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಸಂಘಟಿಸಿದರು.



* "ಏಕಾಗ್ರತೆಯಿಂದ ಮನಸ್ಸಿನ ಮೇಲೆ ನಿಯಂತ್ರಣ ಹೊಂದಿದರೆ ಬದುಕಿನಲ್ಲಿ ಯಶಸ್ಸು ಸುಲಭವಾಗಿ ಸಾಧಿಸಬಹುದು" ಎಂದು ನಗರ ಠಾಣೆಯ ಇನ್ಸ್‌ಪೆಕ್ಟರ್ ಶ್ರೀ ಜಗದೀಶ್‌ರವರು ಹೇಳಿದರು. ಪಟ್ಟಣದ ಸಂತ ಜೋಸೇಫರ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಮೆರವಣಿಗೆ ನಡೆಸಿ ನಗರ ಠಾಣೆ ಬಳಿ ಬಂದು ಸೇರಿದ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಇದಕ್ಕೂ ಮೊದಲು ಸಂತ ಜೋಸೇಫರ ಶಾಲಾ ಆವರಣದಿಂದ ಮೆರವಣಿಗೆ ಹೊರಟ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ರಸ್ತೆ ಸುರಕ್ಷತಾ ಘೋಷಣೆಗಳನ್ನು ಕೂಗುತ್ತಾ ವಾಹನ ಸವಾರರಿಗೆ ಜಾಗೃತಿ ಮೂಡಿಸುತ್ತಾ ಸಾಗಿದರು. ಪೋಲಿಸ್ ಠಾಣೆಗೆ ಭೇಟಿ ನೀಡಿದ ವಿದ್ಯಾರ್ಥಿಗಳು ಠಾಣೆಯಲ್ಲಿನ ದೈನಂದಿನ ನಡವಳಿಕೆಗಳ ಬಗ್ಗೆ ತಿಳಿದು ಕೊಂಡರು. ಈ ಸಂದರ್ಭದಲ್ಲಿ ಸಂಸ್ಥೆಯ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ರಾಜ್ಯ ಸ್ಥಳೀಯ ಸಂಸ್ಥೆಯ ಅಧ್ಯಕ್ಷರೂ ವಕೀಲರೂ ಆದ ಶ್ರೀ ಆರ್.ಎನ್ ಕೃಷ್ಣಮೂರ್ತಿ, ಕಾರ್ಯದರ್ಶಿ ಮಲ್ನಾಡ್ ಶ್ರೀ ಜಾಕೀರ್ ಮಾತನಾಡಿದರು. ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರಾದ ಪೋಲೀಸ್ ಸಿಬ್ಬಂದಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



* ನಾರ್ವೆಯ ಜೆಎಸ್‌ಎಸ್ ಪ್ರೌಢ ಶಾಲೆಯಲ್ಲಿ ಸ್ಕೌಟ್ಸ್ ಘಟಕದ ವತಿಯಿಂದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ. ಸ್ವಾಮಿ ವಿವೇಕಾನಂದರ ಜಯಂತಿ. ರಾಷ್ಟ್ರೀಯ ಹೆಣ್ಣು ಮಕ್ಕಳ ದಿನವನ್ನು ಆಚರಿಸಲಾಯಿತು. ಗ್ರಾಮದ ಪ್ರಮುಖ ರಸ್ತೆಯಲ್ಲಿ ಜಾಥಾ



ಕೈಗೊಂಡು ರಸ್ತೆ ಸುರಕ್ಷತೆಯ ಬಗ್ಗೆ ತಿಳುವಳಿಕೆ ಮೂಡಿಸಲಾಯಿತು. ಸ್ಕೌಟ್ಸ್‌ನ ಅಧಿಕಾರಿಗಳು. ಶಿಕ್ಷಕ ವೃಂದದವರು ಭಾಗವಹಿಸಿದ್ದರು.

* ರಾಷ್ಟ್ರೀಯ ರಸ್ತೆ ಸುರಕ್ಷಾ ಸಪ್ತಾಹ ಕಾರ್ಯಕ್ರಮದ ಪ್ರಯುಕ್ತ ಜನವರಿ 11 ರಂದು ರತ್ನಮ್ಮ ಬುಲ್‌ಬುಲ್ಸ್ ಘಟಕ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ, ಬೈರಾಪುರ, ಆಲೂರು ತಾಲೂಕು ಇವರಿಂದ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ರಸ್ತೆಯಲ್ಲಿ ಘೋಷಣೆಗಳನ್ನು ಕೂಗಿ ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸುತ್ತಿದ್ದ ಬೈಕ್ ಸವಾರರಿಗೆ ಹೆಲ್ಮೆಟ್ ಧರಿಸುವಂತೆ ತಿಳಿಸಿ "ರಸ್ತೆ ಸುರಕ್ಷತಾ ನಿಯಮ" ಎಂಬ ಪುಸ್ತಕವನ್ನು ನೀಡಲಾಯಿತು. ಸೀಟ್ ಬೆಲ್ಟ್ ಧರಿಸದೆ ಇದ್ದ ಕಾರುಚಾಲಕರಿಗೂ ಅದೇ ರೀತಿ ತಿಳುವಳಿಕೆ ನೀಡಿ ಪುಸ್ತಕವನ್ನು ಉಚಿತವಾಗಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಫ್ಲಾಕ್ ಲೀಡರ್ ಹಾಗೂ ಮುಖ್ಯ ಶಿಕ್ಷಕಿಯಾದ ಶ್ರೀಮತಿ ಎಲಿಜಬೆತ್ ಸಹ ಶಿಕ್ಷಕರಾದ ಶ್ರೀಮತಿ ಜ್ಯೋತಿ, ಶ್ರೀಮತಿ ನಾಗರತ್ನ, ಶ್ರೀಮತಿ ಕಾವ್ಯಕುಮಾರಿ ಸಾನಿಯಾ ಮತ್ತು ಪೋಷಕರು ಭಾಗವಹಿಸಿದ್ದರು.

* ಅನುಗ್ರಹ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ. ಅರೇಹಳ್ಳಿಶಾಲೆಯ ಕಬ್–ಬುಲ್‌ಬುಲ್ಸ್ ತಂಡದ ವತಿಯಿಂದ ಜನವರಿ 13ರಂದು ರಸ್ತೆ ಸುರಕ್ಷತಾ ಸಪ್ತಾಹವನ್ನು ಆಚರಿಸಲಾಯಿತು. ನಗರದ ಪ್ರಮುಖ ರಸ್ತೆಯಲ್ಲಿ ಮಕ್ಕಳ ಘೋಷಣೆಗಳೊಂದಿಗೆ ಜಾಗೃತಿ ಜಾಥಾ ನಡೆಸಲಾಯಿತು. ದ್ವಿಚಕ್ರ ವಾಹನದ ಸವಾರರಿಗೆ ಹೆಲ್ಮೆಟ್ ಧರಿಸಲು ಹಾಗೂ ಕಾರಿನಲ್ಲಿ ಸೀಟ್ ಬೆಲ್ಟ್ ಧರಿಸಿ ವಾಹನ ಚಲಾಯಿಸಲು ತಿಳಿಸಲಾಯಿತು.

* "ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಸನಾತನ ಮೌಲ್ಯಗಳನ್ನು ಎತ್ತಿ ಹಿಡಿದ ಸ್ವಾಮಿ ವಿವೇಕಾನಂದ ಅವರ ಜೀವನ ಮತ್ತು ಸಾಧನೆ ಇಂದಿನ ಯುವ ಜನತೆಗೆ ದಾರಿ ದೀಪವಾಗಿದೆ" ಎಂದು ಇತಿಹಾಸ ಉಪನ್ಯಾಸಕರಾದ ಶ್ರೀ ಗಿರೀಶ್ ಎಸ್., ತಿಳಿಸಿದರು. ಪಟ್ಟಣದ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಇಂದು, ಭಾರತ್ ಸ್ಕೌಟ್ಸ್– ಸ್ಥಳೀಯ ಸಂಸ್ಥೆ ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ಯುವ ದಿನ ಸ್ವಾಮಿ ವಿವೇಕಾನಂದ ಅವರ ಜಯಂತಿಯಲ್ಲಿ ಭಾಗವಹಿಸಿ ವಿವೇಕಾನಂದ ಅವರನ್ನು ಕುರಿತು ಉಪನ್ಯಾಸ ನೀಡಿದರು. ಸಮಾರಂಭವನ್ನು ಬಾ.ಸ.ಪ.ಪೂ. ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ನಿರ್ಮಲ ಅವರು ಗಿಡಗಳಿಗೆ ನೀರೆರೆಯುವುದರ ಮೂಲಕ ಚಾಲನೆ ನೀಡಿ ಮಾತನಾಡಿದರು. ಪ್ರಮುಖ ಭಾಷಣಕಾರರಾಗಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಕುಮುದ. ಆರ್., ಮಾತನಾಡಿ, "ಯುವ ಜನರಲ್ಲಿರುವ ಬುದ್ಧಿ ಮತ್ತು ಶಕ್ತಿ ದೇಶ ಸೇವೆಗೆ ಮುಡಿಪಾಗಿರಬೇಕೆಂದು ತಿಳಿಸಿದರು. ಈ ಸಂದರ್ಭದಲ್ಲಿ ಇಬ್ಬರು ವಿದ್ಯಾರ್ಥಿಗಳಾದ ಕು॥ ರಶ್ಮಿ ಮತ್ತು ಕು॥ ತೇಜಸ್ವಿನಿ ಯುವ ಶಕ್ತಿ ಕುರಿತಾದ ಪ್ರಬಂಧ ಮಂಡಿಸಿದರು. ಇದೇ ಸಂದರ್ಭದಲ್ಲಿ ಟಿ.ವಿ. ಎಸ್. ಜ್ಯೂಪಿಟರ್ ಸ್ಕೂಟರ್‌ನಲ್ಲಿ ಅಯೋಧ್ಯೆ ಮತ್ತು ನವದೆಹಲಿಗೆ ಏಕಾಂಗಿಯಾಗಿ ಸಂಕಲ್ಪ ಯಾತ್ರೆ ಕೈಗೊಂಡು ಸಂಪೂರ್ಣಗೊಳಿಸಿದ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟು, ಅಂಗನವಾಡಿ ಶಿಕ್ಷಕಿ ಲೇಡಿ ಕಬ್ ಮಾಸ್ಟರ್ ಶ್ರೀಮತಿ ವಿಜಯಕುಮಾರಿ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ರೇಂಜರ್ ಕು॥ ತೇಜಸ್ವಿನಿ ನಡೆಸಿಕೊಟ್ಟರು, ರೇಂಜರ್ ಕು॥ ಧೃತಿ ಸ್ವಾಗತಿಸಿದರು, ವಂದನಾರ್ಪಣೆಯನ್ನು ರೇಂಜರ್ ಕು॥ ಐಶ್ವರ್ಯ ಸಲ್ಲಿಸಿದರು.

* ಬೇಲೂರು, ಮೌಂಟ್ ಕಾರ್ಮೆಲ್ ಶಾಲೆ ಹಾಗೂ ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಬೇಲೂರು ಪಟ್ಟಣದ ಮುಖ್ಯ ರಸ್ತೆಯಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದ ಜಾಥಾವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಮೌಂಟ್ ಕಾರ್ಮೆಲ್ ಶಾಲೆಯ ಮುಖ್ಯಸ್ಥರಾದಂತಹ ಮೂಲಕ ಶ್ರೀ ಪ್ರಕಾಶ್ ಫಾದರ್ ಹಾಗೂ ಪಿಂಟೊ ಫಾದರ್ ಹಸಿರು ನಿಶಾನೆ ತೋರುವುದರ ಚಾಲನೆ ನೀಡಿದರು. ಆರಕ್ಷಕ ಉಪ ನಿರೀಕ್ಷಕರು ಹಾಗೂ ಸಿಬ್ಬಂದಿಯವರು ಹೆಚ್ಚಿನ ಭದ್ರತೆ ಒದಗಿಸಿಕೊಟ್ಟರು.

* ಜನವರಿ 15 ರಂದು ಹಳೇಬೀಡಿನ ಎಸ್.ಜಿ.ಆರ್. ಪಬ್ಲಿಕ್ ಶಾಲೆಯಲ್ಲಿ "ರಸ್ತೆ ಸುರಕ್ಷತಾ ಸಪ್ತಾಹದ" ನಿಮಿತ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಳೇಬೀಡಿನ ಆರಕ್ಷಕ ಠಾಣೆಯ ಆರಕ್ಷಣಾಧಿಕಾರಿ ಶ್ರೀಯುತ ಬಸನಲಿಂಗ ಪಾಟೀಲ್ ಬನಾಸೆರವರು ರಸ್ತೆ ನಿಯಮಗಳನ್ನು, ಅಪಘಾತ ತಡೆ, ಮುನ್ನೆಚ್ಚರಿಕಾ ಕ್ರಮಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಕಾರ್ಯದರ್ಶಿಗಳಾದ ಶ್ರೀ ಸುರೇಶ್ ಹೆಚ್.ಆರ್., ಖಜಾಂಚಿಗಳಾದ ಶ್ರೀಮತಿ ಮಂಜುಳಾ ಸುರೇಶ್, ಕಾಲೇಜು ಪ್ರಾಂಶುಪಾಲರಾದ ಶ್ರೀ ಹರೀಶ್ ಹೆಚ್.ಎಂ. ಪ್ರೌಢ ಶಾಲಾ ವಿಭಾಗದ ಮುಖ್ಯ ಶಿಕ್ಷಕರಾದ ಶ್ರೀ ಸಿದ್ದೇಶ್ ಜಿ.ಎನ್. ಶಿಕ್ಷಕ-ಶಿಕ್ಷಕಿಯರು ಶಾಲಾ ಕಾರ್ಯಕ್ರಮ ಹಾಗೂ ಜನಜಾಗೃತಿ ಜಾಥಾದಲ್ಲಿಯೂ ಸಹ ಪಾಲ್ಗೊಂಡಿದ್ದರು. ಪೊಲೀಸರ ಜೊತೆ ಕಬ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಹಳೇಬೀಡಿನ ಮುಖ್ಯ ರಸ್ತೆಗಳಲ್ಲಿ ಜನರಿಗೆ ರಸ್ತೆ ನಿಯಮಗಳನ್ನು ತಿಳಿಸುತ್ತಾ ಘೋಷವಾಕ್ಯಗಳನ್ನು ಕೂಗುವುದರೊಂದಿಗೆ ಅರಿವು ಮೂಡಿಸಿದರು.

* ಜನವರಿ 15 ರಂದು ರೋಟರಿ ಶಾಲೆ, ಅರೇಹಳ್ಳಿಯಲ್ಲಿ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಮತಿ ತುಳಸಿ ಅಮ್ಮಾಳ್‌ರವರು ವಹಿಸಿದ್ದರು ಹಾಗೂ ಈ ಕಾರ್ಯಕ್ರಮದಲ್ಲಿ ಸ್ಕೌಟ್ ಮಾಸ್ಟರ್ ಶ್ರೀಮತಿ ಶ್ವೇತಾರವರು ಮತ್ತು ಸ್ಕೌಟ್ಸ್-ಗೈಡ್ಸ್ ಕಬ್-ಬುಲ್‌ಬುಲ್‌ಗಳು ಉಪಸ್ಥಿತರಿದ್ದರು. ಮುಖ್ಯ ಶಿಕ್ಷಕರು ಸ್ವಾಮಿ ವಿವೇಕಾನಂದರವರ ಬಾಲ್ಯ, ಶಿಕ್ಷಣ, ಆಧ್ಯಾತ್ಮಿಕತೆ ಬಗ್ಗೆ ತಿಳಿಸಿದರು. ನಂತರ ಎಂಟನೇ ತರಗತಿ ಗೈಡ್ಸ್ ವಿದ್ಯಾರ್ಥಿನಿ ಸ್ವಾಮಿ ವಿವೇಕಾನಂದರವರ ಬಗ್ಗೆ ಒಂದು ಪುಟ್ಟ ಭಾಷಣವನ್ನು ಮಾಡಿದರು. ನಂತರ ಕಾರ್ಯಕ್ರಮವನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಲಾಯಿತು.




* ಜಿಲ್ಲಾ ಸಂಸ್ಥೆ ವತಿಯಿಂದ ನಗರದ ಪ್ರಮುಖ ಜಾಗಗಳಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದ ಪ್ರಯುಕ್ತ ಜಾಥ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಜಾಥಾ ಕಾರ್ಯಕ್ರಮವನ್ನು ಪೊಲೀಸ್ ಅಧಿಕಾರಿಗಳಾದ ಶ್ರೀ ಆನಂದ್, ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ವೈ.ಎಸ್. ವೀರಭದ್ರಪ್ಪ ಹಸಿರು ಬಾವುಟವನ್ನು ತೋರಿಸುವುದರ ಮೂಲಕ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷರು ಶ್ರೀಮತಿ ಎಂ.ಬಿ. ಗಿರಿಜಾಂಬಿಕಾ, ಜಿಲ್ಲಾ ಆಯುಕ್ತರು (ಸ್ಕೌಟ್) ಶ್ರೀ ಸ್ಟೀಫನ್ ಪ್ರಕಾಶ್, ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪೊಲೀಸ್ ಅಧಿಕಾರಿಗಳಾದ ಶ್ರೀಮತಿ ರುಕ್ಮಿಣಿ ಹಾಗೂ ಶ್ರೀ ರವಿಕಿರಣ್‌ರವರು ವಿದ್ಯಾರ್ಥಿಗಳಿಗೆ ರಸ್ತೆ ಜಾಥಾ ಸಮಯದಲ್ಲಿ ಸುರಕ್ಷತೆಯನ್ನು ನೀಡಿದರು.




* ರೋಟರಿ ಶಾಲೆ ಅರೇಹಳ್ಳಿಯಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಜಾಥಾವನ್ನು ಸ್ಕೌಟ್, ಗೈಡ್, ಕಬ್ಸ್-ಬುಲ್‌ಬುಲ್ಸ್‌ಗಳಿಂದ ಅರೇಹಳ್ಳಿಯ ಮುಖ್ಯ ರಸ್ತೆಯಲ್ಲಿ ನಡೆಸಲಾಯಿತು. ಈ ಜಾಥಾವನ್ನು ನಡೆಸಲು ಶಾಲಾ ಆಡಳಿತ ಮಂಡಳಿ, ರೋಟರಿ ಕ್ಲಬ್ ಅರೇಹಳ್ಳಿ, ಅರೇಹಳ್ಳಿ ಆರಕ್ಷಕ ಸಿಬ್ಬಂದಿಯವರು, ಶಾಲಾ ಮುಖೋಪಾಧ್ಯಾಯರು, ಸ್ಕೌಡ್ಸ್-ಗೈಡ್ಸ್ ಕಬ್ಸ್-ಬುಲ್‌ಬುಲ್ಸ್ ವಿಭಾಗದ ಶಿಕ್ಷಕರು ಮತ್ತು ಇತರ ಶಿಕ್ಷಕ ವೃಂದದವರು ಸಹಕರಿಸಿದರು.

## ಕಾರವಾರ (ಉ.ಕ.)

* ಜನವರಿ 11 ರಂದು ಜಿಲ್ಲಾ ಮಟ್ಟದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಮಾತನಾಡಿ "ನೀವು ಮಾಡುತ್ತಿರುವ ಈ ಕೆಲಸ ಪ್ರಮುಖವಾದದ್ದಾಗಿದೆ. ಜನರಿಗೆ ರಸ್ತೆ ಸುರಕ್ಷತೆ ಬಗ್ಗೆ ಜನರಿಗೆ ಅರಿವು ಮೂಡಿಸಿ ಹೆಲ್ಮೆಟ್ ಧರಿಸಿಕೊಂಡು ಬರುವಂತೆ, ದ್ವಿಚಕ್ರ ವಾಹನ, ಬಸ್ಸು, ಟೆಂಪೋಗಳು ರಸ್ತೆ ಸಂಚಾರದ ನಿಯಮಗಳನ್ನು ಅನುಸರಿಸಿಕೊಂಡು ಹೋಗುವಂತೆ ಮನವರಿಕೆ ಮಾಡಿಸಬೇಕು" ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಲಲಿತಾ ಹೆಗಡೆ, ಜಿಲ್ಲಾ ಕಾರ್ಯದರ್ಶಿ ಶ್ರೀ ಆರ್.ಟಿ. ಹೆಬ್ಬಾರ, ಉಳಿದ ಜಿಲ್ಲಾ, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ಕಬ್-ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್‌ಗಳು ಉಪಸ್ಥಿತರಿದ್ದರು.



* ಜನವರಿ 11 ರಂದು ಹಳದೀಪುರದಲ್ಲಿ ವಿಂಶತಿ ಸಂಭ್ರಮ ಕಾರ್ಯಕ್ರಮವನ್ನು ಶ್ರೀ ಪಿ.ಜಿ.ಆ್. ಸಿಂಧ್ಯಾರವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿ "ಲೀಲಾ ಗಣಪತಿ ಟ್ರಸ್ಟ್ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಆರೋಗ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾದದ್ದು, ಸ್ಕೌಟಿಂಗ್ ಗೈಡಿಂಗ್‌ನಲ್ಲಿ ಸಮಾಜಮುಖಿ ಕಾರ್ಯಗಳನ್ನು ಮಾಡಿ ಸಮಾಜಕ್ಕೆ ಸೇವೆ ಸಲ್ಲಿಸುವಂತಾಗಿದೆ" ಎಂದು ತಿಳಿಸಿದರು. ಉಡುಪಿ ಜಿಲ್ಲೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ ಶೆಟ್ಟಿರವರು ಮಾತನಾಡಿ ಎಲ್ಲರಿಗೂ ಶುಭ ಕೋರಿದರು. ವಿಂಶತಿ ಜ್ಯೋತಿ ಪುಸ್ತಕವನ್ನು ಸಾಮಾಜಿಕ ಕಾರ್ಯಕರ್ತರಾದ ಶ್ರೀ ಸೂರಜ್ ನಾಯ್ಕ ಸೋನಿರವರು ಬಿಡುಗಡೆಗೊಳಿಸಿ ಮಾತನಾಡಿದರು. ತದ ನಂತರ ಕಬ್-ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್‌ಗಳಿಗೆ ರಾಜ್ಯ ಪುರಸ್ಕಾರ ಹೊಂದಿದವರಿಗೆ, ವಿಭಾಗ ಮಟ್ಟ, ರಾಜ್ಯ ಮಟ್ಟದ ಭಾಗವಹಿಸಿದವರಿಗೆ, ಎಸ್.ಎಸ್.ಎಲ್.ಸಿ., ಪಿ.ಯು.ಸಿ.ಯಲ್ಲಿ ಶೇ. 90 ಕ್ಕಿಂತ ಹೆಚ್ಚು ಅಂಕಗಳಿಸಿದವರಿಗೆ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪದಾಧಿಕಾರಿಗಳು, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ಕಬ್-ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್, ರೇಂಜರ್ಸ್‌ಗಳು ಉಪಸ್ಥಿತರಿದ್ದರು. ಸ್ವಾಗತವನ್ನು ಡಾ|| ಜಿ.ಜಿ. ಸಬಾಹಿತ್ ನಿರ್ವಹಿಸಿದರು. ವಂದನಾರ್ಪಣೆಯನ್ನು ಶ್ರೀ ಆರ್.ಟಿ. ಹೆಬ್ಬಾರ್‌ರವರು ನಿರ್ವಹಿಸಿದರು.



* ಜನವರಿ 16 ರಂದು ಹೊನ್ನಾವರ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್-ಗೈಡ್ಸ್‌ಗಳಿಗೆ ದ್ವಿತೀಯ ಸೋಪಾನ, ಕಬ್‌ಗಳಿಗೆ ದ್ವಿತೀಯ ಚರಣ್, ಬುಲ್‌ಬುಲ್‌ಗಳಿಗೆ ರಜತ್ ಪಂಖ್ ಪರೀಕ್ಷಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಯವರ ಪ್ರತಿನಿಧಿ ಟಿ.ಪಿ.ಇ.ಓ.ರವರು ನಿರ್ವಹಿಸಿದರು. ಎ.ಡಿ.ಸಿ. ಶ್ರೀ ವಿರೇಂದ್ರರವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಶೋಭಾ ಕುಲಕರ್ಣಿ, ಸೆಂಟ್ ಥೋಮಸ್ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಿ.ಎಂ. ಭಟ್, ಆಂಗ್ಲ ಮಾಧ್ಯಮ ಶಾಲೆಯ ಪ್ರಾಂಶುಪಾಲರು ಎ.ಡಿ.ಸಿ.ಯಾದ ಶ್ರೀಮತಿ ತೆರೆಸಾ ಫರ್ನಾಂಡೀಸ್, ಶ್ರೀ ಬಿ.ಡಿ. ಫರ್ನಾಂಡಿಸ್, ಜಿಲ್ಲಾ ಖಜಾಂಚಿ,




ಸಂಸ್ಥೆಯ ಪದಾಧಿಕಾರಿಗಳು, ಸ್ಕೌಟರ್ಸ್–ಗೈಡರ್ಸ್‌ಗಳು, ಕಬ್–ಬುಲ್‌ಬುಲ್, ಸ್ಕೌಟ್–ಗೈಡ್ಸ್‌ಗಳು ಉಪಸ್ಥಿತರಿದ್ದರು.

* ಕಾರವಾರ ಬಾಲಮಂದಿರ ಶಾಲೆಯಲ್ಲಿ ಸ್ಕೌಟ್ಸ್–ಗೈಡ್ಸ್‌ಗಳಿಗೆ ಪೆಟ್ರೋಲ್ ಲೀಡರ್‌ಗಳ ಶಿಬಿರವನ್ನು ಜನವರಿ 17 ಹಾಗೂ 18 ರಂದು ಹಮ್ಮಿಕೊಳ್ಳಲಾಗಿತ್ತು. ಈ ಕ್ಯಾಂಪಿನ ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಬಿ.ಡಿ. ಫರ್ನಾಂಡೀಸ್ ಮತ್ತು ಗೈಡ್ ವಿಭಾಗದ ನಾಯಕಿಯಾಗಿ ಎ.ಎಸ್.ಓ.ಸಿ. ಶ್ರೀಮತಿ ಭಾರತಿ ಡಾಯಸ್‌ರವರು ನಿರ್ವಹಿಸಿದರು. ಮೊದಲನೆ ದಿನದ ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಚಾಯಾ ಜಾವ್ಕರ್‌ರವರು ಮಾತನಾಡಿ "ಪ್ರತಿಯೊಂದು ಶಾಲೆಯಲ್ಲಿ ಈ ರೀತಿ ಶಿಬಿರಗಳು ನಡೆಯಬೇಕು. ಈ ರೀತಿ ಆದರೆ ಮಾತ್ರ ಮಕ್ಕಳು ಖುಷಿಯಿಂದ ಮುಂದೆ ಬೇರೆ ಬೇರೆ ಶಿಬಿರಗಳಿಗೆ ಹೋಗಲು ತಯಾರಾಗುತ್ತಾರೆ" ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಅಂಜಲಿ ಮಾನೆರವರು ಮಾನತಾಡಿ "ನಮ್ಮ ಶಾಲೆಯಲ್ಲಿ ಸ್ಕೌಟ್ ಮತ್ತು ಗೈಡ್ ಮಾತ್ರ ಇದೆ ಅದೇ ರೀತಿ ಕಬ್–ಬುಲ್‌ಬುಲ್‌ಗಳನ್ನು ಸಹ ಪ್ರಾರಂಭಿಸುತ್ತೇವೆ" ಎಂದು ತಿಳಿಸಿ ಶಿಬಿರಕ್ಕೆ ಶುಭ ಕೋರಿದರು. 90 ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದ್ದರು.

* ಕಾರವಾರ ಸ್ಥಳೀಯ ಸಂಸ್ಥೆ ವತಿಯಿಂದ ಜನವರಿ 17 ರಂದು ಬಾಲಮಂದಿರ ಶಾಲೆಯಲ್ಲಿ "ರಸ್ತೆ ಸುರಕ್ಷತಾ ಸಪ್ತಾಹ" ವಾರದ ಆಚರಣೆಯು ಆಚರಿಸಲಾಯಿತು. ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಚಾಯಾಜಾವ್ಕರ್‌ರವರು ಹಾಗೂ ಬಾಲಮಂದಿರ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಅಂಜಲಿ ಮಾನೆರವರು ಸೇರಿ ಹಸಿರು ನಿಸಾನೆ ತೋರಿಸುವುದರ ಮೂಲಕ ಸಪ್ತಾಹಕ್ಕೆ ಚಾಲನೆ ನೀಡಿದರು. ಉಪಾಧ್ಯಕ್ಷರಾದ ಶ್ರೀ ಚಾಯಾಜಾವ್ಕರ್‌ರವರು ಮಾತನಾಡಿ "ತಮ್ಮ ತಮ್ಮ ಸ್ಥಳದಲ್ಲಿ ಜನರಿಗೆ ರಸ್ತೆ ಸುರಕ್ಷತಾ ಬಗ್ಗೆ ಅರಿವು ಮೂಡಿಸುವಂತೆ ಹಾಗೂ ಮಕ್ಕಳು ಸೈಕಲ್‌ನ್ನು ಮಾತ್ರ ಉಪಯೋಗಿಸಿ ಅದನ್ನು ಬಿಟ್ಟು ದ್ವಿಚಕ್ರ ವಾಹನವನ್ನು ಉಪಯೋಗಿಸದಿರಿ. 18 ವರ್ಷ ಆದ ಬಳಿಕ ಲೈಸನ್ ತೆಗೆದುಕೊಂಡು ಉಪಯೋಗಿಸಿ" ಎಂದು ತಿಳಿಸಿದರು. ಪ್ರಾಂಶುಪಾಲರು ಸಹ ಮಾತನಾಡಿದರು.



* ಸೇಂಟ್ ಥಾಮಸ್ ಆಂಗ್ಲ ಮತ್ತು ಕನ್ನಡ ಮಾಧ್ಯಮ ಶಾಲೆಯಲ್ಲಿ "ರಸ್ತೆ ಸುರಕ್ಷತಾ ಸಪ್ತಾಹ" ವಾರದ ಆಚರಣೆಗೆ ಹೊನ್ನಾವರ ಪೋಲಿಸ ಠಾಣೆಯ ಸಬ್–ಇನ್ಸ್‌ಪೆಕ್ಟರ್ ಆದ ಶ್ರೀ ರಾಜಶೇಖರ್‌ರವರು ದೀಪ ಬೆಳಗಿಸುವುದರ ಮೂಲಕ ಚಾಲನೆ ನೀಡಿ; ಅಪಘಾತ ತಡೆಗಟ್ಟುವಿಕೆ, ವೇಗ ನಿಯಂತ್ರಣವನ್ನು ತಡೆಗಟ್ಟುವಂತಹ ರಸ್ತೆ ಸುರಕ್ಷತೆ ನಿಯಮಗಳ ಬಗ್ಗೆ ಜಾಗೃತಿ ಮೂಡಿಸಿ, ವಯಸ್ಕರು ಮಾತ್ರ ವಾಹನವನ್ನು ಮಾತ್ರ ಚಲಾಯಿಸಬೇಕೆ ಹೊರತು ಅಪ್ರಾಪ್ತ ವಯಸ್ಕರು ವಾಹನವನ್ನು ಚಲಾಯಿಸಿದರೆ ಅದರಿಂದ ಆಗುವ ಹಾನಿಯ ಬಗ್ಗೆ ಹಾಗೂ ಸಪ್ತಾಹದ ಮುಖ್ಯ ಉದ್ದೇಶಗಳ ಮಾಹಿತಿ ನೀಡಿದರು. ಸ್ವಾಗತವನ್ನು ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಿ.ಎಂ. ಭಟ್ಟರು ನೇರವೆರಿಸಿದರು ವಂದನಾರ್ಪಣೆಯನ್ನು ಆಂಗ್ಲ ಮಾಧ್ಯಮ ಶಾಲೆಯ ಪ್ರಾಂಶುಪಾಲರು ಆದ ಶ್ರೀಮತಿ ತೆರೆಸಾ ಫರ್ನಾಂಡಿಸ್‌ರವರು ನೇರವೆರಿಸಿದರು. ಪ್ಲಾಕ್ ಲೀಡರ್ ಶ್ರೀಮತಿ ನಿಖಿತಾ ಫರ್ನಾಂಡಿಸ್ ಹಾಗೂ ಶ್ರೀಮತಿ ಇಂದಿರಾಗೌಡರವರು ನಿರೂಪಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ಶಿಕ್ಷಕಿ ಶ್ರೀಮತಿ ಎ.ಸಿ. ಅಣ್ಣಮ್ಮ, ಶಾಲೆಯ ಸ್ಕೌಟರ್–ಗೈಡರ್‌ಗಳು ಉಳಿದ ಸಿಬ್ಬಂದಿ ವರ್ಗದವರು ಶಾಲೆಯಎಲ್ಲಾ ಸ್ಕೌಟ್ಸ್–ಗೈಡ್ಸ್, ಕಬ್–ಬುಲ್‌ಬುಲ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕೊಡಗು

* ಜನವರಿ 11 ರಿಂದ 13ರ ವರೆಗೆ ಸಂಪಾಜೆ ಸ್ಥಳೀಯ ಸಂಸ್ಥೆಯ ಮೇಳ ಕಾಲ ನಡೆಯಿತು. ಚೆಂಬುವಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗ್ರಾಮದ ಹಿರಿಯರು ಹಾಗೂ ನಿವೃತ್ತ ಪ್ರಾಂಶುಪಾಲರಾದ ಶ್ರೀ ದಾಮೋದರ ಕೆ. ಅವರು ಮೇಳವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಹೊಸ ಸಂಚಾರ ಕಾರ್ಯಕ್ರಮಕ್ಕೆ ಗ್ರಾಮ ಪಂಚಾಯಿತಿ ಸದಸ್ಯ ಶ್ರೀ ಹಂಸಲೇಖ ಚಾಲನೆ ನೀಡಿದರು. ವಿವೇಕಾನಂದ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಅರ್ಪಿಸಲಾಯಿತು. ವಿವೇಕ ಜಾಗೃತ ಬಳಗದ ಶ್ರೀ ಚಂದ್ರಶೇಖರ್ ಹೊಸೂರು ಅವರು ಸ್ವಾಮಿ ವಿವೇಕಾನಂದರ ಕುರಿತು ಮಾತನಾಡಿದರು. ಅತಿಥಿಗಳಾಗಿ ಪಾಲ್ಗೊಂಡಿದ್ದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿ ಶ್ರೀ ರವೀಂದ್ರ ರೈ ಬಿ.ಕೆ. ಅವರು ರಕ್ತದಾನದ ಕುರಿತು ವಿವರಿಸಿ ಮಕ್ಕಳಲ್ಲಿ ಅರಿವು ಮೂಡಿಸಿದರು. ಶಿಬಿರವನ್ನು ನಡೆಸಿಕೊಟ್ಟ ಡಾ. ಸಾಗರ್ ಅವರು ರಕ್ತದಾನ ಮತ್ತು ದಂಚ ತಪಾಸಣೆಯ ಮಹತ್ವದ ಬಗ್ಗೆ ಮಾತನಾಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ತೀರ್ಥರಾಮ ಪಿ.ಜಿ. ಉದ್ಘಾಟಿಸಿ ಶುಭ ಹಾರೈಸಿದರು. ಸುಮಾರು 31 ದಾನಿಗಳು ರಕ್ತದಾನ ಮಾಡಿದರು. ವಿದ್ಯಾರ್ಥಿಗಳಿಗಾಗಿ ಗ್ರಾಮೀಣ ಕ್ರೀಡೆಗಳಾದ ಹಗ್ಗ ಜಗ್ಗಾಟ ತೆಂಗಿನಕಾಯಿಗೆ ಕಲ್ಲು ಹೊಡೆಯುವ ಸ್ಪರ್ಧೆ, ವಿವಿಧ ಸಾಹಸಮಯ ಕ್ರೀಡೆಗಳು, ಜಾನಪದ ಹಾಡು ಮತ್ತು ನೃತ್ಯ ಸ್ಪರ್ಧೆಯನ್ನು ಆಯೋಜಿಸಲಾಯಿತು. ಸಂಜೆ ನಡೆದ ಭವ್ಯ ಶಿಬಿರಾಗ್ನಿ ಕಾರ್ಯಕ್ರಮವನ್ನು ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಜಯಂತಿ ಎಂ.ಎನ್. ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಮಾಜ ಸೇವಕ ಶ್ರೂ ಸೂರಜ್ ಹೊಸೂರು ಭಾಗವಹಿಸಿದ್ದರು. ಶ್ರೀದೇವಿ ಭಜನ ಮಂಡಳಿಯಿಂದ ಭಜನೆ ಮತ್ತು ಭಜನಾ ಕುಣಿತ ಕಾರ್ಯಕ್ರಮ ನಡೆಯಿತು.



* ಜಿಲ್ಲಾ ಸಂಸ್ಥೆ ಕೊಡಗು ಪೋಲೀಸ್ ಇಲಾಖೆ ಶಾಲಾ ಶಿಕ್ಷಣ ಇಲಾಖೆ ಇವುಗಳ ಸಂಯುಕ್ತ ಆಶ್ರಯದಲ್ಲಿ ರಸ್ತೆ ಸುರಕ್ಷಾ ಸಪ್ತಾಹದ ಅಂಗವಾಗಿ ಜನವರಿ 11 ರಂದು ಮಡಿಕೇರಿ ನಗರದಲ್ಲಿ ಬೃಹತ್ ಜಾಥಾವನ್ನು ಹಮ್ಮಿಕೊಳ್ಳಲಾಯಿತು. ಗಾಂಧಿ ಮಂಟಪದ ಬಳಿ ಬೃಹಜಾಥಾವನ್ನು ಇನ್ಸ್‌ಪೆಕ್ಟರ್ ಶ್ರೀ ರಾಜುರವರು ಹಸಿರು ನಿಶಾನೆ ತೋರಿಸುವುದರ ಮೂಲಕ ಉದ್ಘಾಟನೆ ಮಾಡಿದರು. ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂರವರು ಮಾತನಾಡುತ್ತಾ "ರಸ್ತೆ ಸುರಕ್ಷತೆ ಬಗ್ಗೆ ಸ್ಕೌಟ್ಸ ಮತ್ತು ಗೈಡ್ಸ್ ಮಕ್ಕಳ ಮೂಲಕ ನಾಗರಿಕರಲ್ಲಿ ಅರಿವುಡಿಸುವ ಕಾರ್ಯಕ್ರಮವನ್ನು ಮಾಡುತ್ತಿದ್ದು, ಮಕ್ಕಳು ಮೊದಲಿಗೆ ಇದನ್ನು ಅರಿತುಕೊಂಡರೆ ಬಹಳ ಒಳ್ಳೆಯದಾಗುತ್ತದೆ" ಎಂದು ನುಡಿದರು.



* ಕುಶಾಲನಗರ ಪೋಲೀಸ್ ಇಲಾಖೆ ವತಿಯಿಂದ ರಸ್ತೆ ಸುರಕ್ಷಾ ಸಪ್ತಾಹ ಕಾರ್ಯಕ್ರಮ ನಡೆಯಿತು. ಸಂಚಾರಿ ಪೋಲೀಸ್ ಠಾಣೆ ಹಾಗೂ ಪಟ್ಟಣ ಠಾಣೆ ಅಧಿಕಾರಿ ಸಿಬ್ಬಂದಿಗಳು, ಪಟ್ಟಣದ ನಾನಾ ಶಾಲಾ ಕಾಲೇಜು ವಿದ್ಯಾರ್ಥಿಗಳು, ಸ್ಕೌಟ್ಸ್-ಗೈಡ್ಸ್‌ಗಳು ಮತ್ತು ಸಂಘ-ಸಂಸ್ಥೆಗಳ ಪ್ರಮುಖರು ಬೈಚನಹಳ್ಳಿ ಬಳಿಯಿಂದ ಮೆರವಣಿಗೆ ಮೂಲಕ ಮುಖ್ಯ ರಸ್ತೆಗಳಲ್ಲಿ ತೆರಳಿ ಜನರಿಗೆ ರಸ್ತೆ ನಿಯಮಗಳ ಬಗ್ಗೆ ಸಮರ್ಪಕ ವಾಹನ ಸಂಚಾರ ವ್ಯವಸ್ಥೆ ಬಗ್ಗೆ ಜಾಗೃತಿ ಮೂಡಿಸಿದರು. ಮಾರಿಯಮ್ಮ ದೇವಾಲಯ ಬಳಿ ಕುಶಾಲನಗರ ಡಿ.ವೈಎಸ್.ಪಿ. ಶ್ರೀ ಆರ್.ವಿ. ಗಂಗಾಧರಪ್ಪ ಅವರು ಮೆರವಣಿಗೆಗೆ ಚಾಲನೆ ನೀಡಿದರು.




ಈ ಸಂದರ್ಭ ಮಾತನಾಡಿದ ಅವರು "ಒಂದು ವಾರಗಳ ಕಾಲ ನಾನಾ ಕಾರ್ಯಕ್ರಮಗಳೊಂದಿಗೆ ರಸ್ತೆ ಸಂಚಾರಿ ಸುರಕ್ಷತಾ ಕಾರ್ಯಕ್ರಮಗಳ ಬಗ್ಗೆ ಜಾಗೃತಿ ಮೂಡಿಸುವ ಚಟುವಟಿಕೆಗಳು ನಡೆಯಲಿವೆ" ಎಂದು ಮಾಹಿತಿ ನೀಡಿದರು. ನೂರಾರು ವಿದ್ಯಾರ್ಥಿಗಳು ಸೂಚನಾ ಫಲಕಗಳ ಜೊತೆಗೆ ಕುಶಾಲನಗರ ಮುಖ್ಯ ರಸ್ತೆ ರಥ ಬೀದಿ ಮತ್ತು ಇತರ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಜನರಲ್ಲಿ ಸಂಚಾರಿ ವ್ಯವಸ್ಥೆಯ ಬಗ್ಗೆ ಮತ್ತು ಸಮರ್ಪಕವಾಗಿ ನಿಯಮ ಪಾಲಿಸುವ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ನಡೆಯಿತು. ಕುಶಾಲನಗರ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಪ್ರಕಾಶ್, ಸಂಚಾರಿ ಶ್ರೀ ಗಣೇಶ್, ಸಹಾಯಕ ಠಾಣಾಧಿಕಾರಿಗಳಾದ ಶ್ರೀ ಸುಬ್ರಹ್ಮಣ್ಯ, ಶ್ರೀಮತಿ ಸುಕನ್ಯಾ, ಸ್ಕೌಟ್-ಗೈಡ್ಸ್ ತಾಲ್ಲೂಕು ಅಧ್ಯಕ್ಷ ಡಾಕ್ಟರ್ ಶ್ರೀ ಪ್ರವೀಣ್ ಮತ್ತು ಪದಾಧಿಕಾರಿಗಳು ಇದ್ದರು.




* ಸೇನಾ ವಾಹನ ಪ್ರಪಾತಕ್ಕೆ ಬಿದ್ದು ಗಂಭೀರವಾಗಿ ಗಾಯಗೊಂಡು ಶ್ರೀನಗರದ ಸೇನಾ ಅಸ್ಪತ್ರೆಯಲ್ಲಿ ಹುತಾತ್ಮರಾಗಿರುವ ಕೊಡಗಿನ ಆಲೂರು ಸಿದ್ದಾಪುರದ ವೀರಯೋಧ ದಿವಿನ್‌ರವರ ಪಾರ್ಥಿವ ಶರೀರವು ಡಿಸೆಂಬರ್ 31 ರಂದು ರಾತ್ರಿ 11.30 ಸುಮಾರಿಗೆ ಕೊಡಗು ಜಿಲ್ಲೆಯ ಕುಶಾಲನಗರದ ಕೊಪ್ಪಗೇಟ್ ಬಳಿ ಬಂದಿದ್ದು. ಈ ವೇಳೆ ಕುಶಾಲನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರನ್ನು ಒಳಗೊಂಡಂತೆ ಪದಾಧಿಕಾರಿಗಳು ಗೌರವ ಶ್ರದ್ಧಾಂಜಲಿ ಸಮರ್ಪಿಸಿದರು.

* ಜನವರಿ 01ರಂದು ವೀರಾಯೋಧ ದಿವಿನ್‌ರವರ ಪಾರ್ಥಿವ ಶರೀರವನ್ನು ಪಿ.ಎಂ.ಶ್ರೀ ಸ.ಮಾ.ಪ್ರಾ ಶಾಲೆ ಕುಶಾಲನಗರದ ಶಾಲಾ ಮೈದಾನದಲ್ಲಿ ಸಾರ್ವಜನಿಕರ ವೀಕ್ಷಣೆಗೆ ಇಡಲಾಗಿದ್ದು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ವತಿಯಿಂದ ಅಂತಿಮ ನಮನ ಸಲ್ಲಿಸಲಾಯಿತ್ತು. ಈ ಸಂದರ್ಭ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ರಾಣಿಮಾಚಯ್ಯ, ಮತ್ತಿತರರು ಹಾಜರಿದ್ದರು.

## ಕೋಲಾರ

* ಡಿಸೆಂಬರ್ 3 ರಂದು ಸ್ಕೌಟ್ ಭವನದಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲೆಯ ಸಿ.ಆರ್.ಪಿ/ ಬಿ.ಆರ್.ಪಿ/ ಇ.ಸಿ.ಓ.ಗಳಿಗೆ ಒಂದು ದಿನದ ಸಾಮಾನ್ಯ ಮಾಹಿತಿ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರವನ್ನು ಜಿಲ್ಲಾ ಉಪನಿರ್ದೇಶಕರಾದ ಶ್ರೀ ಕೃಷ್ಣಮೂರ್ತಿ ಅವರು ಉದ್ಘಾಟಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಜಿಲ್ಲಾ ಸಂಘಟಕರಾದ ಶ್ರೀ ಬಾಬು ಮತ್ತು ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್‌ರವರು ಕರ್ತವ್ಯ ನಿರ್ವಹಿಸಿದರು.



* ಡಿಸೆಂಬರ್ 5 ರಂದು ನಗರದ ಎಸ್.ಡಿ.ಸಿ. ಕಾಲೇಜಿನಲ್ಲಿ ಸ್ಕೌಟ್ಸ್ ಗೈಡ್ಸ್ ಧ್ವಜ ದಿನಾಚರಣೆ ಮತ್ತು ಸಾಮಾನ್ಯ ಮಾಹಿತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಕಾಲೇಜಿನ ರೇಂಜರ್ ಲೀಡರ್ ಶ್ರೀಮತಿ ರೇವತಿ, ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್, ಕರ್ತವ್ಯ ನಿರ್ವಹಿಸಿದರು. ಇದೇ ದಿನ ಬಂಗಾರಪೇಟೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾಮಾನ್ಯ ಮಾಹಿತಿ ಶಿಬಿರವನ್ನು ಆಯೋಜನೆ ಮಾಡಲಾಯಿತು, ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಶಕುಂತಲಾರವರು ಉದ್ಘಾಟಿಸಿ ಶುಭ ಕೋರಿದರು. ಕಾಲೇಜಿನ ರೋವರ್ ಲೀಡರ್ ಶ್ರೀ ಮುನಿಸ್ವಾಮಿಗೌಡ, ರೇಂಜರ್ ಲೀಡರ್ ಶ್ರೀಮತಿ ಜ್ಯೋತಿರವರು ಉಪಸ್ಥಿತರಿದ್ದರು.




* ಡಿಸೆಂಬರ್ 6 ರಂದು ಮಾಲೂರು ತಾಲ್ಲೂಕಿನ ತೊರಲಕ್ಕಿ ಗ್ರಾಮ ಸರ್ಕಾರಿ ಪ್ರೌಢ ಶಾಲೆಯಲ್ಲಿ ಧ್ವಜ ದಿನಾಚರಣೆಯನ್ನು ಮತ್ತು ಸಾಮಾನ್ಯ ಮಾಹಿತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು, ಶಾಲೆಯ ಸ್ಕೌಟ್ಸ್ ಶಿಕ್ಷಕರಾದ ಶ್ರೀ ವೇಣುಗೋಪಾಲ್, ಗೈಡ್ಸ್ ಶಿಕ್ಷಕಿ ಮಾಲತಿ ರವರು ಕಾರ್ಯಕ್ರಮವನ್ನು ಸಂಘಟಿಸಿದರು.



* ಡಿಸೆಂಬರ್ 7 ಮತ್ತು 9 ರಂದು ಕೋಲಾರ ನಗರದ ಮದರ್ ಥೇರಸಾ ಶಾಲೆ ಮತ್ತು ಗುಪ್ತಾಸ್ ಇಂಟರ್ ನ್ಯಾಷನಲ್ ಶಾಲೆ ಮತ್ತು ಸುಭಾಷ್ ಶಾಲೆಯಲ್ಲಿ ಧ್ವಜ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.

* ಡಿಸೆಂಬರ್ 21ರಂದು ಮಾಲೂರು ತಾಲ್ಲೂಕಿನ ಗುಂಡ್ಲಹಳ್ಳಿ ಶಾಲೆಯಲ್ಲಿ ಸಸಿನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಶಾಲಾ ಶಿಕ್ಷಕಿ ಶ್ರೀಮತಿ ಸವಿತಾ ಎಂ. ಚಾಲನೆ ನೀಡಿದರು.



* ಡಿಸೆಂಬರ್ 23 ರಂದು "ಸ್ಕೌಟ್ಸ್-ಗೈಡ್ಸ್‌ಗಳ ನಡಿಗೆ ಕೃಷಿಯ ಕಡೆಗೆ" ಕಾರ್ಯಕ್ರಮ ದಡಿಯಲ್ಲಿ ಕೋಲಾರ ತಾಲ್ಲುಕಿನ ವಕ್ಕಲೇರಿ ಗ್ರಾಮದಲ್ಲಿನ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ಚೌಡೇಶ್ವರಿ ರಾಮುರವರ ತೋಟಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ರೈತರ ಜೀವನ ಶೈಲಿ, ವ್ಯವಸಾಯ ಪದ್ದತಿಯ ಬಗ್ಗೆ ವಿವರಣೆಯನ್ನು ನೀಡಲಾಯಿತು. ಈ ಸಂದರ್ಭದಲ್ಲಿ 12 ಜನ ಪ್ರಗತಿ ಪಥ ರೈತರನ್ನು ಸಂಸ್ಥೆಯ ವತಿಯಿಂದ ಸನ್ಮಾನ ಮಾಡಲಾಯಿತು.



* ಡಿಸೆಂಬರ್ 30 ಮತ್ತು 31 ರಂದು ಕೋಲಾರ ಸ್ಥಳೀಯ ಸಂಸ್ಥೆ ವತಿಯಿಂದ ದ್ವಿತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ನಗರದ ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಲಾಗಿತ್ತು.

## ಶಿವಮೊಗ್ಗ

* ಜನವರಿ 10 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರು ಶಿವಮೊಗ್ಗ ಜಿಲ್ಲಾ ಸಂಸ್ಥೆಗೆ ಭೇಟಿ ನೀಡಿ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳೊಂದಿಗೆ ವಿಚಾರ ವಿನಿಮಯ ಮಾಡಿದರು. ಶ್ರೀ ಎಸ್.ಜಿ. ಆನಂದ್, ಜಿಲ್ಲಾ ಆಯುಕ್ತರು (ಸ್ಕೌ) ಸರ್ವರನ್ನು ಸ್ವಾಗತಿಸಿದರು. ಶ್ರೀ ಚಂದ್ರಶೇಖರಯ್ಯ ಜಿಲ್ಲಾ ಕಾರ್ಯದರ್ಶಿ 2024–2025ನೇ ಸಾಲಿನಲ್ಲಿ ನಡೆಸಿದ ಕಾರ್ಯಚಟುವಟಿಕೆ ಬಗ್ಗೆ ಮಾಹಿತಿ ನೀಡಿದರು. ಶ್ರೀ ಕೆ. ರವಿ, ಜಿಲ್ಲಾ ಆಯುಕ್ತರು (ರೋವರ್)ರವರು ಮುಂದಿನ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ರಾಜ್ಯ ಸಂಘಟನಾ ಆಯುಕ್ತ (ಸ್ಕೌ) ಶ್ರೀ ಎಂ. ಪ್ರಬಾಕರ್ ಭಟ್‌ರವರು ರಾಜ್ಯ ಸಂಸ್ಥೆಯ ವತಿಯಿಂದ ಮುಂದಿನ ದಿನಗಳಲ್ಲಿ ಆಯೋಜಿಸಿರುವ ಕಾರ್ಯಕ್ರಮಗಳ ಮಾಹಿತಿ ನೀಡಿದರು. ಶ್ರೀ ರಾಜೇಶ್ ವಿ. ಅವಲಕ್ಕಿ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಸರ್ವರಿಗೂ ವಂದಿಸಿದರು.




* "ವಿದ್ಯಾರ್ಥಿಗಳಲ್ಲಿ ಉತ್ತಮ ವ್ಯಕ್ತಿತ್ವ ರೂಪುಗೊಳ್ಳಲು ಹಾಗೂ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಲು ಸ್ಕೌಟ್ಸ್ ಮತ್ತು ಗೈಡ್ಸ್ ಸಹಕಾರಿ" ಎಂದು ಶಾಲಾ ಶಿಕ್ಷಣ ಇಲಾಖೆ ಪದವಿಪೂರ್ವ ಉಪನಿರ್ದೇಶಕ ಶ್ರೀ ಚಂದ್ರಪ್ಪ ಎಸ್. ಗುಂಡುಪಲ್ಲ ಹೇಳಿದರು. ಇತ್ತೀಚೆಗೆ ಜಿಲ್ಲಾ ಸಂಸ್ಥೆ ವತಿಯಿಂದ ರೋವರ್ಸ್, ರೇಂಜರ್ಸ್‌ಗಳಿಗೆ ಆಯೋಜಿಸಿದ್ದ ಜಿಲ್ಲಾ ಮಟ್ಟದ ದಳ ನಿರ್ವಹಣೆ ಹಾಗೂ ಜಾರಣ ಶಿಬಿರ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರಾಂಶುಪಾಲರ ಸಂಘದ ಅಧ್ಯಕ್ಷ, ಕಾಚಿನಕಟ್ಟೆ ಕಾಲೇಜಿನ ಪ್ರಾಂಶುಪಾಲ ಶ್ರೀ ಪಂಡರೀನಾಥ ಮಾತನಾಡಿ, "ಸ್ಕೌಟ್ಸ್-ಗೈಡ್ಸ್ ಸೇವೆಯು ಎಲ್ಲೆಡೆ ವಿಸ್ತರಿಸಿ ಮಕ್ಕಳಲ್ಲಿ ಆತ್ಮವಿಶ್ವಾಸ ವೃದ್ಧಿಸುವ ಹಾಗೂ ಜೀವನದಲ್ಲಿ ಸಾಧನೆ ಮಾಡುವ ಮನೋಭಾವ ಬೆಳೆಸುತ್ತಿದೆ" ಎಂದರು. ಅಧ್ಯಕ್ಷತೆಯನ್ನು ಗೈಡ್ಸ್ ಆಯುಕ್ತೆ ಶ್ರೀಮತಿ ಶಕುಂತಲಾ ಚಂದ್ರಶೇಖರ್ ವಹಿಸಿದ್ದು, "ಶಿಬಿರದಲ್ಲಿ ತರಬೇತಿ ಪಡೆದು ಬರುವ ದಿನಗಳಲ್ಲಿ ಉನ್ನತ ಹಂತಕ್ಕೆ ತಲುಪಬೇಕು. ವಿದ್ಯಾರ್ಥಿಗಳು ಕಾಲೇಜಿಗೆ ಉತ್ತಮ ಹೆಸರು ತರಬೇಕು" ಎಂದು ಹೇಳಿದರು. ರೋವರ್ ವಿಭಾಗ ಜಿಲ್ಲಾ ಆಯುಕ್ತ ಶ್ರೀ ಕೆ. ರವಿ ಮಾತನಾಡಿ, ಶಿಬಿರದ ಉದ್ದೇಶ ಹಾಗೂ ಸ್ಕೌಟ್ಸ್ ಗೈಡ್ಸ್ ನಡೆದು ಬಂದ ಹಾದಿ ಬಗ್ಗೆ ವಿವರಿಸಿದರು.



* "ಸ್ಕೌಟ್ಸ್-ಗೈಡ್ಸ್‌ಗಳ ಶಿಸ್ತು ಮತ್ತು ಸಮಯ ಪರಿಪಾಲನೆಯನ್ನು ಬೆಳೆಸುತ್ತದೆ" ಎಂದು ಶಾಸಕ ಶ್ರೀ ಆರಗ ಜ್ಞಾನೇಂದ್ರ ಹೇಳಿದರು. ಅವರು ಸ್ಕೌಟ್ಸ್-ಗೈಡ್ಸ್ ರ್‍ಯಾಲಿಯನ್ನು ಉದ್ಘಾಟಿಸಿ ಮಾತನಾಡಿದರು. ಭಾರತ್ ಸ್ಕೌಟ್ಸ್-ಗೈಡ್ಸ್ ಸ್ಥಳೀಯ ಸಂಸ್ಥೆ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ತೀರ್ಥಹಳ್ಳಿ ತಾಲ್ಲೂಕು ಮಟ್ಟದ ತರಬೇತಿ ಶಿಬಿರ ಹಾಗೂ ಸ್ಕೌಟ್ಸ್-ಗೈಡ್ಸ್ ರ್‍ಯಾಲಿ ನಡೆಯಿತು. ಪಟ್ಟಣ ಪಂಚಾಯತ್ ಅಧ್ಯಕ್ಷ ಶ್ರೀ ರಹಮತ್ ಉಲ್ಲಾ ಅಸಾದಿ ಧ್ವಜಾರೋಹಣ ನೆರವೇರಿಸಿದರು. ಈ ತರಬೇತಿ ಶಿಬಿರದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಗಣೇಶ್, ತರಬೇತಿದಾರರಾದ ಶ್ರೀ ವೀರಭದ್ರಪ್ಪ, ಶ್ರೀ ರಾಜೇಶ್, ಶ್ರೀ ಶಿವಶಂಕರಪ್ಪ, ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಶ್ರೀ ನಾಗರಾಜ್, ಪಟ್ಟಣ ಪಂಚಾಯತ್ ಉಪಾಧ್ಯಕ್ಷೆ ಗೀತಾ ರಮೇಶ್, ಸ್ಕೌಟ್ಸ್-ಗೈಡ್ಸ್ ಉಪಾಧ್ಯಕ್ಷ ಶ್ರೀ ಕೆ. ಮೋಹನ್, ಶ್ರೀಮತಿ ಜೆಸ್ಸಿಬಾಯಿ, ಕೋಶಾಧಿಕಾರಿ ಶ್ರೀಮತಿ ಸುಜಾತ ಉಪಸ್ಥಿತರಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ 600ಕ್ಕೂ ಹೆಚ್ಚು ಅಂಕ ಪಡೆದ ಸ್ಕೌಟ್ಸ್-ಗೈಡ್ಸ್‌ಗಳು ಭಾಗವಹಿಸಿದ್ದರು.



* "ಪ್ರತಿಯೊಬ್ಬರೂ ವಾಹನ ಕೊಂಡುಕೊಳ್ಳುವಾಗ ಅದರ ಕಾಯ್ದೆ ಕಾನೂನು ತಿಳಿದುಕೊಳ್ಳುವ ಅವಶ್ಯಕತೆಯಿದೆ. ಆದರ ಕಾಯ್ದೆ, ಕಾನೂನು, ತಿಳಿದುಕೊಂಡ ಬಳಿಕವಷ್ಟೇ ವಾಹನಕೊಂಡು ಚಲಾಯಿಸಿ" ಎಂದು ಹೆಚ್ಚುವರಿ ಜಿಲ್ಲಾ ರಕ್ಷಣಾಧಿಕಾರಿ ಶ್ರೀ ಅನಿಲ್ ಕುಮಾರ್ ಭೂಮರೆಡ್ಡಿ ಹೇಳಿದರು. ಭಾರತ್ ಸ್ಕೌಟ್-ಗೈಡ್ಸ್ ಹಾಗೂ ಶಿವಮೊಗ್ಗ ನಗರ ಸಂಚಾರ ಪೊಲೀಸ್ ಇಲಾಖೆ ವತಿಯಿಂದ ಭಾನುವಾರ ಆಯೋಜಿಸಿದ್ದ ರಸ್ತೆ ಸುರಕ್ಷಣಾ ಸಪ್ತಾಹ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಇದೇ ವೇಳೆ ಚಿತ್ರಕಲೆ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಸ್ಕೌಟ್-ಬುಲ್‌ಬುಲ್ಸ್ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ವೇದಿಕೆಯಲ್ಲಿ ಸ್ಕೌಟ್ಸ್ ಆಯುಕ್ತ



ಶ್ರೀ ಎಸ್.ಜಿ. ಆನಂದ್, ಗೈಡ್ ಆಯುಕ್ತೆ ಶ್ರೀಮತಿ ಶಕುಂತಲಾ ಚಂದ್ರಶೇಖರ, ರೋವರ್ ಜಿಲ್ಲಾ ಆಯುಕ್ತ ಶ್ರೀ ಕೆ. ರವಿ, ಕೇಂದ್ರ ಸ್ಥಾನಿಕ ಆಯುಕ್ತ ಶ್ರೀ ಜಿ. ವಿಜಯಕುಮಾರ್, ಡಿವೈಎಸ್‌ಪಿ ಶ್ರೀ ಸಂಜೀವ್‌ಕುಮಾರ್ ಟ್ರಾಫಿಕ್ ಇನ್ಸ್‌ಪೆಕ್ಟರ್ ಶ್ರೀ ಸಂತೋಷ್ ಸೇರಿದಂತೆ ಇತರರಿದ್ದರು.

* ಜಿಲ್ಲಾ ಸಂಸ್ಥೆ ಹಾಗೂ ಶಿವಮೊಗ್ಗ ಸ್ಥಳೀಯ ಸಂಸ್ಥೆಯ ಸಹಯೋಗದಲ್ಲಿ ಜನವರಿ 12 ರಂದು ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ರಾಷ್ಟ್ರೀಯ ಯುವದಿನಾಚರಣೆ ಅಂಗವಾಗಿ ಸ್ವಾಮಿವಿವೇಕಾನಂದ 163ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಡಾ. ರವಿಕಿರಣ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ ದೀಪವನ್ನು ಪ್ರಜ್ವಲಿಸಿ ಮಾತನಾಡುತ್ತಾ, ಸ್ವಾಮಿವಿವೇಕಾನಂದರ ಜೀವನದಲ್ಲಿ ಆಗಿ ಹೋದ ಘಟನೆಗಳು, ಅನುಭವಿಸಿದ ನೋವು ಅವಮಾನ ಮತ್ತು ಅದನ್ನು ಎದುರಿಸಿದ ರೀತಿಯನ್ನು ಮಕ್ಕಳಿಗೆ ಕಣ್ಣು ಕಟ್ಟುವ ರೀತಿಯಲ್ಲಿ ಹೇಳಿದರು. ಶ್ರೀ ಎಸ್.ಜಿ. ಆನಂದ್ ಜಿಲ್ಲಾ ಆಯುಕ್ತರು (ಸ್ಕೌ) ಸರ್ವರನ್ನು ಸ್ವಾಗತಿಸಿದರು. ಕೇಂದ್ರ ಸ್ಥಾನಿಕ ಆಯುಕ್ತ ಶ್ರೀ ಜಿ. ವಿಜಯಕುಮಾರ್ ಅತಿಥಿಗಳನ್ನು ಪರಿಚಯಿಸಿದರು. ಅಧ್ಯಕ್ಷತೆ ವಹಿಸಿದ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಅವರು ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಸ್ವಾಮಿ ವಿವೇಕಾನಂದರ ದೃಷ್ಟಿಕೋಣವನ್ನು ಜೀವನದಲ್ಲಿ ಅಳವಡಿಸಿಕೊಂಡು ಅವರ ಧ್ಯೇಯವಾದ ಸಮಾಜಕ್ಕಾಗಿ ಬಾಳು ಎನ್ನುವಂತೆ ಸಮಾಜದಲ್ಲಿ ಎಲ್ಲೆಲ್ಲಿ ಅವಕಾಶ ಸಿಗುವುದೋ ಅಲ್ಲಲ್ಲಿ ಸೇವೆ ಸಲ್ಲಿಸಿ ಭಾರತ ಮಾತೆಗೆ ನಿಮ್ಮ ಕೊಡುಗೆ ಕೊಡಿ ಎಂದು ಮಕ್ಕಳಿಗೆ ಕರೆ ನೀಡಿದರು. ಜಿಲ್ಲಾ ಸಹಕಾರ್ಯದರ್ಶಿ ಶ್ರೀ ವೈ.ಆರ್. ವೀರೇಶಪ್ಪ ಸರ್ವರಿಗೂ ವಂದಿಸಿದರು. ಜಿಲ್ಲಾ ಖಜಾಂಚಿ ಚೂಡಾಮಣಿ ಪವಾರ್, ಸಹಾಯಕ ಜಿಲ್ಲಾ ಆಯುಕ್ತ ಶ್ರೀ ಮಲ್ಲಿಕಾರ್ಜುನ ಕಾನೂರ್, ಕೇಂದ್ರ ಸ್ಥಾನಿಕ ಆಯುಕ್ತ ಶ್ರೀ ಎಂ.ಕೆ. ಕೃಷ್ಣಸ್ವಾಮಿ ಉಪಸ್ಥಿತರಿದ್ದರು. ನಗರದ ವಿವಿಧ ಶಾಲಾ, ಕಾಲೇಜಿನಿಂದ 150 ಮಕ್ಕಳು ಭಾಗವಹಿಸಿದ್ದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ರಾಜೇಶ್ ವಿ. ಅವಲಕ್ಕಿರವರು ಕಾರ್ಯಕ್ರಮ ನಿರೂಪಿಸಿದರು ಮತ್ತು ಮುಂದಿನ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.



## ವಿಜಯಪುರ

* ಜಿಲ್ಲಾ ಸಂಸ್ಥೆ ವಿಜಯಪುರ 2024–25ನೇ ಸಾಲಿನ ಜಿಲ್ಲಾ ಮಟ್ಟದ ಸೇವಾ ಶಿಬಿರವನ್ನು ಜನವರಿ 13 ರಿಂದ 17ರ ವರೆಗೆ ಶ್ರೀ ಪುಂಡಲಿಂಗೇಶ್ವರ ಮಠ ಸುಕ್ಷೇತ್ರ ಗೋಳಸಾರ, ಇಂಡಿ ತಾಲ್ಲೂಕು ಇಲ್ಲಿ ನಡೆದ ಶ್ರೀ ಶ್ರೀ ಶ್ರೀ ಸದ್ಗುರು ಚಿನ್ಮಯಮೂರ್ತಿ ತ್ರಿಮೂರ್ತಿ ಮಹಾಶಿವಯೋಗಿಗಳ 31ನೇ ಪುಣ್ಯ ಸ್ಮರಣೆ ನಿಮಿತ್ಯವಾಗಿ ಆಯೋಜಿಸಲಾದ ಇಲ್ಲಿ ದೀಪೋತ್ಸವ ಹಾಗೂ ಉಚಿತ ಆರೋಗ್ಯ ಶಿಬಿರ ಮತ್ತು ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ 5 ದಿನಗಳ ಕಾಲ 48 ರೋವರ್ಸ್ ಮತ್ತು ರೇಂಜರ್ಸ್‌ಗಳು ಸೇವೆಯನ್ನು ಸಲ್ಲಿಸಿದರು. ಮಕ್ಕಳ ಸೇವೆಯನ್ನು ಮೆಚ್ಚಿದ ಶ್ರೀಮಠದ ಪೀಠಾಧಿಪತಿಗಳಾದ ಶ್ರೀಶ್ರೀಶ್ರೀ ಸದ್ಗುರು ಅಭಿನವ ಪುಂಡಲಿಂಗ ಮಹಾಶಿವಯೋಗಿಗಳು ಎಲ್ಲಾ ಮಕ್ಕಳಿಗೂ ಸನ್ಮಾನಿಸಿ ಗೌರವಿಸಿ ಆಶೀರ್ವಾದವನ್ನು ನೀಡಿದರು.

## ವಿಜಯನಗರ

* ಜನವರಿ 18 ರಂದು ಸ್ಥಳೀಯ ಸಂಸ್ಥೆ ಹೊಸಪೇಟೆ ಇವರಿಂದ ಒಂದು ದಿನದ ತಾಲೂಕು ಮಟ್ಟದ ಪ್ರಾರಂಭಿಕ ತರಬೇತಿ ಶಿಬಿರವನ್ನು ವಿವೇಕಾನಂದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹೊಸಪೇಟೆ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಶಿಬಿರದ ಉದ್ಘಾಟನೆಯನ್ನು ಶ್ರೀಮತಿ ಅನ್ನಪೂರ್ಣ ಸದಾಶಿವಮೂರ್ತಿ ಹಾಗೂ ಗಣ್ಯರು ಸಸಿಗೆ ನೀರೆಯುವುದರ ಮೂಲಕ ಉದ್ಘಾಟಿಸಿದರು. ಉದ್ಘಾಟಕರು ತಮ್ಮನುಡಿಗಳಲ್ಲಿ "ಈ ಸಂಸ್ಥೆಯು ಉತ್ತಮ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ, ಸೇವಾ ಮನೋಭಾವ, ಪ್ರಾಮಾಣಿಕತೆ ಇನ್ನಿತರ ಕೌಶಲ್ಯಗಳನ್ನು ಕಲಿಯುತ್ತಾರೆ" ಎಂದು ತಿಳಿಸಿದರು. ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಿಂದ ಆಗಮಿಸಿದ ಶಿಕ್ಷಣ ಸಂಯೋಜಕರಾದ ಶ್ರೀ ಶಿವರಾಮ್ ಇವರು ಮಾತನಾಡಿ "ಈ ಸಂಸ್ಥೆಯಲ್ಲಿ ರಾಜ್ಯ ಪುರಸ್ಕಾರ ರಾಷ್ಟ್ರಪತಿ ಪುರಸ್ಕಾರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಮಕ್ಕಳಿಗೆ ವೃತ್ತಿಪರ ಕೋರ್ಸ್‌ಗಳಿಗೆ ಮೀಸಲಾತಿ ಇದೆ. ಎಲ್ಲಾ ಶಾಲೆಗಳಲ್ಲಿ ದಳಗಳು ಪ್ರಾರಂಭಿಸಬೇಕು" ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಪಿ. ಮಂಜುನಾಥಪ್ಪ ಇವರು ಮಾತನಾಡಿ "ಇದು ಒಂದು ಅಂತರಾಷ್ಟ್ರೀಯ ಸಂಸ್ಥೆಯಾಗಿದೆ. ಇದರಿಂದ ಮಕ್ಕಳಲ್ಲಿ ಉತ್ತಮ ಭವಿಷ್ಯ ರೂಪಿಸಲು ಸಹಾಯಕವಾಗುತ್ತದೆ" ಎಂದು ತಿಳಿಸಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ರೇಣುಕಾ, ಡಿಟಿಸಿ ಗೈಡ್ ವಿಭಾಗ, ಶ್ರೀ ಸೈದುಲಸಾಹೇಬ್ ಮುಖ್ಯ ಗುರುಗಳು ವಿವೇಕಾನಂದ ಶಾಲೆ ಮತ್ತು ಶ್ರೀ ತಿಪ್ಪೇಸ್ವಾಮಿ ಹಾಜರಾಗಿದ್ದರು. ಈ ಕಾರ್ಯಕ್ರಮದ ನಿರೂಪಣೆಯನ್ನು ಸ್ಥಳೀಯ ಸಂಸ್ಥೆಯ ಖಜಾಂಚಿಯಾದ ಶ್ರೀ ಕೆ. ತಿಪ್ಪೇಸ್ವಾಮಿ ನೆರವೇರಿಸಿದರು. ಶ್ರೀ ತಿಪ್ಪೇಸ್ವಾಮಿಯವರು ವಂದನಾರ್ಪಣೆ ನೆರವೇರಿಸಿದರು.

ಉದ್ಘಾಟನಾ ಕಾರ್ಯಕ್ರಮದ ನಂತರ ಮೊದಲ ಅವಧಿಯಲ್ಲಿ ಶ್ರೀ ಮಂಜುನಾಥಪ್ಪ ಇವರು ಸ್ಕೌಟ್ ಗೈಡ್ಸ್ ಇತಿಹಾಸದ ಬಗ್ಗೆ ತಿಳಿಸಿದರು. ನಂತರ ಶ್ರೀ ತಿಪ್ಪೇಸ್ವಾಮಿರವರು ಸ್ಕೌಟ್–ಗೈಡ್ ವಿಭಾಗಗಳು ವಯೋಮಿತಿ ಬಗ್ಗೆ ತಿಳಿಸಿದರು. ಮೂರನೇ ಅವಧಿಯಲ್ಲಿ ಶ್ರೀ ರೇಣುಕಾರವರು ಸ್ಕೌಟ್–ಗೈಡ್ ಪ್ರತಿಜ್ಞೆ ನಿಯಮ ಪ್ರಾರ್ಥನೆ ಫ್ಲೋರ್ ಬಾಂಡ್ ತಿಳಿಸಿದರು.

ಮಧ್ಯಾಹ್ನದ ಅವಧಿಯಲ್ಲಿ ಶ್ರೀ ಪಿ. ಮಂಜುನಾಥಪ್ಪ ಇವರು ದಳಗಳನ್ನು ಶಾಲಾ ಹಂತದಲ್ಲಿ ಹೇಗೆ ಪ್ರಾರಂಭಿಸಬೇಕು, ಮತ್ತು ತರಬೇತಿ ಹಂತಗಳನ್ನು ತಿಳಿಸಿದರು. ಸಂಜೆ ಧ್ವಜಾವರೋಹಣ ಮಾಡಿ, ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ತರಬೇತಿ ಶಿಬಿರವನ್ನು ಮುಕ್ತಾಯ ಗೊಳಿಸಲಾಯಿತು. ಈ ಪ್ರಾರಂಭಿಕ ಶಿಬಿರದಲ್ಲಿ 25 ಜನ ಶಿಕ್ಷಕರು ಭಾಗವಹಿಸಿದ್ದರು.





# ಹೊರಸಂಚಾರಗಳಿಗೆ ಪ್ರಕೃತಿ ಒಡ್ಡುವ ಸವಾಲುಗಳು-4

## ಸಾಮಾನ್ಯ ಅಡುಗೆ ಜ್ಞಾನ : ಶಿಬಿರಾರ್ಥಿ ಆದ್ಯತೆ


– ಎಂ.ಎನ್. ಷಡಕ್ಷರಿ

ಜಿಲ್ಲಾ ಮುಖ್ಯ ಆಯುಕ್ತರು

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಚಿಕ್ಕಮಗಳೂರು




ಮಕ್ಕಳು ಶಿಬಿರ ಅಥವಾ ಪ್ರವಾಸಕ್ಕೆ ಹೋಗಿ ಬಂದಾಗ ಹೇಗಿತ್ತುಎಂದು ಕೇಳಿದರೆ ಊಟ ಚೆನ್ನಾಗಿತ್ತು ಅಥವಾ ಊಟ ಚೆನ್ನಾಗಿರಲಿಲ್ಲ ಎನ್ನುವುದು ಅವರ ಮೊದಲ ಉದ್ಗಾರ. ಅಂದರೆ ಮಕ್ಕಳು ಮನೆಯಿಂದ ಹೊರಬಂದಾಗ ಕನಿಷ್ಠ ತೃಪ್ತಿಯಾಗುವಂತಹ ಆಹಾರವನ್ನು ಇಷ್ಟ ಪಡುವುದು ಸ್ವಾಭಾವಿಕ ಹಾಗೂ ಇದರ ಬಗ್ಗೆ ಶಿಬಿರ ಸಂಯೋಜಕರು ನಿಗಾ ವಹಿಸುವ ಅವಶ್ಯಕತೆಯಿದೆ. **"The Best way to a person's heart is through his stomach"** ಅನ್ನುವ ಹಾಗೆ, ಎಲ್ಲರಿಗೂ ಹೊಟ್ಟೆ ತುಂಬ, ಕನಿಷ್ಠ ರುಚಿಯ ಆಹಾರದ ಅವಶ್ಯಕತೆಯಿದೆ.

ವಿಚಾರವಾದಿ, ಕರ್ನಾಟಕ ವಿಜ್ಞಾನ ಪರಿಷತ್ತಿನ ಅಧ್ಯಕ್ಷರಾಗಿದ್ದ ದಿ. ಹೆಚ್. ನರಸಿಂಹಯ್ಯನವರು, ಅಮೇರಿಕೆಗೆ ಸರಣಿ ಉಪನ್ಯಾಸಗಳಿಗಾಗಿ ತೆರಳಿದಾಗ, ಮೂರು ತಿಂಗಳು ಮೂರೂ ಹೊತ್ತು ಉಪ್ಪಿಟ್ಟು ತಿಂದು ಕಾಲ ಹಾಕಿದೆ ಎಂದು ಬರೆದುಕೊಳ್ಳುತ್ತಾರೆ. ಯಾರೋ ಮಜ್ಜಿಗೆ ಸಿಕ್ಕಲಿಲ್ಲ ಅಂತ ಅಮೇರಿಕಾದಿಂದ ವಾಪಾಸ್ಸು ಬಂದಿದ್ರು ಅಂತ ಕೇಳಿದ್ದೆ. ಇಷ್ಟೆಲ್ಲಾ ಹೇಳಿದ್ದು ಯಾಕೆ ಅಂದರೆ ಆಹಾರ ಕನಿಷ್ಠ ಅವಶ್ಯಕತೆಗಳಲ್ಲಿ ಒಂದು. ಹೀಗಾಗಿ ಎಳೆಯ ವಯಸ್ಸಿನಿಂದಲೇ ಅವಶ್ಯಕತೆಯಿದ್ದಾಗ ತಮ್ಮಆಹಾರದ ವ್ಯವಸ್ಥೆಯನ್ನು, (ಯಾರ ಮೇಲೂ ಅವಲಂಬಿಸದೆ) ತಾವೇ ಮಾಡಿಕೊಳ್ಳುವ ಜ್ಞಾನ ಅತ್ಯಂತ ಅವಶ್ಯಕ.

1987ರಲ್ಲಿ ಥೈಲಾಂಡಿನಲ್ಲಿ ಅಂತರರಾಷ್ಟ್ರೀಯ ಜಾಂಬೂರಿಗೆ ಹೋದಾಗ, "ಅರಣ್ಯದಲ್ಲಿ ಬದುಕುವ ಬಗೆ", (Survival in the Jungle) ಬೇಸ್‌ನಲ್ಲಿ, ಜೀವಂತ ಹಾವುಗಳನ್ನು ಹಿಡಿದು, ಕೊಂದು ಚರ್ಮ ಸುಲಿದು, ಶುದ್ಧಗೊಳಿಸಿ, ಬೇಯಿಸಿ ತಿನ್ನುವುದರ ಪ್ರಾತ್ಯಕ್ಷತೆ, ಪ್ರತಿಕೂಲ ಪರಿಸ್ಥಿತಿಯಲ್ಲಿ ಬದುಕಿ ಉಳಿಯುವ ವಿಧಾನವನ್ನು ತಿಳಿಸಲಾಯಿತು. ಹೊರಗಡೆ ಹೋದಾಗ ತಿನ್ನುವುದು ಕೇವಲ, ಹಸಿವಿಗೆ ಮಾತ್ರವಲ್ಲ, ಅದು ಒಂದು ಅನುಭವ! ದೇಹಕ್ಕೆ ಶಕ್ತಿ ನೀಡುವುದಲ್ಲದೆ, ಇಡೀ ದಿನದ ಆಯಾಸವನ್ನು ಮರೆಸುವ ಕ್ರಿಯೆ ಎನ್ನಬಹುದು.

ಒಬ್ಬ ಶಿಬಿರಾರ್ಥಿ/ಚಾರಣಿಗನ ಪ್ರಾಥಮಿಕ ಅವಶ್ಯಕತೆ, ತನ್ನ ಹೊಟ್ಟೆಯ ಅವಶ್ಯಕತೆಯನ್ನು ಸಮರ್ಥವಾಗಿ ನಿರ್ವಹಿಸುವುದು, ದೊರಕುವ ವಸ್ತುಗಳನ್ನು ಉಪಯೋಗಿಸಿಕೊಂಡು ಹೊಟ್ಟೆ ತುಂಬಿಸಿಕೊಳ್ಳುವುದರ ಜೊತೆಗೆ ಅದು ಶಿಬಿರದ ಒಂದು ಆಹ್ಲಾದಕರ ಚಟುವಟಿಕೆ ಎಂದುಕೊಳ್ಳಬೇಕು. ಒಳ್ಳೆಯ ಕ್ಯಾಂಪಿಗನಾಗಬೇಕಾದರೆ ಈ ಕೌಶಲ್ಯವನ್ನು ಮನೆಯಲ್ಲಿಅಭ್ಯಾಸ ಮಾಡುವುದು ಅತ್ಯಂತ ಅವಶ್ಯಕ. ಒಂದು ವಿಷಯ ಜ್ಞಾಪಕವಿರಲಿ, ಮನೆಯಲ್ಲಿ ಎಲ್ಲವೂ ಕೈಗೆ ಸಿಕ್ಕುತ್ತವೆ, ಆದರೆ ಶಿಬಿರಕ್ಕೆ ಹೋದಾಗ ಬೇಕಾಗುವ ಪ್ರತಿಯೊಂದು ಸಣ್ಣ ವಸ್ತುವನ್ನು ಪಟ್ಟಿ ಮಾಡಿ ಬೆನ್ನುಚೀಲದಲ್ಲಿ ಸೇರಿಸಿ ಬಿಡಬೇಕು, ಶಿಬಿರದಲ್ಲಿ ಉತ್ಪನ್ನವಾಗುವ ಗಟ್ಟಿ ತ್ಯಾಜ್ಯವನ್ನು ಸಂಗ್ರಹಿಸಿ ತರುವಚೀಲವೂ ಸೇರಿ.

ಜ್ಞಾಪಕವಿರಲಿ : ಅಡುಗೆ ಮಾಡುವುದು ಒಂದು ಸವಾಲು ಹಾಗೂ ಅತ್ಯಂತ ತೃಪ್ತಿತರುವ ಒಂದು ಶಿಬಿರದ ಪ್ರಕ್ರಿಯೆ. ನಾವು ಮಾಡಿದ್ದು ಹೇಗಿದ್ದರೂ ರುಚಿಯೇ!

### ಕೆಲವು ಪ್ರಮುಖ ವಿಷಯಗಳ ಬಗ್ಗೆ ಗಮನ ಅವಶ್ಯಕ

- ಮೊದಮೊದಲು ಸರಳವಾದ ಖಾದ್ಯಗಳಿಂದ ಪ್ರಾರಂಭ ಮಾಡಿ ನಂತರದ ಕ್ಯಾಂಪ್‌ಗಳಲ್ಲಿ ನಮ್ಮದೇ ಆದ ಹೊಸ ಪ್ರಯೋಗಗಳನ್ನು ಮಾಡಬಹುದು.
- ಬ್ರೆಡ್ ಸ್ಯಾಂಡ್ ವಿಚ್, ಆಮ್ಲೆಟ್, ನೂಡೆಲ್ಸ್, ಪಾಸ್ತ, ಸೀರಿಯಲ್ಸ್, ಅವಲಕ್ಕಿ ಇಂತಹವುಗಳಿಂದ ಪ್ರಾರಂಭಿಸಿ ಪಲಾವ್‌ಇತರೆ ಖಾದ್ಯಗಳನ್ನು ಪ್ರಯತ್ನ ಪಡಬಹುದು.
- ಮೂರು ಅಥವಾ ಹೆಚ್ಚು ದಿನಗಳ ಶಿಬಿರಗಳಲ್ಲಿ, ಖಡ್ಡಾಯವಾಗಿ ಹಣ್ಣುತರಕಾರಿ ಪ್ರತೀ ಹೊತ್ತಿನ ಭಾಗವಾಗುವುದು ಅತ್ಯಂತ ಅವಶ್ಯಕ (ಶಿಬಿರಗಳಲ್ಲಿ ಮಲಬದ್ಧತೆಯಾಗುವ ಸಾಧ್ಯತೆಗಳಿರುವುದರಿಂದ ಹೆಚ್ಚು ನಾರಿನ ಅಂಶ ಇರುವುದುಅವಶ್ಯಕ).
- ಅಲ್ಯುಮಿನಿಯಂ ಫಾಯಿಲ್ (ಸ್ವಲ್ಪದಪ್ಪದ್ದು)ನಲ್ಲಿ ಆಲೂಗೆಡ್ಡೆ, ತರಕಾರಿ, ಚಿಕನ್, ಮೀನು ಇಂತಹವುಗಳನ್ನು ಆವಿ ಹೊರಗೆ ಹೋಗದ ಹಾಗೆ ಸುತ್ತಲೂ ಮಡಿಸಿ ಕೆಂಡದ ಮೇಲೆ ಬೇಯಿಸಿ ಕೂಡಲೇ ತಿನ್ನಬಹುದು.
- ತರಕಾರಿ (ಟೊಮೊಟೊ, ಬೀಟ್‌ರೂಟ್, ಕ್ಯಾರೆಟ್, ಆಲೋಗೆಡ್ಡೆ, ಹೂಕೋಸು) ಅಥವಾ ಒಂದೇ ಗಾತ್ರಕ್ಕೆ ಕತ್ತರಿಸಿದ ಚಿಕನ್, ಮಟನ್ ತುಂಡುಗಳನ್ನು ಒಂದು ಉದ್ದನೆಯ ತಂತಿಗೆ ಪೋಣಿಸಿ, ಕೆಂಡದ ಮೇಲೆ ಬೇಯಿಸಿದರೆ ಕಬಾಬ್ ತಿನ್ನಲು ಬಹಳ ರುಚಿ. ಬೇಕೆಂದರೆ ಮಸಾಲೆ ಹಚ್ಚಿ ಬೇಯಿಸಿಬಹುದು. ಸ್ಟೀಲ್ ಜಾಲರಿಯ ಮೇಲೆ ತಿರುಗಿಸುತ್ತಾ ಬೇಯಿಸಿ ಬಾರ್ಬೆಕ್ಯೂ ಮಾಡಬಹುದು.
- ಕೋಸು, ಬೀನ್ಸ್, ಸೊಪ್ಪು ಮತ್ತಿತರ ತರಕಾರಿಯನ್ನು ಸಣ್ಣಗೆ ಹೆಚ್ಚಿ ಫ್ರೈ ಮಾಡಿ ಚಪಾತಿಯ ಜೂತೆ ತಿನ್ನಲುಚಂದ.
- ಪರ್ವತಾರೋಹಿಗಳು ಹಾಗೂ ಚಾರಣಿಗರು, ಚಪಾತಿ ಹಾಗೂ ಒಣ ಪಲ್ಯಗಳನ್ನು ಮೂರು ಹೊತ್ತು ಸೇವಿಸುವುದು ವಾಡಿಕೆ.
- ಒಣಗಿದ ದ್ರಾಕ್ಷಿ, ಬಾದಾಮಿ, ಗೋಡಂಬಿ, ಉತ್ತುತ್ತೆ ಮತ್ತಿತರ ತಿನಿಸುಗಳು (ಡ್ರೈ ಫ್ರೂಟ್ಸ್) ದೇಹಕ್ಕೆ ಹೆಚ್ಚು ಶಕ್ತಿ ನೀಡುತ್ತವೆ.
- ಶಿಬಿರದಲ್ಲಿ ಒಂದು ಪಾತ್ರೆಯಲ್ಲಿ ಯಾವಾಗಲೂ ಬಿಸಿ ನೀರಿರುವುದು ಸೂಕ್ತ, ಕಾರಣ, ಪಾತ್ರೆ ತೊಳೆಯಲು ಅಥವಾ ಚಳಿಯಲ್ಲಿ ಉಪಯೋಗಿಸಲು ಅನುಕೂಲ.
- ತೇವವಿದ್ದು, ಒಣಗಿದ ಸೌದೆ ಮತ್ತು ಕಡ್ಡಿಗಳು ಸಿಕ್ಕುವುದು ಕಷ್ಟವೆಂದಾಗ ಸಾಗಿಸಲು ಸುಲಭವಾದ ಗ್ಯಾಸ್ ಸ್ಟೌವ್‌ಗಳನ್ನು ಒಯ್ಯುವುದು ಅನುಕೂಲ (ಮೇಲೆ ಸ್ಟೌವ್‌ಗೆ ಅಂಟಿಕೊಂಡಿರುವ ಪುಟ್ಟ ಗ್ಯಾಸ್ ಸಿಲಿಂಡರ್‌ಗಳು ಅಂಗಡಿಗಳಲ್ಲಿ ಲಭ್ಯ).
- ಬ್ಯಾಕ್ ವುಡ್ಸ್‌ಮನ್ ಅಡುಗೆ ಸ್ಪರ್ದೆಗಳಲ್ಲಿ ಕೆಲವು ಬಾರಿ ಮಕ್ಕಳು ನಮಗೇ ಆಶ್ಚರ್ಯವಾಗುವಂತಹ ವಿಧಾನಗಳನ್ನು ಪ್ರಯೋಗಿಸಿದ್ದನ್ನು ಕಂಡಿದ್ದೇನೆ.
  - * ತೆಂಗಿನ ಚಿಪ್ಪಿಗೆ ಮಣ್ಣು ಮೆತ್ತಿ ಅನ್ನ ಬೇಯಿಸುವುದು
  - * ಕಾದ ಚಪ್ಪಟೆ ಕಲ್ಲಿನ ಮೇಲೆ ಮೊಟ್ಟೆ ಅಥವಾ ದೋಸೆ ಹಾಕುವುದು
  - * ಹಸಿ ಕಡ್ಡಿಗೆ ತರಕಾರಿ ಅಥವಾ ಮಾಂಸ ಸಿಕ್ಕಿಸಿ ಬೇಯಿಸುವುದು
  - * ಮೊಟ್ಟೆಗೆ ಮಣ್ಣು ಮೆತ್ತಿಕೆಂಡದಲ್ಲಿ ಬೇಯಿಸುವುದು
  - * ಕಾದಕಲ್ಲಿನ ಮೇಲೆ ಚಪಾತಿ ಅಥವಾ ಮೀನು ಬೇಯಿಸುವುದು, ಹೀಗೆ
- ಮಿಡತೆಗಳು, ಗೆದ್ದಲು ಹುಳುಗಳು, ಮಾತ್‌ಗಳು (ರಾತ್ರಿ ಚಿಟ್ಟೆಗಳು) ಕೆಂಜಿಗೆ ಇರುವೆಗಳು ಉತ್ತಮ ಪೌಷ್ಠಿಕಾಂಶ ಹೊಂದಿವೆ. ರೆಕ್ಕೆ ಮತ್ತು ಕಾಲು ತೆಗೆದು ಹುರಿದು ತಿನ್ನಬಹುದು-ಮಲೆನಾಡಿನಲ್ಲಿ ಕೆಂಪಿರುವೆಯ ಚಟ್ನಿಗೆ ಬಹಳ ಬೇಡಿಕೆ!
- ಸಮುದ್ರ ತೀರದಲ್ಲಿದ್ದರೆ, ಬಂಡೆಗಳ ಮೇಲೆ ಹೇರಳವಾಗಿ ದೊರೆಯುವ Mussels (ಮೃದ್ವಂಗಿ ಮತ್ತು ಕ್ಲಾಮ್‌ಗಳನ್ನು) ಹರಿತವಾದ ಚಾಕುವಿನಿಂದ ಬಂಡೆಯಿಂದ ಬೇರ್ಪಡಿಸಿ, ಬೇಯಿಸಿ ತಿನ್ನಬಹುದು,
- ಏಡಿಗಳು ಕೂಡ ಉತ್ತಮ ಆಹಾರವಾಗಬಹುದು

ಹಸಿದಾಗ ಏನಾದರೂ ತಿಂದು ಬದುಕಬಹುದು ಅಥವಾ ಬದುಕಲೇ ಬೇಕೆಂಬ ಆಸೆ ಮನುಷ್ಯನಿಗೆ ಸ್ವಲ್ಪ ಜಾಸ್ತಿಯೇ. ಹೊಟ್ಟೆಗಿಲ್ಲದೆ ಸಾಯುವ ಸ್ಥಿತಿ ಬಂದಾಗತನ್ನ ಕಟ್ಟುಪಾಡುಗಳನ್ನು ಮೀರಿ ಏನನ್ನಾದರೂ ತಿಂದು ಬದಕಲು ಪ್ರಯತ್ನ ಪಡುವ ಪ್ರಾಣಿ ಮನುಷ್ಯ ಮಾತ್ರ ಎನ್ನಿಸುತ್ತದೆ. ಹುಲಿ ಗಾಯಗೊಂಡು ಸಾಯುವ ಪರಿಸ್ಥಿತಿ ಬಂದರೂ ಹುಲ್ಲುತಿನ್ನಲಾರದು.

ನೆನಪಿರಲಿ: ಸ್ವಚ್ಛತೆಗೆ ಮೊದಲ ಆದ್ಯತೆ ನೀಡಬೇಕು, ಸೋಪಿನಲ್ಲಿ ಕೈ ತೊಳೆಯುವುದು ಮತ್ತು ಉಪಯೋಗಿಸುವ ಎಲ್ಲ ಪರಿಕರಗಳನ್ನು ಶುದ್ಧವಾಗಿಡುವುದು ಬಹಳ ಮುಖ್ಯ.

ಒಂದು ಅನುಭವ : 1987 ಥೈಲಾಂಡ್ ಜಾಂಬೂರಿ. ಸಂಜೆ ಹೊರ ದೇಶದ ತಂಡಗಳಿಗೆ ಕಡಲತೀರದಲ್ಲಿ ಒಂದು ಔತಣಕೂಟ. ಭಾರತವನ್ನು ಪ್ರತಿನಿಧಿಸಿದ ನಾವು ನಾಲ್ಕು ಮಂದಿ (ಮೂರು ಸಸ್ಯಾಹಾರಿ ಹುಡುಗರು ಮತ್ತು ನಾನು). ನಮ್ಮ ಟೇಬಲ್‌ನಲ್ಲೂ ಒಬ್ಬಳು Interpreter (ತರ್ಜುಮೆಗಾರ್ತಿ). ಒಂದಾದ ಮೇಲೊಂದು ಖಾದ್ಯಗಳು ಬರುತ್ತಿದ್ದವು. ಯಾವುದೋ ಒಂದು ಕರಿದ ಬೋಂಡಾದಂತದ್ದು ಸ್ವಲ್ಪ ತಿನ್ನುವ ಹಾಗಿತ್ತು ಅದನ್ನು ಸವಿಯುತ್ತಾ ನಾನು ಇದು ಏನು ಎಂದು ಕೇಳಿದೆ. ಆಕ್ಟೋಪಸ್ ಎಂದಳು! ಗೊತ್ತಾದ ಮೇಲೆ ತಿನ್ನುವುದು ಕಷ್ಟವಲ್ಲವೇ!

# ಶ್ರದ್ಧಾಂಜಲಿ



**ಶ್ರೀ ಅಬ್ದುಲ್ ಮಜೀದ್,** ಹೆಚ್.ಡಬ್ಲ್ಯೂ.ಬಿ. (ಸ್ಕೌ), ಸ್ಕೌಟ್ ಮಾಸ್ಟರ್, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪಾವೂರು, ದಕ್ಷಿಣ ಕನ್ನಡ ಜಿಲ್ಲೆ ಇವರು ಜನವರಿ 21, 2025 ರಂದು ಮಂಗಳೂರಿನಲ್ಲಿ ನಿಧನರಾದರು. ಇವರಿಗೆ 56 ವರ್ಷ ವಯಸ್ಸಾಗಿತ್ತು. ಇವರು ದಕ್ಷಿಣ ಕನ್ನಡ ಜಿಲ್ಲೆ ಉಳ್ಳಾಲ ಸ್ಥಳೀಯ ಸಂಸ್ಥೆಯಲ್ಲಿ ಹಲವು ವರ್ಷಗಳ ಕಾಲ ಕಾರ್ಯದರ್ಶಿಯಾಗಿ, ಪದಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು.



ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆಯ ಆನೇಕಲ್ ಸ್ಥಳೀಯ ಸಂಸ್ಥೆ ಸಹಾಯಕ ಜಿಲ್ಲಾ ಆಯುಕ್ತ ಹಾಗೂ ಸ್ವಾಮಿ ವಿವೇಕಾನಂದ ಗ್ರಾಮಾಂತರ ಪ್ರೌಢಶಾಲೆ, ಚಂದಾಪುರ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರಾಗಿದ್ದ **ಶ್ರೀ ಎಂ. ಮುನಿಸ್ವಾಮಿರೆಡ್ಡಿರವರು** ಜನವರಿ 17, 2025 ರಂದು ತಮ್ಮ ಸ್ವಗ್ರಾಮ ಮರಸೂರಿನಲ್ಲಿ ನಿಧನರಾದರು ಇವರಿಗೆ 82 ವರ್ಷ ವಯಸ್ಸಾಗಿತ್ತು.



**ಶ್ರೀ ಟಿ.ಎಸ್. ರವಿಶಂಕರ್,** ಜಿಲ್ಲಾ ಆಯುಕ್ತರು (ಸ್ಕೌಟ್), ಮೈಸೂರು ಜಿಲ್ಲಾ ಸಂಸ್ಥೆ ಇವರು ಜನವರಿ 27, 2025ರಂದು ಮೈಸೂರಿನಲ್ಲಿ ನಿಧನರಾದರು. ಇವರಿಗೆ 67 ವರ್ಷ ವಯಸ್ಸಾಗಿತ್ತು. ಶ್ರೀಯುತರು ತಮ್ಮ ವಿದ್ಯಾರ್ಥಿ ದಸೆಯಲ್ಲಿ ರಾಷ್ಟ್ರಪತಿ ಸ್ಕೌಟ್ ಪುರಸ್ಕಾರ ಪಡೆದಿದ್ದು ಸುಮಾರು 15 ವರ್ಷಗಳಿಂದ ಮೈಸೂರು ಜಿಲ್ಲಾ ಸಂಸ್ಥೆಯಲ್ಲಿ ಸಹಾಯಕ ಜಿಲ್ಲಾ ಆಯುಕ್ತರಾಗಿ ನಂತರ ಜಿಲ್ಲಾ ಸ್ಕೌಟ್ ಆಯುಕ್ತರಾಗಿ ಕಾರ್ಯನಿರ್ವಹಿಸಿದ್ದರು. ಇವರು ಮೈಸೂರಿನಲ್ಲಿ ನಡೆದ 17ನೇ ರಾಷ್ಟ್ರೀಯ ಜಾಂಬೂರಿಯಲ್ಲಿ ಸಕ್ರೀಯವಾಗಿ ಭಾಗವಹಿಸಿ ಕಾರ್ಯನಿರ್ವಹಿಸಿದ್ದರು.



ಬಾಗಲಕೋಟೆ ಜಿಲ್ಲಾ ಸಂಸ್ಥೆಯ ಮಾಜಿ ಜಿಲ್ಲಾ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಸಾವಳಗಿ ಇವರ ಮಾತೃಶ್ರೀಯವರಾದ **ಶ್ರೀಮತಿ ಪಾರ್ವತಿ ಅಣ್ಣಪ್ಪಾ** ಸಾವಳಗಿ ಇವರು ಡಿಸೆಂಬರ್ 26 2025 ರಂದು ಬಾಗಲಕೋಟೆಯಲ್ಲಿ ನಿಧನರಾದರು. ಇವರಿಗೆ 83 ವರ್ಷ ವಯಸ್ಸಾಗಿತ್ತು.



ದಕ್ಷಿಣ ಕನ್ನಡ ತರಬೇತಿ ಆಯುಕ್ತರಾದ ಶ್ರೀಮತಿ ಜಯಶ್ರೀ ಎಲ್.ಟಿ.(ಗೈ) ಇವರ ಮಾತೃಶ್ರೀಯವರಾದ **ಶ್ರೀಮತಿ ಕಮಲ** ಇವರು ಡಿಸೆಂಬರ್ 13, 2024 ರಂದು ಮಂಗಳೂರಿನಲ್ಲಿ ನಿಧನರಾದರು. ಇವರಿಗೆ 78 ವರ್ಷ ವಯಸ್ಸಾಗಿತ್ತು.



ಚಿತ್ರದುರ್ಗ ಎಸ್.ಆರ್.ಎಸ್. ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರು ಮತ್ತು ಎಸ್.ಆರ್.ಇ ಟ್ರಾವೆಲ್ಸ್‌ನ ಮಾಲೀಕರು ಹಾಗೂ ಚಿತ್ರದುರ್ಗ ಜಿಲ್ಲಾ ಕಾರ್ಯದರ್ಶಿ ಶೀ ಬಿ.ಎ. ಲಿಂಗಾರೆಡ್ಡಿಯವರ ಮಾತೃಶ್ರೀಯವರಾದ **ಶ್ರೀಮತಿ ಕೃಷ್ಣಮ್ಮನವರು** ಜನವರಿ 16, 2025 ರಂದು ಚಿತ್ರದುರ್ಗದಲ್ಲಿ ನಿಧನರಾದರು. ಇವರಿಗೆ 92 ವರ್ಷ ವಯಸ್ಸಾಗಿತ್ತು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ



ಜನವರಿ 26 ರಂದು ರಾಯಚೂರು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಥಸಂಚಲನದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ಎರಡನೇ ಸ್ಥಾನ ಪಡೆದ ಜಹೀರಾಹಾದ್ ಸರ್ಕಾರಿ ಪ್ರೌಢಶಾಲೆಯ ಗೈಡ್ಸ್ ತಂಡಕ್ಕೆ ಮಾನ್ಯ ವೈದ್ಯಕೀಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶರಣಪ್ರಕಾಶ್ ಪಾಟೀಲ್ ಅವರು ಬಹುಮಾನವನ್ನು ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಡಾ॥ ಎಸ್. ಶಿವರಾಜ್ ಪಾಟೀಲ್, ಮಾನ್ಯ ಶಾಸಕರು ಶ್ರೀ ಬಸವನಗೌಡ ದದ್ದಲ್, ಮಾನ್ಯ ಅಧ್ಯಕ್ಷರು, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು ಹಾಗೂ ಶಾಸಕರು ರಾಯಚೂರು ಗ್ರಾಮಾಂತರ, ಶ್ರೀ ನಿತೀಶ್ ಕೆ. ಮಾನ್ಯ ಜಿಲ್ಲಾಧಿಕಾರಿಗಳು, ಶ್ರೀ ಪಾಂಡ್ಯ ರಾಹುಲ್ ತುಕಾರಂ, ಸಿ.ಇ.ಓ. ಜಿಲ್ಲಾ ಪಂಚಾಯತ್ ಶ್ರೀ ಪುಟ್ಟಮಾದಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಇತರರು ಭಾಗವಹಿಸಿದ್ದರು.



ಬೀದರ ಜಿಲ್ಲಾಡಳಿತ ವತಿಯಿಂದ 76ನೇ ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಮಾನ್ಯ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರು ಶ್ರೀ ಈಶ್ವರ್ ಬಿ. ಖಂಡ್ರೆ ಅವರು ಫಥಚಲನದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ ಸ್ಕೌಟ್ ತಂಡಕ್ಕೆ ಪ್ರಮಾಣಪತ್ರವನ್ನು ನೀಡಿ ಗೌರವಿಸಿದರು. ಚಿತ್ರದಲ್ಲಿ ಶ್ರೀ ಸಾಗರ ಈಶ್ವರ್ ಖಂಡ್ರೆ, ಮಾನ್ಯ ಲೋಕಸಭಾ ಸದಸ್ಯರು, ಶ್ರೀಮತಿ ಶಿಲ್ಪಾ ಶರ್ಮಾ, ಜಿಲ್ಲಾಧಿಕಾರಿಗಳು, ಡಾ. ಗಿರೀಶ್ ದಿಲೀಪ್ .ಬಿ, ಸಿ.ಇ.ಓ., ಜಿಲ್ಲಾ ಪಂಚಾಯತ್, ಶ್ರೀ ಪ್ರದೀಪ್ ಗುಂಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಶ್ರೀ ಸಲೀಮ್ ಪಾಷ, ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಶ್ರೀ ಚಂದ್ರಕಾಂತ ಶಾಹಬಾದ್‌ಕರ್, ಉಪನಿರ್ದೇಶಕರು ಪ.ಪೂ ಶಿಕ್ಷಣ ಇಲಾಖೆ, ಶ್ರೀ ಟಿ.ಆರ್. ದೊಡ್ಡೆ, ಬಿ.ಇ.ಓ., ಡಾ. ಎಚ್.ಬಿ. ಭರಶೆಟ್ಟಿ, ಜಿಲ್ಲಾ ಆಯುಕ್ತರು (ಸ್ಕೌ) ಇತರರು ಭಾಗವಹಿಸಿದ್ದರು.




ಮಂಡ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಥಸಂಚಲದಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದ ಗೈಡ್ಸ್ ತಂಡಕ್ಕೆ ಮಾನ್ಯ ಕೃಷಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎನ್. ಚಲುವರಾಮಸ್ವಾಮಿ ಅವರು ಬಹುಮಾನ ನೀಡಿದ ಗೌರವಿಸಿದರು. ಮಾನ್ಯ ಶಾಸಕರಾದ ಶ್ರೀ ಪಿ. ರವಿಕುಮಾರ್ ಗಾಣಿಗ ಇತರರು ಉಪಸ್ಥಿತರಿದ್ದರು.



ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಥಸಂಚಲನದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶ ನೀಡಿದ ಸ್ಕೌಟ್ಸ್–ಗೈಡ್ಸ್ ತಂಡಗಳಿಗೆ ಮಾನ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಚಿವರಾದ ಶ್ರೀ ಶಿವರಾಜ್ ತಂಗಡಗಿ ಅವರು ಬಹುಮಾನ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಮಾನ್ಯ ಶಾಸಕರಾದ ಶ್ರೀ ರಾಘವೇಂದ್ರ ಹಿಟ್ನಾಳ್, ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ರಾಹುಲ್ ರತ್ನಂ ಪಾಂಡೆ ನಗರ ಸಭೆ ಅಧ್ಯಕ್ಷರಾದ ಶ್ರೀ ಅಮಜ್ಜದ್ ಪಟೇಲ್ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀರಾವ್ ಅರಸಿದ್ಧಿ, ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಸಿದ್ಧರಾಮೇಶ್ವರ್ ಇತರರು ಚಿತ್ರದಲ್ಲಿದ್ದಾರೆ.




ಜನವರಿ 06 ರಿಂದ 10ರ ವರೆಗೆ ಧಾರವಾಡದ ಜಿಲ್ಲಾ ತರಬೇತಿ ಕೇಂದ್ರದಲ್ಲಿ ಏರ್ಪಡಿಸಿದ್ದ ಕಿತ್ತೂರು ಕರ್ನಾಟಕ ಪ್ರಥಮ ಜಾಂಬೋರೇಟ್–2025ರ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾನ್ಯ ವಿಧಾನ ಪರಿಷತ್ತಿನ ಸಭಾಧ್ಯಕ್ಷರಾದ ಶ್ರೀ ಬಸವರಾಜ ಹೊರಟ್ಟಿ ಹಾಗೂ ಮಾನ್ಯ ಶಾಸಕರಾದ ಶ್ರೀ ಎನ್.ಹೆಚ್. ಕೋನರೆಡ್ಡಿ, ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಡಾ. ಬಿ.ಕೆ.ಎಸ್. ವರ್ಧನ್, ನಿರ್ದೇಶಕರು, ಸಿಸ್ಲೆಪ್, ಧಾರವಾಡ, ಶ್ರೀ ಗಜಾನನ ಮನ್ನಿಕೇರಿ, ರಾಜ್ಯ ಉಪಾಧ್ಯಕ್ಷರು, ಜಿಲ್ಲಾ ಮುಖ್ಯ ಆಯುಕ್ತರುಗಳಾದ ಶ್ರೀ ಶ್ರೀಶೈಲ ಕರೀಕಟ್ಟಿ, ಶ್ರೀ ಇಂದ್ರಾಳಿ ಜಯಕರ ಶೆಟ್ಟಿ, ಉಡುಪಿ, ಶ್ರೀ ಸಿದ್ದಣ್ಣ ಸಕ್ರಿ, ವಿಜಯಪುರ, ಶ್ರೀ ವಿ.ಎಚ್. ಭಟ್ಕಳ್, ಶಿರಸಿ, ಶ್ರೀ ಎಂ. ಪ್ರಭಾಕರಭಟ್, ಎಸ್.ಓ.ಸಿ(ಎಸ್), ಶ್ರೀಮತಿ ಮಂಜುಳಾ ಸಿ., ಎಸ್.ಓ.ಸಿ(ಗೈ) ಮತ್ತು ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.



ಜನವರಿ 17 ರಿಂದ 21ರ ವರೆಗೆ ಯಾದಗಿರಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಕಲ್ಯಾಣ ಕರ್ನಾಟಕ 2ನೇ ಜಾಂಬೋರೇಟ್‌ನ ಉದ್ಘಾಟನೆಯನ್ನು ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶರಣಬಸಪ್ಪಗೌಡ ದರ್ಶನಾಪುರ್ ಅವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮಾನ್ಯ ಶಾಸಕರಾದ ಶ್ರೀ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ, ಮಾಜಿ ಸಚಿವರು ಹಾಗೂ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಲವೀಶ್ ಒರಡಿಯಾ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಅಧ್ಯಕ್ಷರಾದ ಶ್ರೀ ಸುರೇಶ್ ಆರ್. ಸಜ್ಜನ್, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಚನ್ನಬಸಪ್ಪ ಮುಧೋಳ್, ರಾಜ್ಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಎಚ್.ಎಮ್. ಸಿದ್ಧರಾಮಸ್ವಾಮಿ, ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 36)

SHAHEEN
GROUP OF INSTITUTIONS

35 Years of SHAPING FUTURE WITH EXCELLENCE

COURSES OFFERED

- CLASS XI-XII/PUC (SCIENCE) INTEGRATED WITH NEET/JEE
- CLASS XI-XII/PUC (ARTS) INTEGRATED WITH UPSC/CLAT
- CLASS XI-XII/PUC (COMMERCE) INTEGRATED WITH CA FOUNDATION
- NEET LONG TERM REPEATERS BATCH
- PRE CUM MAINS UPSC FOR GRADUATES ONE YEAR EXCLUSIVE UPSC COURSE

- BA – Integrated with UPSC
- B.Sc – Integrated with UPSC
- B.Com – Integrated with UPSC
- BCA – Integrated with UPSC
- Diploma in AI and Machine Learning
- Diploma in Journalism
- Diploma in Industrial Accounting and Business Leadership
- Diploma in Islamic Studies and Hospitality Management

Head Office: Shaheen Nagar, BIDAR-585403.
www.shaheengroup.org
1800 121 6235

If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.org

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26